ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಶಿರಸಿ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು

**ಪದ್ಮಾಕರ ಮಡಗಾಂವಕರ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೬೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**SIRSI:** An Introducing Book on the Places in Karnataka that Played a Major Role in the Freedom Struggle, Written by Padmakar Madagavkar, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಪದ್ಮಾಕರ ಮಡಗಾಂವಕರ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೭೨

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001

ಸ್ವಾತಂತ್ರ್ಯದ ಅಮೃತಮಹೋತ್ಸವ



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**


ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಸ್ವಾತಂತ್ರ್ಯ ಚಳುವಳಿ ಎಂದರೇನು? ಅದು ನಡೆದ ಬಗೆ ಹೇಗೆ? ನಮ್ಮ ಹಿರಿಯರು ಅದನ್ನು ಯೋಜಿಸಿ–ರೂಪಿಸಿ–ನಿರ್ವಹಿಸಿದ ಬಗೆಯನ್ನು ಪರಿಚಯಿಸುವಾಗ ಕ್ರಿ.ಶ. ೧೯೨೦ ರಿಂದ ೧೯೪೫ರ ತನಕ ನಮ್ಮಲ್ಲಿ ನಡೆದ ವಿವಿಧ ಘಟನೆಗಳನ್ನೇ ಆಧಾರವಾಗಿ ಇಟ್ಟುಕೊಂಡು ಸ್ವಾತಂತ್ರ್ಯ ಚಳವಳಿಯ ಉದ್ದೇಶ ಹಾಗೂ ಸಫಲತೆಯ ಪರಿಚಯವನ್ನು ತಮಗೆ ಮಾಡಿ ಕೊಡುತ್ತಿರುವೆನು.

ಐತಿಹಾಸಿಕ ಸಾಕ್ಷ್ಯಗಳನ್ನು ಸಂರಕ್ಷಿಸಲಾಗದಿದ್ದರೂ ಅವು ಕ್ಷೀಣಿಸುವ ಅಥವಾ ನಾಶವಾಗುವ ಪೂರ್ವದಲ್ಲಿಯೇ ಅವುಗಳ ಅಲ್ಪ ಮಾಹಿತಿಯನ್ನಾದರೂ ನಾವು ದಾಖಲಿಸಿ ಇಟ್ಟರೆ ಮುಂದಿನ ಪೀಳಿಗೆಗೆ ಹಿಂದಿನ ಸಂಗತಿ, ಸನ್ನಿವೇಶ ಹಾಗೂ ಘಟನೆಗಳ ಮಾಹಿತಿ ದೊರೆತು ಅನುಭವಗಳ ಹಸ್ತಾಂತರವಾಗುವುದು. ಭಾರತದಲ್ಲಿ ಸ್ವಾತಂತ್ರ್ಯ ಚಳವಳಿ ೧೯೨೦ರ ಸುಮಾರಿಗೆ ಪ್ರಾರಂಭವಾಯಿತು, ಮುಂದೆ ೨೫ ವರ್ಷಕ್ಕೂ ಹೆಚ್ಚು ಕಾಲ ಜರುಗಿತು, ಎಂದರೆ ೧೦೦ ವರ್ಷಗಳ ಹಿಂದಿನ ಸಂಗತಿಗಳನ್ನು ದಾಖಲಿಸದಿರುವದು ದುರದೃಷ್ಟಕರ.

ಈ ವರ್ಷ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸಲು ನಮ್ಮ ಸರಕಾರ ಮುಂದಾಗಿದೆ. ಈ ಸಮಯದಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯು ಹಲವು ಹೊತ್ತಿಗೆಗಳನ್ನು ಹೊರೆತರಲು ಪ್ರಯತ್ನಿಸುತ್ತಿರುವದು ತುಂಬಾ ಶ್ಲಾಘನೀಯ. ಈಗಲಾದರೂ ಭಾರತ ಸ್ವಾತಂತ್ರ್ಯ ಸಂಗ್ರಾಮದ ದಾಖಲಾತಿಯಾಗಿ ಮುಂದಿನ ಪೀಳಿಗೆಗೆ ಅನುಭವದ ಹಸ್ತಾಂತರವಾಗಲೆಂದು ಹಾರೈಸುವೆ, ನನಗೆ ಈ ಪುಸ್ತಕ ಬರೆಯಲು ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು.

**ಶ್ರೀ ಪದ್ಮಾಕರ ಮಡಗಾಂವಕರ**

ಬಿಳಗಿ, ಉತ್ತರ ಕನ್ನಡ
೨೭/೧೨/೨೦೨೧

# ಪರಿವಿಡಿ


ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೦
**ಸಿರಸಿ–ಸಿದ್ದಾಪುರ ತಾಲೂಕುಗಳಲ್ಲಿ ಸ್ವಾತಂತ್ರ್ಯ ಚಳವಳಿ** ೧೩
ಭಾಗ ೦೧:
**ಸಿರಸಿ–ಸಿದ್ದಾಪುರ ತಾಲೂಕುಗಳಲ್ಲಿ ಸ್ವಾತಂತ್ರ್ಯ ಚಳವಳಿ** ೧೩
ಭಾಗ ೦೨:
**ಸಿರಸಿ–ಸಿದ್ದಾಪುರಕ್ಕೆ ರಾಷ್ಟ್ರೀಯ ನಾಯಕರ ಆಗಮನ–**
**ಸಂಪರ್ಕ–ಸಲಹೆ–ಸಹಾಯ ಹತ್ತು ಮಹನೀಯರ ವಿವರ** ೪೨
ಭಾಗ ೦೩:
**ಮರೆಯಲಾಗದ ಮಹಾನುಭಾವರು ಎಂಟು ಮಹನೀಯರ**
**ಪರಿಚಯ** ೪೭
ಆಧಾರ ಗ್ರಂಥಗಳು ೬೬
**ಅನುಬಂಧ**
ಛಾಯಾಚಿತ್ರಗಳು ೬೭
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೮

# ಸಿರಸಿ–ಸಿದ್ದಾಪುರ ತಾಲೂಕುಗಳಲ್ಲಿ ಸ್ವಾತಂತ್ರ್ಯ ಚಳವಳಿ

## ಭಾಗ – ೧

೧೯೧೪ರಲ್ಲಿ ಬ್ರಿಟಿಷ್ ಸರಕಾರ ಉತ್ತರ ಕನ್ನಡ ಜಿಲ್ಲೆಯನ್ನು ಅರಣ್ಯ ಇಲಾಖೆಗೆ ಒಪ್ಪಿಸಿತ್ತು. ಈ ಜಿಲ್ಲೆಯಲ್ಲಿ ಹೆಚ್ಚಾಗಿ ಅರಣ್ಯವನ್ನೇ ಬೆಳೆಸಬೇಕೆಂಬ ಉದ್ದೇಶದಿಂದ ಫಾರೆಸ್ಟ್ ಕಾಯ್ದೆಗಳನ್ನು ತುಂಬಾ ಬಿಗಿ ಮಾಡಿತು. ಅದರಂತೆ ಆ ಸಮಯಕ್ಕೆ ಯಾವನೊಬ್ಬನೂ ಫಾರೆಸ್ಟ್ ಗಾರ್ಡ್‌ನ ಅನುಮತಿ ಪಡೆಯದೆ ಮೈನರ್ ಜಂಗಲ್‌ನಿಂದ ಉರುವಲು ಕಟ್ಟಿಗೆ, ಸಪ್ಪು ವಗೈರೆ ತುರುವಂತಿರಲಿಲ್ಲ. ಕತ್ತಿ, ಕೊಡಲಿ, ಹಗ್ಗ ಹಿಡಿದು ಅರಣ್ಯ ರಸ್ತೆಯಲ್ಲಿ ಯರೂ ಓಡಾಡುವಂತಿರಲಿಲ್ಲ. ಸ್ವಂತ ಭೂಮಿಯಿಂದ ಕಟ್ಟಿಗೆ, ಸೊಪ್ಪು–ಸದೆ ರೈತರು ತಮ್ಮ ಮನೆಗೆ ಒಯ್ಯುವದಾದರೆ ರಸ್ತೆ ಅರಣ್ಯ ಪ್ರದೇಶದಿಂದ ಹಾದು ಹೋಗುವಂತ್ತಿದ್ದರೆ ಫಾರೆಸ್ಟ್ ಗಾರ್ಡ್‌ರಿಗೆ ತಿಳಿಸಿಯೇ ಮನೆಗೆ ಒಯ್ಯ ಬೇಕಾಗಿತ್ತು. ಅದಕ್ಕೆ ತಪ್ಪಿದರೆ ಫಾರೆಸ್ಟ್ ಗಾರ್ಡ್ ವಿಧಿಸಿದ ದಂಡ ಅರಣ್ಯ ಇಲಾಖೆಗೆ ಪಾವತಿಸಬೇಕಾಗಿತ್ತು.

ರೈತರಿಗೆ ಪ್ರತಿದಿನ ಬೇಕಾಗುವ ಕಟ್ಟಿಗೆ, ತೋಟ–ಗದ್ದೆಗಳಿಗೆ ಗೊಬ್ಬರ ಹಾಕಲು ತಯಾರಿಕೆಗೆ ಬೇಕಾದ ಸೊಪ್ಪು ತರುವುದನ್ನು ಸರಕಾರ ನಿರ್ಬಂಧಿಸಿತ್ತು. ಬೇಸಾಯಕ್ಕೆ, ನಿತ್ಯ ಜೀವನಕ್ಕೆ ಅತೀವ ತೊಂದರೆಯಾಗುವದಲ್ಲದೆ ಜೀವನ ಅಳಿವು–ಉಳಿವಿನ ಪ್ರಶ್ನೆಯಾಗಿ ಪರಿಣಮಿಸಿತು. ಅಡಿಕೆ ತೋಟಗಳಿಗೆ, ಪೈರು ಬೆಳೆಯುವ ಗದ್ದೆಗಳಿಗೆ ಗೊಬ್ಬರ ಕೊಡದೆ ಬೆಳೆ ಪಡೆಯುವುದು ಹೇಗೆ? ಗದ್ದೆ–ತೋಟಗಳ ಸಮೀಪ ಅರಣ್ಯವೆ ಬೆಳೆದರೆ ಕಾಡು ಪ್ರಾಣಿಗಳಿಂದ ಬೆಳೆ ರಕ್ಷಣೆ ಮಾಡುವದು ಹೇಗೆ? ಎಂಬ ಪ್ರಶ್ನೆ ಎಲ್ಲರನ್ನೂ ಕಾಡುವಂತಾಯಿತು.

## ಅಧ್ಯಾಯ–೧

ಅರಣ್ಯ ನಿಯಮಗಳನ್ನು ಸಡಿಲಿಸುವಂತೆ ಸಿರಸಿಯಲ್ಲಿ ಅಲ್ಲಿಯ ಪ್ರಮುಖ ವಕೀಲರಾದ ಶ್ರೀ ವಾಸುದೇವರಾವ್ ಕೊಲ್ಹಾಳಿಯವರ ಮುಖಂಡತ್ವದಲ್ಲಿ ರೈತರ ವನದುಃಖ ಸಭೆ ೧೯೧೬ ರ ಜನವರಿಯಲ್ಲಿ ನಡೆಯಿತು. ಅದರ ಠರಾವುಗಳನ್ನು ಸೂಕ್ತ ಪ್ರತಿನಿಧಿಗಳ ಮೂಲಕ ಸರಕಾರಿ ಅಧಿಕಾರಿಗಳ ಮುಂದೆ ಮಂಡಿಸಿದಾಗ ಕೆಲ ಸವಲತ್ತುಗಳು ಸಿರಸಿ ತಾಲ್ಲೂಕು ರೈತರಿಗೆ ದೊರೆತವು.

ಇದರಿಂದ ಪ್ರೇರಿತರಾದ ಸಿದ್ದಾಪುರ ತಾಲ್ಲೂಕು ರೈತರ ಸಭೆ ಬಿಳಗಿಯ ಮೂಡ್ಲಗಿರಿ ಪಟಾಂಗಣದಲ್ಲಿ ೧೬ ಡಿಸೆಂಬರ ೧೯೧೬ರಂದು ಸೇರಿತು. ಮೂಡ್ಲಗಿರಿ ಶ್ರೀ ನಾರಾಯಣ ಲಕ್ಷಣ ಪೈಯವರು ಮುಖಂಡತ್ವ ವಹಿಸಿದ್ದರು. ಸಿರಸಿ ರೈತರಿಗೆ ದೊರೆತ ಸೌಲತ್ತುಗಳನ್ನು ಸಿದ್ದಾಪುರ ತಾಲ್ಲೂಕು ರೈತರಿಗೂ ನೀಡಬೇಕೆಂದು ಠರಾಯಿಸಿ, ಅರಣ್ಯ ಇಲಾಖೆಯ ಮುಖ್ಯಸ್ಥರಿಗೆ ಮನವಿ ತಲುಪಿಸಲಾಯಿತು. ಮುಂದೆ ಒಂದು ವರ್ಷ ಕಳೆದರೂ ಅರಣ್ಯ ಇಲಾಖೆ ಪ್ರತಿಕ್ರಿಯಿಸದ್ದರಿಂದ ಪುನಃ ೧೯೧೭ರ ಡಿಸೆಂಬರದಲ್ಲಿ ಬಿಳಗಿಯಲ್ಲಿ ಎರಡನೇ ವನದುಃಖ ಸಭೆ ಶ್ರೀ ವಾಮನ ದಾಸಪ್ಪ ಶಣೈಯವರ ಮುಖಂಡತ್ವದಲ್ಲಿ ಜರುಗಿತು. ಸರಕಾರದ ನಿಯಮದಡಿಯಲ್ಲಿಯೇ ಸಿದ್ದಾಪುರ ತಾಲ್ಲೂಕು ರೈತರಿಗೆ ಕೆಲ ಸೌಲತ್ತುಗಳನ್ನು ಒದಗಿಸಬೇಕೆಂದು ಠರಾವು ಮಾಡಿ ಮನವಿಯನ್ನು ತಯಾರಿಸಿ ಹೊನ್ನಾವರದಲ್ಲಿ ಜಿಲ್ಲಾಧಿಕಾರಿಗಳನ್ನು ಕಂಡು ಮನವಿ ಅರ್ಪಿಸಿತು. ಆ ಸಮಯಕ್ಕೆ ಸಿರಸಿಯ ವಕೀಲರಾದ ಶ್ರೀ ವಾಸುದೇವರಾವ್ ಕೊಲ್ಹಾಳಿಯವರು ಅಲ್ಲಿ ಉಪಸ್ಥಿತರಿದ್ದರು.

## ಅಧ್ಯಾಯ–೨

ಸರಕಾರ ಆ ಮೊದಲೇ ನಿರ್ಣಯಿಸಿದಂತೆ ಒಂದು ಎಕರೆ ಅಡಿಕೆ ತೋಟಕ್ಕೆ ಏಳು ಎಕರೆ ಬೆಟ್ಟ ಮೈನರ್ ಜಂಗಲ್‌ದಿಂದ ಬಿಡುಗಡೆ ಮಾಡುವ ಸಂಗತಿಯನ್ನು ಜಿಲ್ಲಾಧಿಕಾರಿಗಳು ಶಿಷ್ಟಮಂಡಲಕ್ಕೆ ತಿಳಿಸಿದರು. ತೋಟದ ಬೆಟ್ಟದಿಂದ ರೈತರು ಉರುವಲು ಕಟ್ಟಿಗೆ, ಸೊಪ್ಪು ತರಬಹುದು ಆದರೆ ಮರ ಕಡಿಯುವಂತಿಲ್ಲ ಎಂದು ತಿಳಿಸಿದರು.



ರೈತರ ದನ–ಕರು, ಎತ್ತು–ಎಮ್ಮೆ–ಕುರಿಗಳು ತೋಟದ ಬೆಟ್ಟವಲ್ಲದೆ ಸರಕಾರಿ ಅರಣ್ಯದ ಇತರ ಭಾಗಗಳಲ್ಲಿ ಹುಲ್ಲು–ಸೊಪ್ಪು ಮೇಯುವುದರಿಂದ ಸರಕಾರಕ್ಕೆ ಭೂಕಂದಾಯ ಸಂಗಡ 'ಹುಲ್ಲು ಬನ್ನಿ' ಕರ ಕೊಡ ಬೇಕಾಗುವುದೆಂಬ ಸಂಗತಿ ತಿಳಿಸಲೇ ಇಲ್ಲ. ಒಂದು ಪ್ರಾಯಸ್ತ ಜಾನುವಾರಿಗೆ ನಾಲ್ಕು ಆಣೆಯಂತೆ, ಅಪ್ರಾಯಸ್ತ ಜಾನುವಾರು ಒಂದಕ್ಕೆ ಎರಡು ಆಣೆಯಂತೆ ಪ್ರತಿವರ್ಷ 'ಹುಲ್ಲು ಬನ್ನಿ' ಕೊಡಬೇಕೆಂದೂ ಹಾಗೂ ಅವಧಿ ಮೀರಿದ ಕರಕ್ಕೆ ದಂಡ ಸಮೇತ ಕೊಡಬೇಕೆಂದು ನಿಯಮ ವಿಧಿಸಿದ್ದರು. ೧೯೧೫ರಿಂದ ಭೂಕಂದಾಯ ಏರಿಸಿದ ಸಂಗತಿಯನ್ನು ಜಿಲ್ಲಾಧಿಕಾರಿಗಳು ಮರೆಮಾಚಿ ಶಿಷ್ಟಮಂಡಲದೊಡನೆ ಮಾತನಾಡಿದರು.

ಈ ಮೇಲಿನ ಎರಡೂ ಸಂಗತಿಗಳು ಬ್ರಿಟಿಷ್ ಅಧಿಕಾರಿಗಳ ಒಡೆದು ಆಳುವ ನೀತಿಯನ್ನು ತೋರಿಸುತ್ತಿವೆ. ೧೯೨೦–೧೯೨೧ರಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಮಿಸ್ಟರ್ ಹೇಗ್ ಎಂಬುವವರು ಜಿಲ್ಲಾಧಿಕಾರಿಗಳಾಗಿದ್ದರು. ಅವರು ಬೆಂಗಳೂರಿನ ಪಾದ್ರಿಯೋರ್ವರ ಮಗನಾಗಿದ್ದು ಕನ್ನಡ ಚೆನ್ನಾಗಿ ಮಾತಾನಾಡುತ್ತಿದ್ದರು. ಜನರೊಡನೆ ಸರಿಯಾಗಿ ವರ್ತಿಸುತ್ತಿದ್ದರು. ಆದರೆ ಸರಕಾರಿ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವಾಗ ಅವರ ವರ್ತನೆ ಬೇರೆಯಾಗುತ್ತಿತ್ತು.

ಬೆಟ್ಟ, ಕಾಡು, ಗುಡ್ಡಗಳಲ್ಲಿ ತನ್ನಿಂದ ತಾನೆ ಬೆಳೆಯುವ ಹುಲ್ಲು–ಸೊಪ್ಪು ದನ–ಕರುಗಳು ಮೇಯಲು ಸರಕಾರದ ಅನುಮತಿ ಏಕೆ ಬೇಕು? ಅದೇ ಕಾಡು ಬೆಟ್ಟಗಳಲ್ಲಿ ಹುಟ್ಟಿ ಬೆಳೆದ ನಾವು ಪರದೇಶದವರಿಗೆ ತೀರ್ವೆ ಏಕೆ ಕೊಡಬೇಕು? ಹರಿಯುವ ನದಿ ನೀರು ತರಲು ದೊಣ್ಣೆನಾಯಕನ ಅಪ್ಪಣೆ ಬೇಕೆ? ಜನರ ಈ ಪ್ರಶ್ನೆಗಳಿಗೆ ಸರಕಾರಿ ಅಧಿಕಾರಿಗಳಲ್ಲಿ, ಊರ ಪಟೇಲರಲ್ಲಿ ಉತ್ತರವಿರಲಿಲ್ಲ. ಹೀಗಾಗಿ ಊರ ಜನರೊಡನೆ ಸಾಮಾನ್ಯ ಸಂಬಂಧ ಕಳಕೊಂಡ ಊರ ಪಟೇಲರು, ಸರಕಾರಿ ಅಧಿಕಾರಿಗಳು, ನೌಕರರು ಜನರ ಅಸೂಯೆಗೆ ಕಾರಣರಾದರು. ಪರಸ್ಪರ ದ್ವೇಷ, ಈರ್ಷೆ ದಿನೇ–ದಿನೇ ಬೆಳೆಯತೊಡಗಿತು. ಕರವಸೂಲಿ ಅಧಿಕಾರಿಗಳಿಗೆ ಒಂದು ಸವಾಲಾದರೆ, ಸರಕಾರಿ ನಿಯಮ ಕಟ್ಟಳೆಗಳು ಜನರಿಗೆ ಬೇರೊಂದು ರೀತಿ ಸವಾಲಾಯಿತು.

## ಅಧ್ಯಾಯ–೩

ಇತ್ತ ರಾಷ್ಟ್ರಮಟ್ಟದಲ್ಲಿ ಗಾಂಧೀಜಿಯವರು ಕರೆಕೊಟ್ಟ ಅಸಹಕಾರ ಚಳವಳಿ ತೀವ್ರ ಪರಿಣಾಮ ಬೀರುತ್ತಿತ್ತು. ಹಲವು ವಕೀಲರು, ಸರಕಾರಿ ಅಧಿಕಾರಿಗಳು ವೃತ್ತಿ ತೊರೆದು ದೇಶ ಸೇವೆಗೆ ಅಣಿಯಾದರು. ಕಾಲೇಜು ವಿದ್ಯಾರ್ಥಿಗಳು ತರಗತಿ ತೊರೆದು ಹಳ್ಳಿ ಹಳ್ಳಿಗಳಿಗೆ ತೆರಳಿ ಗಾಂಧೀಜಿಯವರ ಸಂದೇಶ ಪ್ರಸಾರಕ್ಕೆ ತೊಡಗಿದರು. ಮುಂಬಯಿಯ ವಿಲ್ಸನ್ ಕಾಲೇಜಿನಲ್ಲಿ ಕಲಿಯುತ್ತಿದ್ದ ಉತ್ತರ ಕನ್ನಡದವರೇ ಆದ ಐವರು ವಿದ್ಯಾರ್ಥಿಗಳು ೧೯೨೧ರ ಎಪ್ರಿಲ್ ಅಂತ್ಯಕ್ಕೆ ಹಡಗು ಪ್ರಯಾಣ ಮಾಡಿ ಗೋಕರ್ಣಕ್ಕೆ ಬಂದರು. ಅವರಲ್ಲಿ ಶ್ರೀ ಶಂಕರ ಗುಲ್ವಾಡಿಯವರು ಸಿರಸಿಗೆ ಬಂದು ಶ್ರೀ ತಿಮ್ಮಪ್ಪ ನಾಯಕ ಮಾಸ್ತರ್‌ರನ್ನು ಕಂಡು ಅವರ ಮಾರ್ಗದರ್ಶನದಂತೆ ಸಿದ್ದಾಪುರಕ್ಕೆ ಬಂದು ಶ್ರೀ ಹರಿಯಪ್ಪ ಚಂದ್ರಘಟ್ಟಿಯವರನ್ನು ಕಂಡು ಅವರ ಸಲಹೆಯಂತೆ ಬಿಳಗಿಗೆ ಬಂದು ಶ್ರೀ ವಾಮನ ದಾಸಪ್ಪ ಶಣೈಯವರಲ್ಲಿ ವಾಸ ಮಾಡಿದರು. ಬಿಳಗಿಯ ಮೂಡ್ಲಗಿರಿ ನಾರಾಯಣ ಪೈ ಯವರ ಸಹಾಯ–ಸಹಕಾರದಿಂದ ಸಿದ್ದಾಪುರ ತಾಲ್ಲೂಕಿನಲ್ಲಿ ಜಂಗಲ್ ಸತ್ಯಾಗ್ರಹ, ಅಸಹಕಾರ ಚಳುವಳಿ, ಹಾಗೂ ಕಾಂಗ್ರೆಸ್ ಸದಸ್ಯತ್ವ ಪಡೆಯುವ ಕುರಿತು ಪ್ರಚಾರ ಯೋಜನೆ ರೂಪಿಸಿದರು. ಮುಂದಿನ ನಾಲ್ಕು ತಿಂಗಳ ಅವಧಿಯಲ್ಲಿ ಶ್ರೀ ಶಂಕರ ಗುಲ್ವಾಡಿ ಬಳಗ ಅದ್ಭುತ ಕೆಲಸವನ್ನೇ ಸಾಧಿಸಿತು.

ಬಿಳಗಿಯ ಶ್ರೀ ಹರಿರಾಮಕೃಷ್ಣ ರಾಜವೈದ್ಯ, ಹೂವಿನ ಮನೆ ತಿಮ್ಮಪ್ಪ ಹೆಗಡೆ, ದೊಡ್ಮನೆ ನಾರಾಯಣ ಹೆಗಡೆ, ಕನ್ನಳ್ಳಿ ಶಿವರಾಮ ಹೆಗಡೆ, ಹಾಗೂ ಸಿದ್ದಾಪುರ ಹರಿಯಪ್ಪ ಚಂದ್ರಘಟ್ಟಿಯವರ ಸಹಾಯದಿಂದ ತಾಲ್ಲೂಕಿನಲ್ಲಿ ೧೨೦೦ ಕಾಂಗ್ರೆಸ್ ಸದಸ್ಯರನ್ನು ನೊಂದಾಯಿಸಿತು ಹಾಗೂ ತಿಲಕ್ ಫಂಡಿಗೆ ೬೦೦ ರೂ. ಸಂಗ್ರಹಿಸಿತು.

ಮೇ ತಿಂಗಳ ಅಂತ್ಯಕ್ಕೆ ಶಂಕರ ಗುಲ್ವಾಡಿಯವರು ಪಂಜಾಬ ಪೇಶಾವರ ಪ್ರಾಂತದ ಶ್ರೀ ಹಬೀಬುಲ್ಲಾ ಖಾನ್ ಎಂಬುವವರನ್ನು ಸಿರಸಿಗೆ ಕರೆತಂದರು. ಆತ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದಲ್ಲಿ ಎಡಗೈಗೆ ಗುಂಡು ತಗಲಿದ ಮುಸ್ಲಿಂ ಯುವಕನಾಗಿದ್ದ. ಉತ್ತಮ ವಾಗ್ಮಿ, ಸರಳ ಸುಂದರ ಹಿಂದಿ–ಉರ್ದು ಮಾತನಾಡುತ್ತಿದ್ದ. ಜನ ಸೇರಿದಲ್ಲಿ ತನ್ನ ಎಡಗೈ ಪ್ರದರ್ಶಿಸಿ ಆವೇಶಭರಿತ



ಮಾತನಾಡಿ ಬ್ರಿಟಿಷ್ ಸರಕಾರದ ದೋಷಗಳನ್ನು ಸಮರ್ಥವಾಗಿ ಪ್ರತಿಬಿಂಬಿಸುತ್ತಿದ್ದ. ಸರಕಾರಿ ಅಧಿಕಾರಿಗಳನ್ನು ಬಾಡಿಗೆ ನಾಯಿಗಳೆಂದು ಹಿಯ್ಯಾಳಿಸುತ್ತಿದ್ದ. ಆತನ ಭಾಷಣಕ್ಕೆ ಜನ ಸರಕಾರದ ವಿರುದ್ಧ ಸಿಡಿದೇಳುವಂತಾಗುತ್ತಿತ್ತು. ಆತನಿಂದಲೇ ಮುಸ್ಲಿಮ್ ಬಾಂಧವರು ರಾಷ್ಟ್ರೀಯ ಚಳವಳಿಯಲ್ಲಿ ಪಾಲ್ಗೊಳ್ಳುವಂತಾಯಿತು.

ಮತ್ತೊಂದು ತಿಂಗಳು ಕಳೆಯುತ್ತಲೇ ಕೊಪ್ಪಳದ ಶ್ರೀ ಜಯರಾಮಾಚಾರ್ಯರೆಂಬ ಕೀರ್ತನಾಕಾರರನ್ನು ಗುಲ್ವಾಡಿಯವರು ಸಿರಸಿಗೆ ಕರೆತಂದರು. ಅವರು ಮಳೆಗಾಲದಲ್ಲಿ ದೇವಸ್ಥಾನಗಳಲ್ಲಿ ಕೀರ್ತನೆ ಮಾಡುತ್ತಿದ್ದರು. ಗಾಂಧೀಜಿ ಜೈಲು ಸೇರಿದರೆ ಶ್ರೀ ಕೃಷ್ಣನ ಜನ್ಮಸ್ಥಾನ ಸೇರಿದ್ದಾರೆ, ಚರಖಾ ಚಕ್ರವು ಶ್ರೀ ಕೃಷ್ಣ ಚಕ್ರವೆಂದು ಸಂಬೋಧಿಸುತ್ತಿದ್ದರು. ಅಹಿಂಸಾವಾದ ಪ್ರತಿಪಾದಿಸುತ್ತಾ ಬ್ರಿಟಿಷ್ ಆಡಳಿತ ಕಂಸನ ದರ್ಬಾರ್ ಎಂದು ಹೀಯಾಳಿಸಿ ಜನರಲ್ಲಿ ರಾಷ್ಟ್ರೀಯ ಚಳವಳಿ ಪ್ರಸಾರ ತೀವ್ರಗೊಳಿಸಿದರು. ಸಿರಸಿ–ಸಿದ್ದಾಪುರ ತಾಲ್ಲೂಕಿನ ಹಲವು ಸ್ಥಳಗಳಲ್ಲಿ ಇವರ ಕೀರ್ತನೆಗಳು ಹಾಗೂ ಹಬಿಬುಲ್ಲಾ ಖಾನರ ಸಭಾ ಭಾಷಣಗಳು ನಡೆದವು. ಸಿದ್ದಾಪುರದ ಆಶುಕವಿ ಬೆಟ್ಟಗೇರಿ ತಿಪ್ಪಯ್ಯ ಮಾಸ್ತರರು ಕಟ್ಟಿ ಹಾಡುತ್ತಿದ್ದ ದೇಶಭಕ್ತಿ ಗೀತೆಗಳು ಹೆಚ್ಚು ಪ್ರಚಾರ ನೀಡಿದವು.

## ಅಧ್ಯಾಯ–೪

ಗಾಂಧೀಜಿಯವರ ನಿರ್ದೇಶನದಂತೆ ಸಿರಸಿ–ಸಿದ್ದಾಪುರ ತಾಲ್ಲೂಕಿನ ಕೆಲವು ಕೇಂದ್ರಗಳಲ್ಲಿ ರಾಷ್ಟ್ರೀಯ ಶಾಲೆಗಳನ್ನು ಪ್ರಾರಂಭಿಸಲಾಯಿತು. ಸರಕಾರಿ ಶಾಲೆ ತೊರೆದು ರಾಷ್ಟ್ರೀಯ ಶಾಲೆಗೆ ಸೇರಬಯಸುವ ವಿದ್ಯಾರ್ಥಿಗಳ ಸಂಖ್ಯೆ ದಿನ ದಿನವೂ ಹೆಚ್ಚಾಗುತ್ತಾ ಸಾಗಿತು. ರಾಷ್ಟ್ರೀಯ ಶಾಲೆಗಳಲ್ಲಿ ನೂಲುವುದು, ತರಕಾರಿ ಬೆಳೆಸುವದು ಪ್ರಮುಖ ವಿಷಯವಾಗಿ ಕಲಿಸಲಾಗುತ್ತಿತ್ತು ಹಾಗೂ ಖಾದಿಯನ್ನು ಮಾರುವ ವ್ಯವಸ್ಥೆಯೂ ಇದ್ದಿತು. ಊರ ಸುಶಿಕ್ಷಿತ ಯುವಕರೇ ಸೇವಾ ಮನೋಭಾವದಿಂದ ಶಿಕ್ಷಕರಾಗಿ ದುಡಿಯುತ್ತಿದ್ದರು.

ಊರಲ್ಲಿ ಮುಷ್ಟಿ ಫಂಡ್ ಸಂಗ್ರಹಿಸಿ ಶಾಲೆ ನಡೆಸುವುದೆಂದು ಪ್ರತಿಕೇಂದ್ರದ ಜನರು ನಿರ್ಧರಿಸಿದರು. ಮುಷ್ಟಿ ಫಂಡ್ ಎಂದರೆ ಪ್ರತಿಮನೆಯವರು ದೇವರ

ಎದುರು ಒಂದು ಪ್ರತ್ಯೇಕವಾದ ಪಾತ್ರೆ ಇಡುವದು. ಮನೆಯ ಪ್ರತಿ ಓರ್ವ ಸದಸ್ಯರ ಹೆಸರಿನಿಂದ ಒಂದು ಮುಷ್ಟಿ ಅಕ್ಕಿ ಅಥವಾ ಒಂದು ನಾಣ್ಯ ಆ ಪಾತ್ರೆಗೆ ಪ್ರತಿದಿನ ಹಾಕುವುದು. ವಾರಕ್ಕೆ ಎರಡು ಸಲ ಆ ಪಾತ್ರೆಯಲ್ಲಿ ಸಂಗ್ರಹವಾದ ನಾಣ್ಯ ಹಾಗೂ ಅಕ್ಕಿಯನ್ನು ಜವಾಬ್ದಾರ ವ್ಯಕ್ತಿಗೆ ತಲುಪಿಸುವುದು, ಅಥವಾ ಶಾಲೆಯವರು ಬಂದು ಅದನ್ನು ಪಡೆಯ ಬೇಕಾಗಿತ್ತು. ಕೆಲ ಕೇಂದ್ರಗಳಲ್ಲಿ ಶಾಲಾ ಶಿಕ್ಷಕರೆ ಮುಷ್ಟಿ ಫಂಡ್ ಸಂಗ್ರಹಿಸುವ ಜವಾಬ್ದಾರಿ ವಹಿಸಿಕೊಂಡರೆ, ಕೆಲವು ಕೇಂದ್ರಗಳಲ್ಲಿ ಅಪ್ರಾಯಸ್ತ ಮಕ್ಕಳು 'ವಾನರ ಸೇನೆ' ಯ ಸದಸ್ಯರು ಈ ಕೆಲಸ ನಿರ್ವಹಿಸುತ್ತಿದ್ದರು. ಈ ರೀತಿ ಹಲವು ಊರುಗಳಲ್ಲಿ ೫ ಅಥವಾ ೬ ವರ್ಷ ರಾಷ್ಟ್ರೀಯ ಶಾಲೆಗಳು ನಡೆದವು.

ಕೆಲ ಊರುಗಳಲ್ಲಿ ರಾಷ್ಟ್ರೀಯ ಶಾಲೆಗಳ ಸಮೀಪ ವಾಚನಾಲಯವನ್ನು ಪ್ರಾರಂಭಿಸಲಾಗಿತ್ತು. ಮರಾಠಿಯ ಕೇಸರಿ ಪತ್ರಿಕೆ, ಕನ್ನಡದ ರಾಜಹಂಸ ಮತ್ತು ವಿಜಯ ಎಂಬ ಪತ್ರಿಕೆಗಳ ಸಂಗಡ ಕುಮಟಾದಿಂದ ಹೊರಡುವ ಕಾನಡಾವೃತ್ತ, ಕಾನಡಾಧುರೀಣ ಪತ್ರಿಕೆಗಳನ್ನು ತರಿಸಲಾಗುತ್ತಿತ್ತು. ಪತ್ರಿಕೆಯ ಓದುಗರೇ ನೀಡಿದ ವಂತಿಗೆಯಿಂದ ವಾಚನಾಲಯದ ಖರ್ಚು–ವೆಚ್ಚ ಸರಿದೂಗಿಸಲಾಗುತ್ತಿತ್ತು. ಈ ರೀತಿ ವಿಧಾಯಕ ಕಾರ್ಯಗಳು ಸಿರಸಿ–ಸಿದ್ದಾಪುರ ತಾಲ್ಲೂಕಿನಲ್ಲಿ ನಡೆಯುತ್ತಿರುವ ಉತ್ತಮ ಪ್ರತಿಕ್ರಿಯೆ ವರದಿ ಬೆಳಗಾವಿ ಕಾಂಗ್ರೆಸ್ ಕಮಿಟಿಗೆ ತಲುಪುತ್ತಿತ್ತು. ಅದರಿಂದ ಗಂಗಾಧರರಾವ್ ದೇಶಪಾಂಡೆ, ಹನುಮಂತರಾವ್ ಕೌಜಲ್ಗಿ ಕಷ್ಣರಾವ್ ಮುದವೀಡ, ದತ್ತೋಪಂತ ಮಜಲಿ, ಆರ್. ವಿ. ಕರಿಗುದ್ರಿಯವರು ಸಿರಸಿ–ಸಿದ್ದಾಪುರ ತಾಲ್ಲೂಕು ಸಂಚರಿಸಿ ಗುಪ್ತ ಸಭೆಗಳನ್ನು ನಡೆಸಿ ಹೋದರು. ಇವರೆಲ್ಲರ ಮೇಲೆ ಬ್ರಿಟಿಷರ ವಿರುದ್ಧ ಮಾತನಾಡಿದ ಕುರಿತು ಬಂಧನ ವಾರೆಂಟ್ ಇದ್ದಿತು.

## ಅಧ್ಯಾಯ–೫

ಜಲಿಯನ್‌ವಾಲಾ ಬಾಗ್ ದುರಂತದಲ್ಲಿ ಮಡಿದವರ ಶ್ರದ್ಧಾಂಜಲಿಯಾಗಿ ೬ ಏಪ್ರಿಲ್ ೧೯೨೨ರಂದು ಹಿಂದು–ಮುಸ್ಲಿಂ ಐಕ್ಯತಾದಿನವೆಂದು ಆಚರಿಸಲು ಸಿದ್ದಾಪುರ ತಾಲ್ಲೂಕು ಬಿಳಗಿಯ ಹಿರಿಯರು ಗಾಂಧೀಜಿಯವರ ಕರೆಗೆ ಓಗೊಟ್ಟು ನಿರ್ಧರಿಸಿದರು. ಹಿಂದು–ಮುಸ್ಲಿಂ ಒಟ್ಟುಗೂಡಿ ಬಿಳಗಿಯ ಮಸೀದಿ ಹಾಗೂ ಶ್ರೀ ಸೀತಾರಾಮಚಂದ್ರ ದೇವಸ್ಥಾನದಲ್ಲಿ ಪ್ರಾರ್ಥನೆ ಮಾಡುವುದೆಂದು



ನಿರ್ಣಯಿಸಲಾಗಿತ್ತು. ಅಂದು ಸಂಜೆ ಹರಿ ರಾಜವೈದ್ಯ, ರಾಮದಾಸ ಪೈ, ವಾಮನ ಶೆಣೈ, ರಂಗಾ ಆಚಾರ್ಯ, ಶ್ರೀನಿವಾಸ ಆಚಾರ್ಯ, ಗಣಪತ ರಾವ್ ಬೈಂದೂರು ಜುಮ್ಮಾ ಮಸೀದಿಗೆ ಆಗಮಿಸಿದರು. ಮಸೀದಿಯ ಒಳಗೆ ಒಂದೇ ಸಾಲಿನಲ್ಲಿ ಮೌನವಾಗಿ ಕುಳಿತರು. ಕಾರಣ ಅವರಿಗೆಲ್ಲ ನಮಾಜ್ ಮಾಡುವ ಕ್ರಮ ಗೊತ್ತಿರಲಿಲ್ಲ. ನಂತರ ೧೫–೨೦ ಸಂಖ್ಯೆಯಲ್ಲಿ ಬಂದ ಮುಸ್ಲಿಂ ಬಾಂಧವರೊಡನೆ ಎಲ್ಲರೂ ಊರಿನ ಮಧ್ಯದಲ್ಲಿರುವ ಶ್ರೀ ಸೀತಾರಾಮಚಂದ್ರ ದೇವಸ್ಥಾನಕ್ಕೆ ಬಂದರು. ಅಹ್ಮದ್ ಇಬ್ರಾಹಿಂ ಸಾಬ್, ಕಾಸಿಮ ನಸ್ರುಸಾಬ್, ಇಬ್ರಾಹಿಂ ಸಾಬ ಹಾಗೂ ನನ್ಯಾ ಸಾಬ ಪ್ರಮುಖರಾಗಿದ್ದರು.

**ರಘುಪತಿ ರಾಘವ ರಾಜಾರಾಮ್, ಪತಿತ ಪಾವನ ಸೀತಾರಾಮ್,**
**ಈಶ್ವರ ಅಲ್ಲಾ ತೇರೆನಾಮ್, ಸಬಕೋ ಸನ್ಮತಿ ದೇ ಭಗವಾನ್**

ಎಂದು ಎಲ್ಲರೂ ಒಟ್ಟಿಗೆ ಪ್ರಾರ್ಥಿಸಿದರು. ಇದನ್ನು ತಿಳಿದು ಅತೀವ ಸಂತಸ ಪಟ್ಟವರೆಂದರೆ ಶಂಕರ ಗುಲ್ವಾಡಿ, ಜಯರಾಮಾಚಾರ್ಯ, ಹಾಗೂ ಹಬಿಬುಲ್ಲಾ ಖಾನ್ ಅವರು.

## ಅಧ್ಯಾಯ–೬

೧೯೨೨ರ ಜೂನದಿಂದ ಪ್ರಾರಂಭವಾದ ಮಳೆ ಸತತ ನಾಲ್ಕು ತಿಂಗಳು ಸುರಿದು ಅಡಿಗೆ ಬೆಳೆಗೆ ತೀವ್ರ ಕೊಳೆರೋಗ ತಗಲಿ ಬೆಳೆ ೧/೩ಕ್ಕಿಂತ ಕಡಿಮೆಯಾಯಿತು. ಡಿಸೆಂಬರ ತಿಂಗಳ ಮೂರನೇವಾರ ಬಿಳಗಿ ಸಮೀಪದ ಇಟಗಿ ಶ್ರೀ ರಾಮೇಶ್ವರ ದೇವಸ್ಥಾನದಲ್ಲಿ ಸಿದ್ದಾಪುರ ತಾಲ್ಲೂಕಿನ ರೈತರ ಸಭೆ ಸೇರಿತು. ಈ ಸಲ ಅತೀವ ಕೊಳೆರೋಗ ತಗಲಿ ಅಡಿಕೆ ಬೆಳೆ ೧/೩ ಕ್ಕಿಂತ ಕಡಿಮೆ ಇದೆ. ಸರಕಾರಿ ಪೀಕಪಾಣಿಯಂತೆ ಬೆಳೆ ೧/೩ ಕ್ಕಿಂತ ಕಡಿಮೆಯಾದರೆ ನಿಯಮದಂತೆ ಈ ವಿಭಾಗದ ರೈತರ ತೀರ್ವೆ ಮಾಫ್ ಮಾಡಬೇಕು. ಬೆಳೆ ಅತಿ ಕಡಿಮೆಯಾದ್ದರಿಂದ ತಗಾಯಿ ಸಾಲ ಕಂತು ತುಂಬಲು ಒಂದು ವರ್ಷ ಅವಧಿ ಮುಂದೂಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ವಿನಂತಿ ನೀಡಲು ಠರಾಯಿತು. ಶಿಷ್ಟಮಂಡಲದಲ್ಲಿ ದೊಡ್ಮನೆ ನಾರಾಯಣ ಹೆಗಡೆ, ಬಿಳಗಿ ಹರಿ ರಾಜ್ಯವೈದ್ಯ,, ಹಾಗೂ ಬಿಳಗಿಯ ರಾಮನಾರಾಯಣ ಪೈ ಮೂಡ್ಲಗಿಯವರು ಇದ್ದು ಜಿಲ್ಲಾಧಿಕಾರಿಗಳನ್ನು ಕಂಡು ಮನವಿ ಒಪ್ಪಿಸಿದರು.

ಆದರೆ ಇದು ಅಸಾಧ್ಯ, ತೀರ್ವೆ–ತಗಾದೆ ಕಂತು ತುಂಬಲೇ ಬೇಕು. ಅಲ್ಲವಾದರೆ ಶಕ್ತಿಯಿಂದ ವಸೂಲಿ ಕ್ರಮ ಕೈ ಕೊಳ್ಳತ್ತೇವೆ ಎಂದು ಜಿಲ್ಲಾಧಿಕಾರಿಗಳು ಉದ್ಧಟವಾಗಿ ವರ್ತಿಸಿದರು.

ಇದೇ ನಿರೀಕ್ಷೆಯಲ್ಲಿದ್ದ ಸರಕಾರಿ ಅಧಿಕಾರಿಗಳು ಬಿಳಗಿಯ ನಾರಾಯಣ ಪೈಯವರ ಮನೆಯಲ್ಲಿ ತೀರ್ವೆ ವಸೂಲಿ ಜಪ್ತಿ ಕ್ರಮ ಕೈಕೊಡು ೩೦ ರೂ ತೀರ್ವೆ ಬಾಕಿಗೆ ೬ ಚೀಲ ಅಡಿಕೆ ಎಂದರೆ ೩೦ ಮಣ ಮಾಲು ಜಪ್ತಿ ಮಾಡಿದರು. ಅದೇ ರೀತಿ ಸಿದ್ದಾಪುರ ನೆಲೆಮಾವ, ಗಣಪತಿ ತಿಮ್ಮಣ್ಣ ಭಟ್ಟರ ಮನೆಯಲ್ಲಿ ಜಪ್ತಿ ಮಾಡಲಾಯಿತು. ಸಿರ್ಸಿ ದೊಡ್ನಳ್ಳಿ ಕೃಷ್ಣ ಹೆಗಡೆಯವರ ಮನೆಯಲ್ಲಿ ಜಪ್ತಿ ಕ್ರಮ ಕೈಕೊಂಡು ೧೨೨ ರೂ ತೀರ್ವೆ ಬಾಕಿ ಎಂದು ೬೦೦ ರೂಪಾಯಿ ಅಡಿಕೆ ಜಪ್ತಿ ಮಾಡಲಾಯಿತು.

ಈ ಕ್ರಮವನ್ನು ವಿರೋಧಿಸಿ ಸಿದ್ದಾಪುರ ತಾಲ್ಲೂಕಿನಲ್ಲಿ ಗಣಪತ ರಾವ್ ಬೈಂದೂರ, ಗೋವಿಂದ ಪೈ ಮೂಡ್ಲಗಿರಿ, ಗಣೇಶ ತಿಮ್ಮಯ್ಯ ಹೆಗಡೆ, ಹಾಗೂ ತಿಮ್ಮಪ್ಪ ಮಂಜಯ್ಯ ಹೆಗಡೆ ಹೂವಿನಮನೆಯವರು ಪಟೇಲಿಕೆಗೆ ರಾಜೀನಾಮೆ ನೀಡಿದರು. ಸಿರಸಿ ತಾಲ್ಲೂಕಿನಲ್ಲಿ ದೊಡ್ನಳ್ಳಿ ತಿಮ್ಮಯ್ಯ ಅನಂತ ಹೆಗಡೆ, ನಾರಾಯಣ ನಾಗಪ್ಪ ಹೆಗಡೆ ಹೆಗಡೆಕಟ್ಟಾ, ಮಂಜುನಾಥ ದೇವರು ಹೆಗಡೆ ಮಕ್ಕಳತಾಯ್ಮನೆಯವರು ಪಟೇಲಿಕೆಗೆ ರಾಜಿನಾಮೆ ನೀಡಿದರು.

ಸರಕಾರದ ತೀರ್ವೆ ವಸೂಲಿ ಕ್ರಮ ವಿರೋಧಿಸಿ ಸಿರಸಿ–ಸಿದ್ದಾಪುರ ತಾಲ್ಲೂಕಿನಾದ್ಯಂತ ಅಸಹಕಾರ ಚಳವಳಿ, ಸೆರೆ–ಸೇಂದಿ ಅಂಗಡಿಗಳ ಎದುರು ಪಿಕೆಟಿಂಗ್, ವಿದೇಶಿ ಬಟ್ಟೆ–ವಸ್ತುಗಳ ಬಹಿಷ್ಕಾರ ನಡೆಯಿತು. ವಿದಾಯಕ ಕಾರ್ಯ ಅನ್ವಯ ನೂಲುವುದು–ಖಾದಿ ವಸ್ತ್ರತೊಡುವ ಪ್ರತಿಜ್ಞೆ ಕಾಂಗ್ರೆಸ್ ಕಾರ್ಯಕರ್ತರು ಮಡುತ್ತಿದ್ದರು.

ಈ ಮಧ್ಯೆ ಉತ್ತರ ಪ್ರದೇಶದ ಚೌರಿ–ಚೌರಾದಲ್ಲಿ ಹಲವು ಪೋಲೀಸರನ್ನು ಸುಟ್ಟ ಪ್ರಕರಣ ಹಾಗೂ ಭಗತಸಿಂಗ ಅನುಯಾಯಿಗಳು ಪ್ರಚೋದಿಸುವ ಕ್ರಾಂತಿಕಾರಿ ಕ್ರಮಗಳಿಂದ ಗಾಂಧೀಜಿಯವರು ಮನನೊಂದು ರಾಷ್ಟ್ರೀಯ ಚಳವಳಿಯನ್ನು ೧೯೨೩ರಿಂದ ೫ ವರ್ಷಗಳ ಕಾಲ ಸ್ಥಗಿತಗೊಳಿಸಿದರು. ಆದರೆ ರಾಷ್ಟ್ರೀಯ ಚಳವಳಿ ಮಂದಗತಿಯಲ್ಲಿ ಅಹಿಂಸಾತ್ಮಕವಾಗಿ ಜರುಗಿತು.



## ಅಧ್ಯಾಯ–೭

## ಅಸಹಕಾರ ಚಳವಳಿ ಹಾಗೂ ಅರಣ್ಯ ಚಳವಳಿ

ಅಸಹಕಾರ ಚಳವಳಿ ಅನ್ವಯ ಜಿಲ್ಲೆಯ ಪಟೇಲರೆಲ್ಲರೂ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಬೇಕೆಂದು ಉತ್ತರ ಕನ್ನಡ ಕಾಂಗ್ರೆಸ್ ಸಮೀತಿ ಕರೆನೀಡಿತು. ಸಿದ್ದಾಪುರ ತಾಲ್ಲೂಕಿನಲ್ಲಿ ಹರಿ ರಾಜವೈದ್ಯ, ದೊಡ್ಮನೆ ನಾಗೇಶ ಹೆಗಡೆ, ಹಾಗೂ ಶಿರಳಗಿ ಸುಬ್ರಾಯ ಭಟ್ಟರು ತಾಲ್ಲೂಕಿನಾದ್ಯಂತ ಪ್ರಚಾರ ಮಾಡಿದರು. ಇದರಿಂದ ತಾಲ್ಲೂಕಿನ ೭೦–೮೦ ಪಟೇಲರು ರಾಜೀನಾಮೆ ಸಲ್ಲಿಸಿದರು. ಇದು ಸರಕಾರಕ್ಕೆ ಕರವಸೂಲಿಗೆ ತೊಂದರೆಯಾಗುವುದೆಂದು ಪಟೇಲ ಅಣ್ಣಾಜಿ ಗೌಡರು ಫಿರ್ಯಾದ ಒಂದನ್ನು ಸರಕಾರಕ್ಕೆ ನೀಡಿದರು. ಸ್ವಯಂಪ್ರೇರಣೆಯಿಂದ ಯಾರೂ ರಾಜೀನಾಮೆ ನೀಡಿಲ್ಲ, ಒತ್ತಾಯಪೂರ್ವಕ ಹಾಗೂ ಹೆದರಿಸಿ ರಾಜೀನಾಮೆ ಪಡೆಯಲಾಗಿದೆ ಎಂದು ದೂರಿದರು. ಆ ಕೂಡಲೆ ಕಾರ್ಯಪವೃತ್ತರಾದ ಪೊಲೀಸರು ಬಿಳಗಿ ಹರಿ ರಾಜವೈದ್ಯ ಹಾಗೂ ತಾರಖಂಡ ಸೀತಾರಾಮ ಹೆಗಡೆಯವರನ್ನು ಬಂಧಿಸಿ ೧೦ ದಿನ ಸಿದ್ದಾಪುರ ಜೈಲಿನಲ್ಲಿ ಇಟ್ಟರು.

ಕೆಲದಿನ ಕಳೆಯುತ್ತಿದ್ದಂತೆ ಹರಿ ರಾಜ್ಯವೈದ್ಯರ ಅಣ್ಣ ವಾಮನ ಶಣೈ ಗೋಚರಾವ ಫೀ ತುಂಬಿಲ್ಲವೆಂದು ಅವರ ಮನೆಯಲ್ಲಿ ಜಪ್ತಿ ಕ್ರಮ ಕೈಕೊಂಡು ೫ ರೂ ಬಾಕಿ ಇದೆ ಎಂದು ತಿಳಕೊಂಡು ತಾಮ್ರದ ಹಂಡೆ ಜಪ್ತಿ ಮಾಡಿದರು. ಕರ ನಿರಾಕರಣೆ ಎಂದು ವಾಮನ ಶಣೈಯವರನ್ನೂ ಬಂಧಿಸಿದರು. ಜಪ್ತಿ ಮಾಲು ಮನೆ ಬಾಗಿಲಿನಿಂದ ಹೊರ ಒಯ್ಯುದಂತೆ ವಾಮನ ಶಣೈಯವರ ಮಗ ರಾಮಚಂದ್ರ ಬಾಗಿಲಿಗೆ ಅಡ್ಡವಾಗಿ ಕುಳಿತರೆಂದು ಅವನನ್ನು ಹೊತ್ತು ಕೊಂಡು ಪೊಲೀಸ ಸ್ಟೇಶನ್‌ಗೆ ಒಯ್ದರು. ವಿಚಾರಣೆಯಲ್ಲಿ ವಾಮನ ಶಣೈಯವರಿಗೆ ೬ ತಿಂಗಳು ಜೈಲು ಶಿಕ್ಷೆ ಆಯಿತು. ಪೆರೋಲ ನಿರಾಕರಿಸಿದ್ದಕ್ಕೆ ಪುನಃ ೬ ತಿಂಗಳು ಜೈಲು ವಿಧಿಸಲಾಯಿತು.

ಸಿರಸಿಯಲ್ಲಿ ಅಸಹಕಾರ ಚಳವಳಿ ಪ್ರಚಾರವನ್ನು ವಾಸುದೇವ ಧಾಕಪ್ಪ, ಶ್ರೀಧರ ಬೈಲೂರು, ಎಸ್.ಎನ್. ಕೇಶವೈನ, ಕಡವೆ ರಾಮಕೃಷ್ಣ ಹೆಗಡೆ, ಕಮಲಾಕರ ಸೋಂದೆ ಹಾಗೂ ದತ್ತಾತ್ರೆಯ ಇಸಳೂರು ಅವರು ಪ್ರಯತ್ನ ಮಾಡಿದರಿಂದ ೪೨ ಪಟೇಲರು ತಮ್ಮ ಪಟೇಲಕಿಗೆ ರಾಜೀನಾಮೆ ನೀಡಿದರು. ತಾರಗೋಡ, ಇಸಳೂರ, ಬನವಾಸಿ, ದಾಸನಕೊಪ್ಪ, ಬಿಸಲಕೊಪ್ಪ, ಮುಂಡಗೇಸರ, ಸಿರಸಿ,

ಸಂಪಖಂಡ, ಸೋಂದಾ, ಹುಲೇಕಲ್, ಹೆಗಡೆಕಟ್ಟಾ ಹೀಗೆ ೧೪ ಕಡೆಯಲ್ಲಿ ಅರಣ್ಯ ಸತ್ಯಾಗ್ರಹ ಶಿಬಿರ ಏರ್ಪಡಿಸಿದರು.

## ಅಧ್ಯಾಯ–೮

## ಕರಪತ್ರ ಮುದ್ರಣ

ಸಿರಸಿ ಬಸ್ತಿಗಲ್ಲಿಯಲ್ಲಿ ಮಾಮಲೇದಾರ ಮನೆಯ ಎದುರು ಸೋಂದೆ ನಾರಾಯಣರಾಯರ ಮನೆಯ ಅಟ್ಟದ ಮೇಲೆ ಸಿರಸಿ ವಿಠಲ ಭಟ್ಟ, ಕೃಷ್ಣ ಭಟ್ಟ, ಹಾಗೂ ಬಿಳಗಿ ವಾಮನ ಶಣ್ಯೈಯವರ ಮಗ ಗೋಪಾಲ ಮಡಗಾಂವಕರ ಸೇರಿ ಗೌಪ್ಯವಾಗಿ ಕರಪತ್ರ ಮುದ್ರಣ ಹಾಗೂ ಸುದ್ದಿ ಸಂಗ್ರಹ ಮಾಡುತ್ತಿದ್ದರು. ಅವರ ತಮ್ಮ ಪುಂಡ್ಲೀಕ ಮಡಗಾಂವಕರ ಅಂದವಾದ ಅಕ್ಷರದಲ್ಲಿ ಕರಪತ್ರ ಬರೆದು ಮುದ್ರಿಸಲು ಸಹಾಯಕನಾಗಿದ್ದನು. ಕೆಲದಿನಗಳಲ್ಲಿ ಕರಪತ್ರ ಮುದ್ರಣ ವಿಷಯ ಪೊಲೀಸರ ಅರಿವಿಗೆ ಬರುತ್ತಿದೆ ಎಂಬ ಸುದ್ದಿ ಬಂದು ಮುದ್ರಣವನ್ನು ಸಿದ್ದಾಪುರ ತಾಲ್ಲೂಕು ಬಿಳಗಿಗೆ ವರ್ಗಾಯಿಸಲು ನಿರ್ಧರಿಸಲಾಯಿತು. ಮೊದಲು ಸಿದ್ದಾಪುರದಲ್ಲಿ ಚಂದ್ರಘಟ್ಟಿ ಹರಿಯಪ್ಪನವರ ಮನೆಯ ಮಾಳಿಗೆಯ ಮೇಲೆ ಮುದ್ರಣ ಕೆಲಸ ಆರಂಭವಾಯಿತು. ಶ್ರೀ ದುರ್ಗಪ್ಪ ಶ್ಯಾಮೈನ್ ಸೈಕ್ಲೊಸ್ಟೈಲ್ ಮುದ್ರಣಕ್ಕೆ ಬೇಕಾಗುವ ಮಶಿ ತಯಾರಿಕೆಕ್ರಮ ಹಾಗೂ ಯಂತ್ರ ರಿಪೇರಿ ಕ್ರಮ ಕಂಡುಕೊಂಡರು. ಕರಪತ್ರ ಬರೆಯುವ ಕೆಲಸ ಗಣೇಶ ಚಂದ್ರಘಟ್ಟಿ ಹಾಗೂ ಅವರ ಅಕ್ಕ ಗೋದುಬಾಯಿ ಮಾಡುತ್ತಿದ್ದರು. ಅವರು ಕರಪತ್ರ ಮುದ್ರಿಸಿ ಸಿರಸಿ, ಸಿದ್ದಾಪುರದ ಹಳ್ಳಿಗಳಿಗೆ ಕಳಿಸಲಾಗುತ್ತಿತ್ತು. ಹಳ್ಳಿಯಲ್ಲಿ ಹಾಗೂ ಪಟ್ಟಣಗಳಲ್ಲಿ ದೇವಸ್ಥಾಗಳ ಅರ್ಚಕರ ಕೈಗೆ ಕರಪತ್ರಗಳನ್ನು ಕೊಡಲಾಗುತ್ತಿತ್ತು. ಅರ್ಚಕರು ದೇವಸ್ಥಾನಕ್ಕೆ ಬಂದವರ ಮೂಲಕ ಕಾಂಗ್ರೆಸ್ ಕಾರ್ಯಕರ್ತರಿಗೆ ತಲುಪಿಸುತ್ತಿದ್ದರು. ಪುನಃ ವಿಷಯ ಪೊಲೀಸರ ಗಮನಕ್ಕೆ ಬರುತ್ತಿದೆ ಎಂಬ ಸುದ್ದಿ ತಿಳಿದು ಮುದ್ರಣವನ್ನು ಬಿಳಗಿಯ ಮೂಡ್ಲಗಿರಿ ರಾಮದಾಸ ಪೈಯವರ ಮನೆಯ ಮಾಳಿಗೆಗೆ ವರ್ಗಾಯಿಸಲಾಯಿತು. ಪ್ರತಿದಿನ ರಾತ್ರಿ ಸಮಯದಲ್ಲಿ ಕರಪತ್ರ ಮುದ್ರಣ ಕಾರ್ಯ ಪುಂಡ್ಲೀಕ ಮಡಗಾಂಕರ ಹಾಗೂ ಶಂಕರ ಗುಲ್ವಾಡಿಯವರು ಮಾಡುತ್ತಿದ್ದರು. ಶಂಕರ ಗುಲ್ವಾಡಿ ಅಬ್ಬಿಗದ್ದೆ, ಕಾಡಿನಲ್ಲಿ ವಾಸಮಾಡುತ್ತಿದ್ದರು. ರಾತ್ರಿ ರಾಮದಾಸ ಪೈಯವರ ಮನೆಗೆ ಬರುತ್ತಿದ್ದರು.



ಮುದ್ರಣವಾದ ಕರಪತ್ರಗಳು ವಾರಕ್ಕೆ ಎರಡು ಸಲ ಗೋದಾಬಾಯಿ ಚಂದ್ರಘಟ್ಟಿ ಅವರ ತವರುಮನೆ ಸಿದ್ದಾಪುರ ಹರಿಯಪ್ಪನವರಲ್ಲಿ ತಲುಪಿಸುತ್ತಿದ್ದರು. ಗೋದಾಬಾಯಿ ಆ ಸಮಯಕ್ಕೆ ಬಿಳಗಿ ವಾಮನ ಶಣ್ಯೈಯವರ ಸೊಸೆಯಾಗಿದ್ದಳು. ಸಿದ್ದಾಪುರದಿಂದ ಕರಪತ್ರಗಳು ಸಿರಸಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ವಿವಿಧ ಸ್ಥಳಗಳಿಗೆ ತಲುಪುತ್ತಿದ್ದವು. ಗಾಂಧೀಜಿಯವರ ಸಂದೇಶಗಳು ಹಾಗೂ ಸತ್ಯಾಗ್ರಹ ಚಳವಳಿಗಳ ಮಾಹಿತಿ ಸಂಗ್ರಹವಾಗಿ ಸಿರ್ಸಿ–ಸಿದ್ದಾಪುರ ಮೂಲಕ ಬಿಳಗಿಗೆ ತಲುಪಿಸಲಾಗುತ್ತಿತ್ತು. ಸರಕಾರದ ಹಾಗೂ ಅಧಿಕಾರಿಗಳ ದೌರ್ಜನ್ಯದ ವರದಿಗಳನ್ನು ಅಲ್ಲಿ ಬರೆಯಲಾಗುತ್ತಿದ್ದುದರಿಂದ ಕರಪತ್ರಗಳನ್ನು ಜಪ್ತಿ ಮಾಡಲು ಬ್ರಿಟಿಷ್ ಸರಕಾರ ಆಜ್ಞೆ ಹೊರಡಿಸಿತ್ತು. ಮೈಸೂರಿನಿಂದ ಸಿರಸಿಗೆ ಆಗಮಿಸಿದ ಶ್ರೀ ಕೆ.ಎ.ವೆಂಕಟರಾಮಯ್ಯ, ದೊಡ್ಮನೆ ನಾಗೇಶ ಹೆಗಡೆ, ಶಿರಳಗಿ ಸುಬ್ರಾಯ ಭಟ್ಟರು ಹಾಗೂ ಶಂಕರ ಗುಲ್ವಾಡಿಯವರು ಕರಪತ್ರಗಳ ಪ್ರಸಾರಕ್ಕೆ ಹೆಚ್ಚು ದುಡಿದವರು.

## ಅಧ್ಯಾಯ–೯

## ಕರನಿರಾಕರಣೆ ಚಳವಳಿ

೧೯೩೦ರ ಪ್ರಾರಂಭದಲ್ಲಿ ಶ್ರೀ ರಂಗನಾಥ ದಿವಾಕರ, ಶ್ರೀ ನಾ.ಸು. ಹರ್ಡಿಕರ, ಸಿರಸಿಯ ವಾಮನ ಹೊಡಿಕೆ, ಹಾಗೂ ಶ್ರೀ ಕೆ.ಎ.ವೆಂಕಟ ರಾಮೈಯವರು ಸಿರಸಿ–ಸಿದ್ದಾಪುರ ತಾಲ್ಲೂಕುಗಳ ಹಲವು ಹಳ್ಳಿಗಳಲ್ಲಿ ವಾಸ್ತವ್ಯ ಹೂಡಿ ರೈತರಿಂದ ಕರನಿರಾಕರಣೆ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಪ್ರತಿಜ್ಞಾ ಪತ್ರಕ್ಕೆ ಹಸ್ತಾಕ್ಷರ ಮಾಡಿಸಿಕೊಳ್ಳುವುದನ್ನು ಪ್ರಾರಂಭಿಸಿದರು. ಸಿರಸಿಯ ಮೋಟಿನಸರ ವೆಂಕಟರಮಣ ಹೆಗಡೆ, ಕಡವೆ ರಾಮಕೃಷ್ಣ ಹೆಗಡೆ, ಬಿಸಲುಕೊಪ್ಪ ಗಣಪತಿ ಭಟ್ಟ, ಮಕ್ಕಳತಾಯಿಮನೆಯ ಮಂಜುನಾಥ ಹೆಗಡೆಯವರ ಮನೆಯಲ್ಲಿ ಗುಪ್ತವಾಗಿ ಪ್ರತಿಜ್ಞಾಪತ್ರಕ್ಕೆ ಸಹಿ ಪಡೆಯಲಾಗಿತ್ತು. ಅದೇ ರೀತಿ ಸಿದ್ದಾಪುರ ತಾಲ್ಲೂಕಿನಲ್ಲಿ ಕನ್ನಳ್ಳಿ ಶಿವರಾಮ ಹೆಗಡೆ, ಬಿಳಗಿ ಹರಿ ರಾಜ್ಯವೈದ್ಯರು, ಗುಂಜಗೋಡು ಗಣೇಶ ಭಟ್ಟ, ದೊಡ್ಮನೆ ನಾಗೇಶ ಹೆಗಡೆ, ಸಿದ್ದಾಪುರದಲ್ಲಿ ಶಿರಳ್ಗಿ ಸುಬ್ರಾಯ ಭಟ್ಟರ ಮನೆಯಲ್ಲಿ ರೈತರಿಂದ ಕರನಿರಾಕರಣೆ ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿಸಿ ಕೊಳ್ಳಲಾಯಿತು.

೧೯೩೦ರ ಜೂನ್ ಅಂತ್ಯಕ್ಕೆ ಸಿರಸಿಯ ಸೋಂದೆಯವರ ವಖಾರಿಯಲ್ಲಿ ತಾಲ್ಲೂಕಿನ ೭೦–೮೦ ರೈತರ ಸಭೆ ಸೇರಿತು. ಗೋಚರಾವ ಫೀ ಹಾಗೂ ಜಂಗಲ್ ಸತ್ಯಾಗ್ರಹ ತೀವ್ರಗೊಳಿಸಲು ನಿರ್ಧರಿಸಿತು. ಅದರಂತೆ ಆಗಸ್ಟ್ ೪ರಂದು ಸಮೀಪದ ೪೦ ಗ್ರಾಮಗಳಿಂದ ೨–೩ ಸಾವಿರ ಜನರು ಸಿರಸಿ ಪೇಟೆಯಲ್ಲಿ ಸೇರಿದರು. ವಾಸುದೇವ ಧಾಕಪ್ಪ, ವೆಂಕಟ್ರಮಣ ಹೆಗಡೆ ಮೊಟೆನಸರ, ಬಾಳೆಗದ್ದೆ ಪರಮೇಶ್ವರ ಹೆಗಡೆ, ಬಿಸಲಕೊಪ್ಪ ಗಣಪತಿ ಭಟ್ಟ, ಕಡವೆ ರಾಮಕೃಷ್ಣ ಹೆಗಡೆ, ಹೆಗಡೆಕಟ್ಟಾ ಸುಬ್ರಾಯ ಹೆಗಡೆ ಮುಂತಾದವರು ಗಂಧ ಹಾಗೂ ಹೊನ್ನೆ ಗಿಡಗಳನ್ನು ಕಡಿದು ಪೇಟೆಯಲ್ಲಿ ಮೆರವಣಿಗೆ ತಂದರು. ಅವರಲ್ಲಿ ಕೇವಲ ೧೬ ಮಂದಿಯನ್ನು ಬಂಧಿಸಲಾಗಿತ್ತು. ಪರಪ್ರದೇಶ ಹಾಗೂ ಬೇರೆ ಜಿಲ್ಲೆಯಿಂದ ಬಂದ ಸುಮಾರು ೮೦ ಜನರಿಗೆ ೨೪ ತಾಸಿನಲ್ಲಿ ಸಿರಸಿ ಬಿಟ್ಟು ಹೋಗಲೇಬೇಕೆಂದು ನೋಟೀಸ್ ನೀಡಲಾಯಿತು. ಬಂಧಿತರಿಗೆ ವಿಚಾರಣೆಯಿಂದ ೬ ರಿಂದ ೮ ತಿಂಗಳ ಜೈಲು ಶಿಕ್ಷೆ ವಿಧಿಸಲಾಯಿತು.

ಇದೇ ಸಮಯಕ್ಕೆ ಸಿದ್ದಾಪುರದಲ್ಲಿಯ ಅರಣ್ಯ ಸತ್ಯಾಗ್ರಹ ತೀವ್ರ ಗೊಂಡಿತು. ಅದರಲ್ಲಿ ಶಂಕರ ಗುಲ್ವಾಡಿ ಹಾಗೂ ಕನ್ನಳ್ಳಿ ಶಿವರಾಮ ಮಂಜಯ್ಯ ಹೆಗಡೆಯವರ ಮುಖಂಡತ್ವ ವಹಿಸಿದ್ದರು. ಅವರ ಯೋಜನೆಯಂತೆ ಪ್ರತಿದಿನ ಕೇವಲ ೭–೮ ಮಂದಿ ಮಾತ್ರ ಗಿಡಗಳನ್ನು ಕಡಿದು ಸಿದ್ದಾಪುರ ಚಂದ್ರಘಟ್ಗಿ ಪಟಾಂಗಣಕ್ಕೆ ತಂದು ಹರಾಜು ಹಾಕಬೇಕಾಗಿತ್ತು. ಈ ರೀತಿ ಸತ್ಯಾಗ್ರಹ ೧೫ ದಿನ ಸತತ ನಡೆಯಿತು. ಬಂಧಿತರಿಗೆಲ್ಲ ೬ ರಿಂದ ೮ ತಿಂಗಳ ಜೈಲು ಶಿಕ್ಷೆ ವಿಧಿಸಲಾಯಿತು.

ಸಾಧು ಜನರ ಮನೆಯಲ್ಲಿ ಕರವಸೂಲು ಮಾಡಿದರೆ ತಮಗೆ ಪ್ರತಿರೋಧ ಕಡಿಮೆ ಹಾಗೂ ಜನರಲ್ಲಿ ಭೀತಿ ಹುಟ್ಟಿಸುವುದು ಸುಲಭ ಎಂದು ಭಾವಿಸಿದ ಸರಕಾರಿ ಅಧಿಕಾರಿಗಳು ೧೯೩೨ರ ಫೆಬ್ರವರಿ ೨೮ರಂದು ಸಿದ್ದಾಪುರ ಮಾಮಲೇದಾರ ಸಹಿತ ೧೭ ಮಂದಿ ಸರಕಾರಿ ಅಧಿಕಾರಿಗಳು ಬೆಳಿಗ್ಗೆ ೯ ಘಂಟೆ ಸಮಯಕ್ಕೆ ಬಿಳಗಿ ಮಾಧವ ಆಚಾರ್ಯರ ಮನೆಗೆ ಬಂದರು. ಮನೆಯಲ್ಲಿ ಗಂಡಸರಾರು ಇರಲಿಲ್ಲ. ನಾವು ತೀರ್ವೆ ವಸೂಲಿಗೆ ಬಂದಿದ್ದೇವೆ. ಹೆಂಗಸರು–ಮಕ್ಕಳು ಮನೆಯಿಂದ ಹೊರ ಬನ್ನಿ ಎಂದರು. ಹೆದರಿದ ಹೆಂಗಸರು ಮನೆಯ ಬಾಗಿಲನ್ನು ಹಾಕಿ ಹೆದರಿದ ಮಕ್ಕಳೊಡನೆ ಮನೆಯಲ್ಲಿಯೆ ಉಳಿದರು.



ಮಾಮಲೇದಾರ ಕಬ್ಬಿಣದ ಹಾರೆ–ಸಲಾಕೆಗಳನ್ನು ತರಿಸಿ ಮನೆಯ ಬಾಗಿಲನ್ನು ಒಡೆದು ಜಪ್ತಿ ಕ್ರಮ ಪ್ರಾರಂಭಿಸಿದರು. ಅಷ್ಟರಲ್ಲಿ ಗದ್ದೆಗೆ ಹೋಗಿದ್ದ ಮಾಧವ ಆಚಾರ್ಯರು ಬಂದರು, ಮನೆಯ ಬಾಗಿಲು ಒಡೆದದಕ್ಕಾಗಿ ಅಧಿಕಾರಿಗಳನ್ನು ಬೈದರು. ಅವರನ್ನು ಬಂಧಿಸಿ ಸಿದ್ದಾಪುರಕ್ಕೆ ಒಯ್ಯಲು ತಯಾರಾದಾಗ ಮನೆಯ ಹೆಂಗಸರು–ಮಕ್ಕಳು ಸರಕಾರಿ ಅಧಿಕಾರಿಗಳಲ್ಲಿ ಅವರನ್ನು ಬಿಟ್ಟು ಬಿಡಲು ದೈನ್ಯತೆಯಿಂದ ಬೇಡಿದರೆ ಆಚಾರ್ಯರು ಪತ್ನಿ ಮಕ್ಕಳನ್ನು ತಡೆದು ಪೊಲೀಸರೊಡನೆ ನಡೆದರು.

ಅದೇ ದಿನ ಸಂಜೆ ಬಿಳಗಿಯ ಪರೋಪಕಾರಿ ಮೃದು ಸ್ವಭಾವದ ಶ್ರೀ ಹನುಮಂತ ಪುರಾಣಿಕರ ಮನೆಗೆ ಅವರ ಬಂಧನ ವಾರೆಂಟ್ ಸಹಿತ ಶ್ಯಾನಭೋಗ ಹಾಗೂ ಉಗ್ರಾಣಿಯವರು ಬಂದು 'ಪುರಾಣಿಕರೆ ನಿಮ್ಮ ತೀರ್ವೆ ಆರು ಆಣೆ, ಗೋಚರಾವ ಫೀ ಹನ್ನೆರಡು ಆಣೆ, ದಂಡ ಐದು ಆಣೆ ಬಾಕಿ ಇದೆ; ಅದನ್ನು ಈಗಲೇ ಕೊಡಬೇಕು' ಎಂದರು. 'ನಾನು ಕರ ನಿರಾಕರಣೆ ಪ್ರತಿಜ್ಞೆಗೆ ಸಹಿ ಮಾಡಿದ್ದೇನೆ, ನಿಮಗೆ ಒಂದು ದಮಡಿ ಕಾಸು ಕೊಡುವುದಿಲ್ಲ' ಎಂದರು. ಅವರನ್ನು ಕೈದು ಮಾಡಿ ಸಿದ್ದಾಪುರಕ್ಕೆ ಒಯ್ದರು. ಮರುದಿನ ಬೆಳಗ್ಗೆ ಪುರಾಣಿಕರ ಮನೆಯಲ್ಲಿ ಜಪ್ತಿ ಕಾರ್ಯ ಪ್ರಾರಂಭಿಸಿದರು. ಒಂದು ಚೀಲ ಭತ್ತ, ಹಾಲು ಕೊಡುವ ಆಕಳು, ಹಾಗೂ ದೇವರ ಎದುರು ಹಚ್ಚಿದ ಕಂಚಿನ ದೀಪವನ್ನು ಜಪ್ತಿ ಮಾಡಿ ಒಯ್ದರು.

ಇದರಿಂದ ತೀವ್ರ ರೋಷಗೊಂಡ ಹನುಮಂತ ಪುರಾಣಿಕರ ಪತ್ನಿ ಭಾಗೀರಥಿಬಾಯಿ ಹಿರಿಯ ಮಗಳನ್ನು ಕರೆದುಕೊಂಡು ಉರಿಬಿಸಿಲಿನಲ್ಲಿ ೮ ಮೈಲಿ ನಡೆದು ಸಿದ್ದಾಪುರ ತಲುಪಿ ಜಿಲ್ಲಾಧಿಕಾರಿ ಮಿಸ್ಟರ್ ಕ್ಲೀ ಸಾಹೇಬರ ಕೆಂಪ ಹತ್ತಿರ ತಲುಪಿದರು. ಸಾಹೇಬರು ಊಟ ಮಾಡಿ ವಿಶ್ರಾಂತಿ ಪಡೆಯುತ್ತಿದ್ದರು. ಸಮೀಪದಲ್ಲಿಯೇ ಹೆಂಗಸರೊಬ್ಬರ ಕಿರಿಚಾಟ–ಕೂಗಾಟ ಕೇಳಿ ಬರುತ್ತಿತ್ತು. ಸಾಹೇಬರು ಹೊರಬಂದರು. ಗೇಟ್ ಬಳಿ ಹೆಂಗಸೊಬ್ಬಳಿಗೆ ಪೊಲೀಸರು ಲಾಠಿಯಿಂದ ಹಿಂದಕ್ಕೆ ತಳ್ಳುತ್ತಿದ್ದರು. ಗರ್ಭಿಣಿ ಹೆಂಗಸಿನ ಸಂಗಡ ಪ್ರಾಯಸ್ತ ಹುಡುಗಿ ಇದ್ದಳು. 'ಏನದು, ಆಕೆಯನ್ನು ತಳ್ಳ ಬೇಡಿ ಇತ್ತ ಕಳುಹಿಸಿ', ಎಂದರು.

'ನೀವು ನನ್ನ ಗಂಡನನ್ನು ಜೈಲಿಗೆ ಕಳಿಸಿದ್ದೀರಿ. ಒಂದುವರೆ ರೂಪಾಯಿ

ತೀರ್ವೆಗೆ ಮನೆಯಲ್ಲಿ ಹಾಲು ಕರೆಯುವ ಆಕಳನ್ನು ಜಪ್ತಿ ಮಾಡಿ ಕರುವಿಗೆ ಅನಾಥ ಮಾಡಿದ್ದೀರಿ, ಬೂಟು ಕಾಲಿನಿಂದ ದೇವರ ಕೋಣೆ ಪ್ರವೇಶಿಸಿ ನಂದಾ ದೀಪ ನಂದಿಸಿ ಒಯ್ದಿದ್ದೀರಿ, ಊಟಕ್ಕೆ ಎಂದಿದ್ದ ಭತ್ತ ಒಯ್ದಿದ್ದೀರಿ, ನಾವೀಗ ಉಪವಾಸ ಇರಬೇಕಾ? ಕಾಡೆಮ್ಮೆಗಳು ಬಂದು ನಮ್ಮ ಗದ್ದೆ ತಿಂದು ಹಾಕಿವೆ, ಬೆಳೆ ಪೂರ್ಣ ನಾಶವಾಗಿದೆ, ಕೊಳೆ ರೋಗದಿಂದ ಅಡಿಕೆ ಎಲ್ಲಾ ಉದುರಿ ಹೋಗಿದೆ. ನೀವೇನು ಸಹಾಯ ಮಾಡಿದಿರಿ? ಕಷ್ಟ ಕಾಲಕ್ಕೆ ಸಹಾಯ ಮಾಡದ ಸರಕಾರ ಏಕೆ ಬೇಕು? ಈ ಇಂಗ್ಲೀಷ್ ಸರಕಾರ ನಾಶವಾಗಲಿ, ಕೆಟ್ಟ ಕೆಲಸ ಮಾಡಿದ ಅಧಿಕಾರಿಗಳು ಬೀದಿಗೆ ಬೀಳಲಿ' ಎಂದು ಕೈ ತಿರುಗಿಸುತ್ತ ಭಾಗೀರಥಿ ಬಾಯಿಯವರು ವೀರಾವೇಶದಿಂದ ಮಾತನಾಡಿದ್ದು ಕಂಡ ಕ್ಲೀ ಸಾಹೇಬರು ತಲೆತಗ್ಗಿಸಿ ಒಳ ನಡೆದರು.

ವಿಷಯ ಬಿಳಗಿ ಊರು ಹಾಗೂ ಸುತ್ತಲಿನ ಹಳ್ಳಿಗಳಿಗೆ ಹರಡಿತು. ಮಕ್ಕಳಿಗೆ ಜ್ವರ ಬಂದರೆ ಔಷಧಿ ಕೊಡುವುದು, ವಿಭೂತಿ ಕೊಡುವುದು, ಯಂತ್ರ ಮಂತ್ರಿಸಿ ಕೊಡುವುದು ಹನುಮಂತ ಪುರಾಣಿಕರ ಕಾಯಕವಾಗಿತ್ತು. ಪುರಾಣಿಕರು ಜೈಲು ಸೇರಿದ್ದರಿಂದ ಹಲವು ತಾಯಂದಿರಿಗೆ–ಅಜ್ಜಿಯರಿಗೆ ಅತೀವ ತೊಂದರೆಯಾಯಿತು. ಪುರಾಣಿಕರ ಹೆಂಡತಿ ಭಾಗೀರಥಿಬಾಯಿಯವರಿಗೆ ಸಾಂತ್ವನ ಹೇಳಲು ಹಲವಾರು ಹೆಂಗಸರು ಬಿಳಗಿಗೆ ಬಂದರು. ಜಿಲ್ಲಾ ಕಲೆಕ್ಟರ್ ಸಿದ್ದಾಪುರದಲ್ಲಿ ಇರುವ ಸಂಗತಿ ತಿಳಿದ ಹೆಂಗಳೆಯರು, ಅಜ್ಜಿಯರು, ವಿಧವೆಯರು ಕೆಂಪು ಸೀರೆ ಉಡುವ ಬೋಳಮ್ಮಂದಿರು ಹೀಗೆ ೧೫–೨೦ ಹೆಂಗಸರು ನಡೆದು ಸಿದ್ದಾಪುರಕ್ಕೆ ಬಂದಾಗ ಕ್ಲೀ ಸಾಹೇಬರು ಸಿರಸಿಗೆ ಹೊರಡುವುದರಲ್ಲಿದ್ದರು. ಹೆಂಗಸರೆಲ್ಲ ಅವರಲ್ಲಿ ಜಗಳ ಕಾದರು. ಬ್ರಿಟಿಷ್ ಸರಕಾರಕ್ಕೆ ಹಿಡಿಶಾಪ ಹಾಕಿದರು. ಬೋಲೋ ಭಾರತ ಮಾತಾ ಕಿ ಜೈ, ಗಾಂಧೀಜಿ ಕಿ ಜೈ ಎಂದು ಕೂಗಿದರು.

ಎರಡು ದಿನ ಕಳೆಯುತ್ತಲೇ ಬಿಳಗಿ ಸುತ್ತಲಿನ ಹೆಂಗಸರು ತಮ್ಮ ಹಿರಿಯರಿಗೆ–ಗಂಡಸರಿಗೆ ಸರಕಾರ ನೀಡುತ್ತಿರುವ ತೊಂದರೆಗೆ ತಾವೆಲ್ಲ ಗಾಂಧಿ ಮಾರ್ಗದಲ್ಲಿ ಪರಿಹಾರ ಒದಗಿಸಲು ಉಪಾಯ ಹುಡುಕಬೇಕೆಂದು ನಿರ್ಣಯಿಸಿದರು. ಜನಜಾಗೃತಿ ಮೂಡಿಸಲು ಊರಲ್ಲಿ ಪ್ರತಿದಿನ ಬೆಳಗ್ಗೆ ಪ್ರಭಾತಫೇರಿ ತೆಗೆಯುವುದು, ಕಾಂಗ್ರೆಸ್ ಝುಂಡಾ ವಂದನೆ ಪ್ರತಿದಿನ ಮಾಡುವುದು, ಮಕ್ಕಳಿಗೆ ದೇಶ ಭಕ್ತಿಗೀತೆ ಕಲಿಸುವುದೆಂದು ನಿರ್ಣಯಿಸಿದರು.



ಅದರಂತೆ ಮಂಜೈನ ದೇವ್ಯಾನಿ ಹರಿ ಪೈಯವರು ತಮ್ಮ ಮನೆ ಅಂಗಳದಲ್ಲಿ ಧ್ವಜಸ್ಥಂಭ ಒಂದನ್ನು ಸ್ಥಾಪಿಸಿದರು. ಸಮೀಪದ ಮನೆ ಹೆಂಗಸರನ್ನೂ ಊರ ಕೆಲ ಮಕ್ಕಳನ್ನೂ ಕರೆದುಕೊಂಡು ಪ್ರತಿದಿನ ಬೆಳಗ್ಗೆ ೯ ಘಂಟೆಗೆ ತನ್ನ ಮನೆಯ ಎದುರು ಕಾಂಗ್ರೆಸ್ ಝುಂಡಾಕ್ಕೆ ವಂದನೆ ಸಲ್ಲಿಸಿ, ಬ್ರಿಟೀಷರ ವಿರುದ್ಧ ಗಾಂಧೀಜಿ ಪರ ಘೋಷಣೆಗಳನ್ನು ಕೂಗುತ್ತ ಊರಲ್ಲಿ ಪ್ರಭಾತಫೇರಿ ಮಾಡಲು ಆರಂಭಿಸಿದರು. ದಿನಕಳೆದಂತೆ ಪ್ರಭಾತಫೇರಿಗೆ ಹೆಂಗಸರ ಹಾಗೂ ಮಕ್ಕಳ ಪಾಲ್ಗೊಳ್ಳುವಿಕೆ ಹೆಚ್ಚಾಗತೊಡಗಿತು. ಅತ್ತ ಲಕ್ಷ್ಯ ಕೊಟ್ಟ ಪೊಲೀಸರು ಒಂದೊಂದು ದಿನ ಹೆಂಗಸರನ್ನು–ಮಕ್ಕಳನ್ನು ಜಬರದಸ್ತಿಯಿಂದ ಪೊಲೀಸ್ ಸ್ಟೇಷನ್‌ಗೆ ಕರೆದೊಯ್ಯುವುದು, ಸಂಜೆ ತನಕ ಕೂಡ್ರಿಸಿಕೊಂಡು ರಾತ್ರೆ ಮನೆಗೆ ಬಿಡುತ್ತಿದ್ದರು. ಮಕ್ಕಳು ಹಸಿವಿನಿಂದ ಅಳುತ್ತಿದ್ದವು. ಬೇಸರದಿಂದ ತಾಯಂದಿರಿಗೆ ಮನೆಗೆ ಹೋಗಲು ಕಾಡುತ್ತಿದ್ದವು. ಆದರೆ ಪೊಲೀಸರು ತಡಮಾಡಿ ನಾಳೆ ಫೇರಿ ಮಾಡಬಾರದು ಎಂದು ಹೇಳಿ ಮನೆಗೆ ಬಿಡುತ್ತಿದ್ದರು. ಆದರೆ ದೇವಯಾನಿ ಬಾಯಿ ತಮ್ಮ ಹಟ ಸಾಧಿಸಿ ಪ್ರಭಾತಫೇರಿ ಸತತ ಮುಂದುವರಿಸಿದರು.

೧೯೩೨ರ ಮಾರ್ಚ್ ತಿಂಗಳ ಮೂರನೇ ವಾರ ೮–೧೦ ಮಕ್ಕಳ ಜೊತೆ ೪–೫ ಹೆಂಗಸರು ಘಟ್ಟಿಯಾದ ಧ್ವನಿಯಲ್ಲಿ ಜಯ ಘೋಷ ಕೂಗುತ್ತ ಪ್ರಭಾತ ಫೇರಿಗೆ ಹೊರಟಿದ್ದರು. ಓರ್ವ ಬಾಲಕ ಧ್ವಜ ಹಿಡಿದು ಮುಂದೆ–ಮುಂದೆ ಸಾಗುತ್ತಿದ್ದ. ಹಿಂದೆ ಮಕ್ಕಳು–ಹೆಂಗಸರು ಬರುತ್ತಿದ್ದರು. ಒಂದು ದಿನ ಸಿದ್ದಾಪುರದಿಂದ ಬಂದ ಫೌಜದಾರ ಫೇರಿಯಲ್ಲಿ ಹೋಗುತ್ತಿದ್ದ ಹುಡುಗನಿಂದ ಧ್ವಜ ಕಸಿದು ಕೊಳ್ಳಲು ಮುಂದಾದ. ಹುಡುಗ ಧ್ವಜ ಹಿಡಿದು ಕೊಸರಾಡಿ ಕೆಳಕ್ಕೆ ಬೀಳುತ್ತಿದ್ದ ಧ್ವಜ ಮೇಲಕ್ಕೆ ಎತ್ತಿ 'ಭಾರತ ಮಾತಾ ಕಿ ಜೈ' ಎಂದು ಕೂಗುತ್ತಿದ್ದ. ಇತರ ಮಕ್ಕಳು ಫೌಜದಾರನ ಅಂಗಿ–ಚಡ್ಡಿ ಹಿಡಿದು ಜಗ್ಗುತ್ತಿದ್ದರು. ಹೆಂಗಸರು ಫೌಜದಾರನೊಡನೆ ಜಗಳ ಕಾದರು. ಊರ ಜನ ಒಟ್ಟಿಗೆ ಸೇರಿದರು.

ಧ್ವಜ ಹಿಡಿದ ಬಾಲಕ ಮಾಧವ ಪೈ, ಅವನಿಗೆ ಸಹಾಯ ನೀಡಿದ ವೆಂಕಟೇಶ ನಾಗೇಶ ಪೈ, ಹಾಗೂ ಫೌಜದಾರನ ಅಂಗಿ–ಚಡ್ಡಿ ಎಳೆದ ಕುಮಾರಿ ಮಂಜುಳಾ ರಾಜವೈದ್ಯಳನ್ನು ಬಂಧಿಸಿ ಸಿದ್ದಾಪುರಕ್ಕೆ ಒಯ್ದರು, ಚೆನ್ನಾಗಿ ಹೊಡೆದು ಲಾಕಪ್ ನಲ್ಲಿ ಇಟ್ಟರು. ಅದೇ ದಿನ ರಾತ್ರೆ ಪುಂಡ್ಲೀಕ ಮಡಗಾಂವಕರ ಹಾಗೂ

ವಾಮನ ನಾಗೇಶ ಪೈಯವರು ಸೇರಿ ಊರಿನ ಪ್ರತಿ ಮನೆಯ ಗೋಡೆಯ ಮೇಲೆ ಅಳಿಸಲಾಗದ ಬಣ್ಣ ತಂದು ಧ್ವಜಗಳನ್ನು ಬಿಡಿಸಿದರು. ನಂತರ ಈ ಪರಿಪಾಠವನ್ನು ಹಲವು ಹಳ್ಳಿಗಳು ಅನುಸರಿಸಿದವು. ಪ್ರಭಾತಫೇರಿಗೆ ಯುವಕರು ಸೇರಬೇಕೆಂದು ನಿರ್ಣಯವು ಆಯಿತು. ಘಟನೆ ನಡೆದಿರುವುದು ಶುಕ್ರವಾರ ಆದ್ದರಿಂದ ಪೊಲೀಸರು ಮಕ್ಕಳನ್ನು ಸೋಮವಾರ ಕೋರ್ಟಿಗೆ ಹಾಜರುಪಡಿಸಿದರು. 'ಮಕ್ಕಳು ೩ ದಿನ ತಂದೆ–ತಾಯಿಯನ್ನು ಬಿಟ್ಟು ಲಾಕಪ್‌ನಲ್ಲಿ ಕಳೆದಿರುವ ಶಿಕ್ಷೆಯೇ ಸಾಕು, ಅವರನ್ನು ಬಿಟ್ಟು ಬಿಡಿ' ಎಂದು ಮ್ಯಾಜಿಸ್ಟ್ರೇಟ್ ತಿಳಿಸಿದರು.

೧೯೩೨ರ ಮೇ ಅಂತ್ಯಕ್ಕೆ ಬಿಳಗಿ ಹೆಂಗಸರು ಹೊಸದೊಂದು ರೀತಿಯ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಕಟ್ಟೆಕ್ಕೈ ಗ್ರಾಮದ ಪಟೇಲ ಅನಂತರಾಯ ಕುಲಕರ್ಣಿಯವರು ವಡಗೇರೆಯ ವೆಂಕಟ್ರಮಣ ಹೆಗಡೆಯವರ ಫೋರ್‌ಫೀಟ್ ಆದ ಭೂಮಿಯನ್ನು ಲಿಲಾವಿನಲ್ಲಿ ಕೊಂಡುಕೊಂಡಿದ್ದರು. ಅದನ್ನು ಮೂಲ ಮಾಲಿಕರಿಗೆ ಹಿಂತಿರುಗಿಸಬೇಕೆಂದು ದೇವಯಾನಿ ಪೈ, ಲಕ್ಷ್ಮಿಬಾಯಿ ಮಡಗಾಂವಕರ, ಪಂಡರಿಬಾಯಿ ಪೈ, ಹಾಗೂ ರಮಾಬಾಯಿ ಪ್ರಭು ಅವರು ಪಟೇಲ ಅನಂತರಾಯರ ಮನೆಯ ಜಗಲಿಯ ಮೇಲೆ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ದೇವಯಾನಿ ಪೈಯವರು ತಮ್ಮ ತೊಡೆಯ ಮೇಲೆ ಒಂದು ವರ್ಷದ ಮಗುವನ್ನು ಮಲಗಿಸಿಕೊಂಡಿದ್ದರು. ಅನಂತರಾಯರು ಅವರನ್ನು ಬೈಯ್ಯುತ್ತ ಕೋಲು ಎತ್ತಿ ಹೊಡೆಯಲು ಬಂದರು. ಒಬ್ಬೊಬ್ಬರನ್ನೇ ದೂಡಿದಾಗ ದೇವಯಾನಿಯವರ ತೊಡೆಯ ಮೇಲಿದ್ದ ಮಗು ಕಾಲುವೆಗೆ ಬಿದ್ದು ರಕ್ತ ಸುರಿಯಿತು. ಸುದ್ದಿ ಊರು ತಲುಪಿದಾಗ ಊರ ಯುವಕರು ಅನಂತರಾಯರ ವಿರುದ್ಧ ಘೋಷಣೆ ಕೂಗುತ್ತ ಅಲ್ಲಿಗೆ ಬಂದರು. ಪೊಲೀಸರು ವಾಮನ ಶಣೈ, ಉಪೇಂದ್ರ ಭಟ್ಟ, ಮತ್ತು ವಾಸುದೇವ ಪ್ರಭು ಅವರನ್ನು ದಸ್ತಗಿರಿ ಮಾಡಿದರು. ಎರಡನೆಯ ದಿನವೂ ಹೆಂಗಳೆಯವರ ಉಪವಾಸ ಸತ್ಯಾಗ್ರಹ ಮುಂದುವರೆಯಿತು. ಮೂರನೇ ದಿನ ಅನಂತರಾಯರು ಮನೆಯ ಜಗಲಿಯ ಮೇಲೆ ಹೆಂಗಳೆಯರು ಬಾರದಂತೆ ತಡೆದಾಗ ಮನೆಯ ಎದುರು ರಸ್ತೆಯಲ್ಲಿ ಕುಳಿತು ದೇವರ ಭಜನೆ ಹೇಳುತ್ತ ಉಪವಾಸವಿದ್ದು ಸತ್ಯಾಗ್ರಹ ಮುಂದುವರೆಸಿದರು. ನಾಲ್ಕನೇ ದಿನ



ಭಾಗೀರಥಿ ಬಾಯಿ ಪುರಾಣಿಕರು ಉಪವಾಸ ಸತ್ಯಾಗ್ರಹಿಗಳನ್ನು ಸೇರಿಕೊಂಡಾಗ ಪೋಲೀಸರು ದೇವಯಾನಿ ಪೈ, ಪುಂಡರೀಬಾಯಿ ಪೈ, ಹಾಗೂ ರಮಾಬಾಯಿ ಪ್ರಭುರವರುಗಳನ್ನು ಬಂಧಿಸಿ ಸಿದ್ದಾಪುರಕ್ಕೆ ಕಳಿಸಿದರು. ಐದನೇ ದಿನ ಮತ್ತೆ ಕೆಲ ಹೆಂಗಸರು ಉಪವಾಸ ಸತ್ಯಾಗ್ರಹಕ್ಕೆ ಸೇರಿಕೊಂಡಾಗ ಅನಂತರಾಯ ಕುಲಕರ್ಣಿಯವರ ಮನ ಪರಿವರ್ತನೆಯಾಗಿ ತಾನು ಲಿಲಾವಿನಲ್ಲಿ ಹಿಡಿದ ಭೂಮಿಯನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಿದರು. ಸಂತಸಗೊಂಡ ಸತ್ಯಾಗ್ರಹಿಗಳು ಉಪವಾಸ ಸತ್ಯಾಗ್ರಹ ಹಿಂಪಡೆದರು. ಮಹಿಳಾ ಕೈದಿಗಳಿಗೆ ೬ ರಿಂದ ೮ ತಿಂಗಳ ಜೈಲುವಾಸ ಶಿಕ್ಷೆ ಆಯಿತು. ದೇವಯಾನಿ ಪೈಯವರು ಒಂದು ವರ್ಷದ ಮಗ ಪುಂಡ್ಲೀಕನೊಡನೆ ಶಿಕ್ಷೆ ಅನುಭವಿಸಿದರು. ಪುರುಷ ಕೈದಿಗಳಿಗೆ ತಲಾ ೯ ತಿಂಗಳ ಜೈಲು ಶಿಕ್ಷೆ ವಿಧಿಸಲಾಗಿತ್ತು.

೧೯೩೨ರ ಸಪ್ಟೆಂಬರ್ ಅಂತ್ಯಕ್ಕೆ ಸಿದ್ದಾಪುರ ತಾಲ್ಲೂಕಿನಲ್ಲಿ ರಾಜಕೀಯ ಪರಿಷತ್ತಿನ ಸಭೆಯನ್ನು ಕರೆಯಲು ನಿರ್ಧರಿಸಿ ರಾಜ್ಯದ ಬಹು ಭಾಗದ ಜನರಿಗೆ ಆಹ್ವಾನ ನೀಡಲಾಗಿತ್ತು. ಬೆಂಗಳೂರು, ಮೈಸೂರು, ಬಿಜಾಪುರ, ಗದಗ, ಹಾಗೂ ರಾಣೇಬೆನ್ನೂರು ವಿಭಾಗದಿಂದಲೂ ಜನರು ಬರುವ ಸಾಧ್ಯತೆ ಹೆಚ್ಚಾಗಿತ್ತು. ಸಭೆಯ ಸ್ಥಳವನ್ನು ಗುಪ್ತವಾಗಿರಿಸಲು ನಿರ್ಧರಿಸಲಾಗಿತ್ತು. ಪೊಲೀಸರು ಈ ಸಭೆ ಸಿದ್ದಾಪುರ ತಾಲ್ಲೂಕಿನ ಗಡಿಯಾದ ತಡಗಡಲೆಯಲ್ಲಿ ನಡೆಯ ಬಹುದೆಂದು ನಿರೀಕ್ಷಿಸಿ ಆ ಬದಿಯಲ್ಲಿ ವಿಶೇಷ ಕಾವಲು ಇರಿಸಿದ್ದರು. ಆದರೆ ಸಭೆಯನ್ನು ಸಿದ್ದಾಪುರದಿಂದ ೫ ಮೈಲಿ ದೂರದ ಭುವನಗಿರಿಯಲ್ಲಿ ನಡೆಸುವುದೆಂದು ನಿರ್ಣಯವಾಗಿ ಸಭೆ ಬೆಳಿಗ್ಗೆ ೧೦ ಘಂಟೆಗೆ ಪ್ರಾರಂಭವಾಯಿತು. ಸುಮಾರು ೬೦೦ ಮಂದಿ ಸೇರಿದ್ದರು. ಹೊಸೂರ ರಾಮ ನಾಯ್ಕ ಅಧ್ಯಕ್ಷರಾದರು. ಬಿಳಗಿ ರಾಮಪ್ಪ ಪೈ ಸ್ವಾಗತಾಧ್ಯಕ್ಷರಾದರು. ಸಭೆಯಲ್ಲಿ ಶ್ರೀಮತಿ ಗೋದಾಬಾಯಿ ಯಾನೆ ಸೀತಾಬಾಯಿ ಮಡಗಾಂವಕರ ಜಂಗಲ್ ಸತ್ಯಾಗ್ರಹ ಕುರಿತು ಸರಕಾರದ ವಿರುದ್ಧ ಭಾಷಣ ಮಾಡಿದರು.

ಸಭೆಯ ನಂತರ ಜನಸಮುದಾಯ ಮೆರವಣಿಗೆಯಿಂದ ವಾದ್ಯ–ಡೊಳ್ಳು ಸಮೇತವಾಗಿ ೫ ಮೈಲಿ ನಡೆದು ತಾಲ್ಲೂಕು ಕಚೇರಿ ಮುಂದೆ ಸಾಗುತ್ತಿದಂತೆ ಪೊಲೀಸರು ಲಾಠಿ ಚಾರ್ಜ್ ಮಾಡಿದರು. ಬಹಳ ಮಂದಿಗೆ ಹೊಡೆತ ಬಿದ್ದು ಗಾಯಗಳಾದವು. ಸಿದ್ದಾಪುರದ ಶ್ಯಾಮಯ್ಯರವರ ತಲೆಗೆ ಪೆಟ್ಟು ಬಿದ್ದು ರಕ್ತ

ಸುರಿಯಿತು. ಮುಖಂಡರೆನಿಸಿದ ೧೮ ಮಂದಿಯನ್ನು ಕೈದು ಮಾಡಿದರು. ಹೊಸೂರು ರಾಮ ನಾಯ್ಕ, ಬಿಳಗಿ ರಾಮಪ್ಪ ಪೈ, ಶಾಮಯ್ಯ ಸಿದ್ದಾಪುರ, ಹೆಗಡೆಮನೆ ವೀರಭದ್ರ, ಹಾಗೂ ಶ್ರೀಮತಿ ಸೀತಾಬಾಯಿ ಮಡಗಾಂವಕರರನ್ನು ಬಂಧಿಸಿದ್ದರು. ಇತರ ಜಿಲ್ಲೆಯಿಂದ ಬಂದವರನ್ನು ಬಂಧಿಸಿದ್ದರು. ಕೋರ್ಟ್‌ನಲ್ಲಿ ಪ್ರತಿ ಓರ್ವರಿಗೆ ೧೮ ತಿಂಗಳ ಜೈಲು ಶಿಕ್ಷೆಯಾಯಿತು. ಶ್ರೀಮತಿ ಸೀತಾಬಾಯಿ ಮಡಗಾಂವಕರರಿಗೆ ೯ ತಿಂಗಳ ಜೈಲುವಾಸ ಶಿಕ್ಷೆಯಾಯಿತು. ಅವರು ೫ ತಿಂಗಳ ಮಗ ರಮಾಕಾಂತ ನೊಡನೆ ಜೈಲುವಾಸ ಅನುಭವಿಸಿದರು.

ಆ ಮೊದಲು ಗೋದಾಬಾಯಿ ಬಾಣಂತನಕ್ಕೆಂದು ತವರು ಮನೆ ಸಿದ್ದಾಪುರದ ಹರಿಯಪ್ಪ ಚಂದ್ರಘಟ್ಗಿಯವರಲ್ಲಿ ಇದ್ದಾಗ ಅಕ್ಕುಂಜೆ ಅಣ್ಣಾಜಿ ಗೌಡರು ಕರನಿರಾಕರಣ ಚಳವಳಿಯಲ್ಲಿ ಲಿಲಾವಾದ ನಾಲ್ಕಾರು ದನಗಳನ್ನು ಕೊಂಡುಕೊಂಡರೆಂದು ತಿಳಿದಾಗ ಅವರ ಮನೆ ಎದರು ಉಪವಾಸ ಕೂಡ್ರಲು ತನ್ನ ದೊಡ್ಡಮ್ಮ ಸತ್ಯಭಾಮಾರನ್ನು ಕರಕೊಂಡು ದನಗಳನ್ನು ಮೂಲ ಮಾಲಿಕರಿಗೆ ಹಿಂತಿರುಗಿಸಬೇಕೆಂದು ಮನವೊಲಿಸಲು ಉಪವಾಸ ಸತ್ಯಾಗ್ರಹ ಮಾಡಿದರು. ಬಾಣಂತನದ ಅಶಕ್ತತೆಯಿಂದ ಕಣ್ಣು ಕತ್ತಲೆ ಬಂದು ಬಿದ್ದರು. ಹಟ ಬಿಡದೆ ತಮ್ಮ ಗುರಿ ಸಾಧಿಸಲು ೪ ದಿನಕ್ಕೆ ಯಶಸ್ವಿಯಾದರು.

## ಅಧ್ಯಾಯ–೧೦

## ಯುವಕರಲ್ಲಿ ಕ್ರಾಂತಿಕಾರಿ ಮನೋಭಾವ

ಯುವ ಜನತೆ ಶೌರ್ಯ–ಧೈರ್ಯದಿಂದ, ದೇಶಾಭಿಮಾನ–ಸ್ವಾಭಿಮಾನಗಳಿಂದ ಕೂಡಿ ನೀತಿವಂತರಾಗಲು ಡಾ॥ ನಾ.ಸು.ಹರ್ಡಿಕರರ ಸೇವಾದಳ ತರಬೇತಿ ಪಡೆಯುವುದು ಅತ್ಯವಶ್ಯವೆಂದು ಶ್ರೀ ರಂಗನಾಥ ದಿವಾಕರರು ಕಾಂಗ್ರೆಸ್ ಸಮಿತಿಯಲ್ಲಿ ಪ್ರತಿಪಾದಿಸಿದ್ದರು. ಅವರಿಂದ ೧೯೨೮ರ ಮೊದಲು ಸಿದ್ದಾಪುರ ತಾಲ್ಲೂಕಿನ ಸಿರಸಿ ತಾಲ್ಲೂಕು ಗಡಿಯಲ್ಲಿರುವ ಹೇರೂರಲ್ಲಿ ತರಬೇತಿ ನೀಡುವ ಕ್ರಮ ಪ್ರಾರಂಭಿಸಿಲಾಗಿತ್ತು. ಪ್ರತಿ ೧೦ ದಿನಕ್ಕೆ ೧೫–೨೦ ಯುವಕರ ಒಂದು ಗುಂಪಿಗೆ ತರಬೇತಿ ನೀಡಲಾಗುತ್ತಿತ್ತು. ಇದು ಸರಕಾರದ ಧೋರಣೆಗಳ ವಿರುದ್ಧ ಉಪದೇಶಿಸುವ ಸಭೆಗಳೆಂದು ಸರಕಾರಿ ಅಧಿಕಾರಿಗಳು



ಭಾವಿಸಿ ತಾಲ್ಲೂಕು ಮಾಮಲೇದಾರರು ಕಾಲ–ಕಾಲಕ್ಕೆ ಶಿಬಿರಗಳಿಗೆ ಭೇಟಿ ನೀಡಿ ಶಿಬಿರಾರ್ಥಿಗಳಿಗೆ ಹೆದರಿಸುವುದು–ಬೆದರಿಸುವುದು, ಶಿಬಿರಕ್ಕೆ ಬರಕೂಡದೆಂದು ನಿರ್ದೇಶಿಸುತ್ತಿದ್ದರು.

೧೯೩೦ರ ಆಗಸ್ಟ್ ತಿಂಗಳಲ್ಲಿ ಒಂದು ದಿನ ಹೇರೂರು ಶಿಬಿರಕ್ಕೆ ಮಾಮಲೇದಾರರು ಭೇಟಿ ನೀಡಿ ಅಲ್ಲಿದ್ದ ೨೫ ಶಿಬಿರಾರ್ಥಿಗಳಿಗೆ ಹೆದರಿಸಿ ಬೈದು ಕೈಯಲ್ಲಿರುವ ಬೆತ್ತದಿಂದ ಬಿಳಗಿ ವಾಮನ ಶಣ್ಯೆಯವರ ಕಿರಿಯ ಮಗ ಶ್ರೀನಿವಾಸನಿಗೆ ಹೊಡೆಯಲು ಹೋದರು. ಅವರ ಕೈ ಒಳಗಿನ ಬೆತ್ತ ಕಸಿದುಕೊಂಡ ಶ್ರೀನಿವಾಸ, ಹೊಡೆಯುವದು ಪೊಲೀಸರ ಕೆಲಸ, ನೀವು ಮಾಮಲೇದಾರರಲ್ಲವೇ? ಎಂದು ಪ್ರಶ್ನಿಸಿದ. ಇದರಿಂದ ದಂಗಾದ ಮಾಮಲೇದಾರರು ಅವನನ್ನು ಎತ್ತಿಕೊಂಡು ವಾಹನ ಏರಿ ಸಿದ್ದಾಪುರಕ್ಕೆ ಬಂದು ಮನೆಗೆ ಕರೆದೊಯ್ದು ಈ ರೀತಿ ನಡವಳಿಕೆ ಸರಿಯಲ್ಲವೆಂದು ಉಪದೇಶಿಸಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವು ಕಡೆ ಯುವ ಸಂಘಗಳನ್ನು ಪ್ರಾರಂಭಿಸಿ 'ವಾನರಸೇನೆ' ಎಂಬ ಹೆಸರಿನಿಂದ ಗಾಂಧೀಜಿ ಅನುಯಾಯಿಗಳಿಗೆ, ಕರನಿರಾಕಣೆ ಮಾಡುವವರಿಗೆ, ರಾಷ್ಟ್ರೀಯ ಶಾಲಾ ಶಿಕ್ಷಕರಿಗೆ, ಉಪವಾಸ ಸತ್ಯಾಗ್ರಹಿಗಳ, ಮಹಿಳಾ ಕಾರ್ಯಕರ್ತರಿಗೆ ಅವಶ್ಯವಾದ ಸಹಾಯ ಮಾಡತೊಡಗಿದರು. ವಯಸ್ಸಿನಲ್ಲಿ ೧೦–೧೨ ವರ್ಷ ಇರುವ ಮಕ್ಕಳು ವಾನರ ಸೇನೆಯ ಕಾರ್ಯಕರ್ತರಾಗಿ ಮಹಿಳಾ ಸತ್ಯಾಗ್ರಹಿಗಳಿಗೆ, ಮುಷ್ಟಿ ಫಂಡ್ ಸಂಗ್ರಹಿಸುವಲ್ಲಿ, ವಸೂಲಿಮಾಡುವಲ್ಲಿ–ಡಬ್ಬಿ ಹಿಡಿದು ಮೆರವಣಿಗೆ ಮಾಡಿ ನಿಧಿ ಸಂಗ್ರಹಿಸುವಲ್ಲಿ ತುಂಬಾ ಸಹಾಯಕರಾಗಿದ್ದರು. ಪ್ರತಿದಿನ ಪ್ರಭಾತಫೇರಿಗೆ ಜನರನ್ನು ಕರೆಯುವಲ್ಲಿ ದುಡಿಯುತ್ತಿದ್ದರು. ಮಹಿಳಾ ಕಾರ್ಯಕರ್ತರಿಗೆ, ಉಪವಾಸ ಸತ್ಯಾಗ್ರಹಿಗಳಿಗೆ ತೊಂದರೆ ಉಂಟಾದರೆ ವಾನರಸೇನಾ ಕಾರ್ಯಕರ್ತರಿಗೆ ಸಹನೆ ಆಗುತ್ತಿರಲಿಲ್ಲ. ಸರಕಾರಿ ಅಧಿಕಾರಿಗಳ, ಪೊಲೀಸರ ದೌರ್ಜನ್ಯಕ್ಕೆ ತೀವ್ರ ಪ್ರತಿಕ್ರಿಯೆ ನೀಡುತ್ತಿದ್ದರು.

೧೯೩೨ರ ನವೆಂಬರ್ ಎರಡನೇ ವಾರ ಬೇಡ್ಕಣಿ–ಹುಲಿಮನೆಯಲ್ಲಿ ತಾಲ್ಲೂಕು ಮಹಿಳಾ ಪರಿಷತ್ ಕರೆಯಲಾಗಿತ್ತು. ಅದಕ್ಕೆ ಬಿಳಗಿ ತಾರಾ ಪೈ ಹಾಗೂ ಮಳಿಕೈ ಮಹಾದೇವಿಯವರು ಸ್ವಾಗತ ಭಾಷಣ ಮಾಡಿದರು. ಸಭೆಯ

ನಂತರ ಮೆರವಣಿಗೆ ಬಿಳಗಿಗೆ ಬರುತ್ತಲೇ ಹರುನ್ ಎಂಬ ಪೊಲೀಸ್ ಲಾಠಿ ಚಾರ್ಜ್ ಮಾಡಿ ಹಲವು ಮಹಿಳೆಯರಿಗೆ ಹೊಡೆದ. ತಾರಾ ರಾಮ ಪೈಯವರಿಗೆ, ಮಳ್ಳಿಕೈ ಮಹಾದೇವಿಯವರ ಕಾಲುಗಳಿಗೆ ಚೆನ್ನಾಗಿ ಥಳಿಸಿದ. ಇದರಿಂದ ರೋಷಗೊಂಡ ವಾನರಸೇನೆಯ ಕೆಲ ಸದಸ್ಯರು ಪೊಲೀಸ್ ಹರುನ್ ಬಿಳಗಿಗೆ ಬಂದಾಗ ಮುಖಕ್ಕೆ ಸಗಣಿ ಹೊಡೆದು ಓಡಿ ಹೋದರು. ಅದರ ಮರುದಿನ ಲಿಮೇಯ ಎಂಬ ಫೌಜದಾರ ಬಿಳಿಗಿಯ ಸೀತಾರಾಮ ದೇವಸ್ಥಾನದಲ್ಲಿ ಭಜನೆಗೆ ಕುಳಿತ ಹುಡುಗರಿಗೆ ಲಾಠಿಯಿಂದ ಹೊಡೆದು ೬ ಮಂದಿಯನ್ನು ಸ್ಟೇಷನ್‌ಗೆ ಎಳೆದೊಯ್ದ.

೧೯೩೩ರ ಜನವರಿಯಲ್ಲಿ ಜಿಲ್ಲಾಧಿಕಾರಿ ಹಿರೇಮಠ ಬಿಳಗಿಗೆ ಬರುವವರಿದ್ದರು. ಈ ಸಂಗತಿ ಅರಿತ ವಾನರ ಸೇನಾ ಸದಸ್ಯರು ಮೊದಲ ರಾತ್ರಿ ಹಿರೇಮಠ ಗೋ ಬ್ಯಾಕ್ ಎಂಬ ಬೋರ್ಡ್ ಬರೆದು ಅದಕ್ಕೆ ಹರಿದ ಚಪ್ಪಲ್, ಮೊಂಡಾದ ಪೊರಕೆಗಳನ್ನು ಕಟ್ಟಿ ಊರ ಬಾಗಿಲಲ್ಲಿ ನಾಲ್ಕು ಕಡೆ ಕಟ್ಟಿದ್ದರು. ವಿಷಯ ಅರಿತ ಮಾಮಲೆದಾರರು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಹಿರೇಮಠರ ಕಾರ್ಯಕ್ರಮ ರದ್ದಾಯಿತು.

ಕರಬಂದಿಯಲ್ಲಿ ಜಪ್ತಾದ ಮಾಲು ಖರೀದಿಸಲು ಲಿಲಾವಿನಲ್ಲಿ ಯಾರೂ ಭಾಗವಹಿಸಲು ಬರದಂತೆ ವಾನರ ಸೇನೆ ಪ್ರಚಾರ ನಡೆಸಿತು. ಆದರೆ ಹೊನ್ನಾವರ ಕರ್ಕಿಯ ಹೊಸಬೆ ನಾಯ್ಕ ಬಿಳಗಿಗೆ ಬಂದು ಜಪ್ತಿಯಾದ ಅಡಿಕೆ ಖರೀದಿಸಿದ. ಅದನ್ನು ಸಿರಸಿ ಮಾರ್ಕೆಟ್‌ಗೆ ಒಯ್ಯಲು ಎತ್ತಿನಗಾಡಿಯಲ್ಲಿ ಹೇರಿ ರಾತ್ರೆ ಪಟೇಲ ಅನಂತ ರಾಯರಲ್ಲಿ ನಿಲ್ಲಿಸಿದ. ನಾಲ್ವರು ಎತ್ತಿನಗಾಡಿಯ ಚಕ್ರದ ಕೀಲುಗಳನ್ನು ಕದ್ದು ಅಡಗಿಸಿ ಇಟ್ಟರು. ಮರುದಿನ ಹೊಸಬೆ ನಾಯ್ಕ ಮೋಟಾರ ವಾಹನ ತರಿಸಿ ಅಡಿಕೆಯನ್ನು ಹೇರಿ ಪಟೇಲ ಅನಂತ ರಾಯರಲ್ಲಿ ನಿಲ್ಲಿಸಿದ. ಆ ರಾತ್ರಿ ಪುನಃ ನಾಲ್ವರು ಯುವಕರು ಗುಡಿಗಾರ ಮರಕೊಯ್ಯುವ ವಜ್ರಾಯುಧ ಬಳಸಿ ಮೋಟಾರ ಟೈರ್ ಒಡೆದು ಕತ್ತಲಲ್ಲಿ ಮರೆಯಾಗಿ ಹೋದರು. ಹೊಸಬೆ ನಾಯ್ಕ ಬಿಳಗಿಗೆ ಬರುವುದನ್ನು ಬಿಟ್ಟುಬಿಟ್ಟ.

೧೯೩೩ರ ಫೆಬ್ರುವರಿಯಲ್ಲಿ ಭಾನ್ಕುಳಿ ಹೆಗಡೆಯವರ ೫ ಎಕರೆ ಕಬ್ಬು ಬೆಳೆ ಲಿಲಾವಾಗಿತ್ತು. ಪರ ಊರಿನ ಹಾಲಪ್ಪ ಮಾಸ್ತರ ಎನ್ನುವವರು ಲಿಲಾವಿನಲ್ಲಿ ಖರೀದಿಸಿದ್ದರು. ಒಂದು ರಾತ್ರಿ ಯಾರೋ ಕಬ್ಬಿನ ಗದ್ದೆಗೆ ಬೆಂಕಿ ಇಟ್ಟರು. ಮರುದಿನ ಪೊಲೀಸರು ಸಮೀಪದ ಗೋಳಿಕೈ–ಬೈಲಳ್ಳಿಯ ಕೆಲ ಯುವಕರನ್ನು ಸಂಶಯದ ಮೇಲೆ ದಸ್ತಗಿರಿ ಮಾಡಿ ಸಿದ್ದಾಪುರಕ್ಕೆ ಒಯ್ದರು. ಅವರಿಗೆ ಎಂಟು ತಿಂಗಳ ಜೈಲು ಶಿಕ್ಷೆ ಹಾಗೂ ೫೦ ರೂಪಾಯಿ ದಂಡ ವಿಧಿಸಲಾಗಿತ್ತು.

೧೯೩೩ರ ಡಿಸೆಂಬರ್‌ನಲ್ಲಿ ಹೂವಿನಮನೆ ತಿಮ್ಮಯ್ಯ ಹೆಗಡೆಯವರ ತೋಟದ ೩ ಸಾವಿರ ಅಡಿಕೆ ಕೊನೆ ಲಿಲಾವಾಯಿತು. ಹೊಸಬೆ ನಾಯ್ಕ ಅದನ್ನು ಖರೀದಿಸಿದ. ಒಂದು ವರ್ಷ ಮೊದಲು ತಿಮ್ಮಯ್ಯ ಹೆಗಡೆಯವರ ಮನೆಯಲ್ಲಿ ಲೀಲಾವಿನಲ್ಲಿ ಖರೀದಿಸಿದ್ದ. ಅಡಿಕೆ ಬೆಳೆಯನ್ನು ಕೊಯ್ದು ಪೊಲೀಸರ ಸಮ್ಮುಖದಲ್ಲಿಯೇ ಮನೆಯಲ್ಲಿ ಸೇರಿಸಿಟ್ಟು ಬೀಗ ಹಾಕಿ ಕೆಲಸಕ್ಕೆ ಆಳುಗಳನ್ನು ತರಲು ಹೊನ್ನಾವರಕ್ಕೆ ಹೋಗಿದ್ದ. ಈ ಅಡಿಕೆ ಬೆಳೆ ಹೊಸಬೆ ನಾಯ್ಕರ ಕೈ ಸೇರಬಾರದು ಎಂದು ಸಮೀಪದ ಊರಿನ ಹತ್ತು ಮಂದಿ ಸೇರಿ ಆ ಮನೆಯ ಬೀಗ ಮುರಿದು ಒಂದೇ ರಾತ್ರಿಯಲ್ಲಿ ೩೦೦೦ ಅಡಿಕೆ ಕೊನೆಗಳನ್ನು ಎರಡು–ಮೂರು ಮೈಲು ಸಾಗಿಸಿ ಹಳ್ಳ–ಕೊಳ್ಳ–ನದಿಗೆ ಎಸೆದು ಕೈಗೆ ಸಿಗದಂತೆ, ಕಣ್ಣಿಗೆ ಕಾಣದಂತೆ ಮಾಡಿದರು. ವಿಷಯ ಪತ್ತೆಹಚ್ಚಿದ ಪೊಲೀಸರು ಸಮೀಪದ ಊರುಗಳಿಂದ ೮ ಮಂದಿಯನ್ನು ಬಂಧಿಸಿದರು. ಅವರಲ್ಲಿ ನಾಲ್ವರಿಗೆ ೩.೫ ವರ್ಷ ಜೈಲುಶಿಕ್ಷೆ ಹಾಗೂ ನಾಲ್ವರಿಗೆ ಒಂದೂವರೆ ವರ್ಷ ಶಿಕ್ಷೆ ಆಯಿತು.

ಆದರೆ, ತಾಲ್ಲೂಕಿನ ಮುಖಂಡರೆಲ್ಲ ಈ ರೀತಿ ಪ್ರತಿರೋಧ ಕ್ರಮಕ್ಕೆ ಬೇಸರಗೊಂಡರು. ಹಿರಿಯರಾದ ಶ್ರೀ ಹರಿ ರಾಮಕೃಷ್ಣ ರಾಜವೈದ್ಯ, ಶ್ರೀ ನಾರಾಯಣ ಪೈ ಮೂಡ್ಲಗಿರಿ, ಶ್ರೀ ನಾಗೇಶ ಹೆಗಡೆ ದೊಡ್ಮನೆ, ಶ್ರೀ ಶಂಕರ ಗುಲ್ವಾಡಿ, ಮತ್ತು ಶ್ರೀ ಸೀತಾರಾಮ ಹೆಗಡೆ ತಾರಖಂಡ ಮುಂತಾದವರು ಊರ ಯುವಕರನ್ನು ಕರೆದು ಬುದ್ಧಿವಾದ ಹೇಳಿದರು. ಗಾಂಧೀಜಿ ತತ್ವಕ್ಕೆ ವಿರುದ್ಧವಾಗಿ ನೀವೆಲ್ಲ ಹಿಂಸಾಮಾರ್ಗ ತುಳಿದರೆ ನಾವೆಲ್ಲ ನಿಮ್ಮ ವಿರುದ್ಧ ಉಪವಾಸ ಸತ್ಯಾಗ್ರಹ ಪ್ರಾರಂಭಿಸುವುದಾಗಿ ಹೆದರಿಸಿದರು. ಇದರಿಂದ ಯುವಕರಲ್ಲಿ ರೋಷ ಕಡಿಮೆಯಾದರೂ ಈರ್ಷ್ಯೆ ಕಡಿಮೆಯಾಗಲಿಲ್ಲ. ಸರಕಾರಿ ಅಧಿಕಾರಿಗಳ ವಿರುದ್ಧ ತಾತ್ಸಾರ ಹೆಚ್ಚಾಯಿತು.

ಇತ್ತ ಸರಕಾರಿ ಅಧಿಕಾರಿಗಳು ದಂಡ ವಸೂಲಿ ಕ್ರಮ ತೀವ್ರಗೊಳಿಸಿದರು. ಅಂಗಡಿಗಳಿಗೆ ನುಗ್ಗಿ ಹಣದ ಪೆಟ್ಟಿಗೆ ಬೀಗ ಒಡೆದು ದಂಡ ವಸೂಲಿ ಮಾಡುತ್ತಿದ್ದರು. ಮನೆ–ಮನೆಗಳಿಗೆ ನುಗ್ಗಿ ಚರಾಸ್ತಿ–ಜಿಂದಗಿ ಜಪ್ತಿ ಮಾಡುತ್ತಿದ್ದರು. ಸಾಮಾನ್ಯ ಜನರನ್ನು ಸ್ಟೇಷನ್ನಿಗೆ ಕರೆದೊಯ್ದು ಅಲ್ಲ–ಸಲ್ಲದ ಪ್ರಶ್ನೆಗಳನ್ನು ಕೇಳಿ ಮಾಹಿತಿ ಸಂಗ್ರಹಕ್ಕಾಗಿ ಎಂದು ಪೀಡಿಸುತ್ತಿದ್ದರು, ಕೆಲವೊಮ್ಮೆ ಥಳಿಸಿದ್ದೂ ಇದೆ. ಇದರಿಂದ ಸಾಮಾನ್ಯ ಕಾರ್ಯಕರ್ತರು ರೋಷಗೊಂಡರು. ಸಂರಕ್ಷಣಾ ಕ್ರಮಕ್ಕಿಂತ ಆಕ್ರಮಣಕಾರಿ ಮನೋಭಾವ ಅವರಲ್ಲಿ ಬೆಳೆಯತೊಡಗಿತು. ಸರಕಾರಿ ನೌಕರರ ಕುರಿತು ಅಸೂಯೆ–ತಾತ್ಸಾರ ಮೂಡತೊಡಗಿತು. ಕಿರಾಣಿ ಅಂಗಡಿಯವರು ನೌಕರರಿಗೆ ಆಹಾರಧಾನ್ಯ–ಆಹಾರ ಸಾಮಗ್ರಿ, ಕಾಳು–ಕಡಿ ಕೊಡುತ್ತಿರಲಿಲ್ಲ. ಅವರಿಗೆ ಮನೆ ಬಾಡಿಗೆಗೆ ಕೊಡುತ್ತಿರಲಿಲ್ಲ, ಹಾಲು ಪೂರೈಸುತ್ತಿರಲಿಲ್ಲ, ಚಹಾ ಅಂಗಡಿಯವರು ಚಹ–ತಿಂಡಿ ಕೊಡುತ್ತಿರಲಿಲ್ಲ, ಗೃಹಸ್ಥರು ಅವರೊಡನೆ ಸಹಜ ಮಾತುಕತೆ ಮಾಡುತ್ತಿರಲಿಲ್ಲ. ರೋಷಗೊಂಡ ಚಳವಳಿಕಾರರು ಪ್ರತಿರೋಧವಾಗಿ ಸರಕಾರದ ಸಂಪರ್ಕ ಸಾಧನಗಳಾದ ಟೆಲಿಫೋನ್ ತಂತಿ ತುಂಡರಿಸಿದರು, ಅಂಚೆಚೀಲಗಳನ್ನು ಕುಸಿದುಕೊಂಡರು, ಸೇತುವೆಗಳನ್ನು ನಾಶಗೊಳಿಸಿದರು, ಪುನಃ ವಿಧ್ವಂಸಕ ಕೃತ್ಯಗಳು ಪ್ರಾರಂಭ ವಾದವು.

ಪರಜಿಲ್ಲೆಗಳಲ್ಲಿ ವಿಧ್ವಂಸಕ ಕೆಲಸಗಳು ಪ್ರಾರಂಭವಾಗಿವೆ ಎಂದು ತಿಳಿದಾಗ ಸಿರಸಿ– ಸಿದ್ದಾಪುರ ಚಳವಳಿ ಕಾರ್ಯಕರ್ತರು ಪ್ರಮುಖ ಪ್ರಸಾರಮಾಧ್ಯಮವಾದ ತಾರತಂತಿ ಕಡಿದು ಹಾಕತೊಡಗಿದರು. ಇದರಿಂದ ಸಿವಳ್ಳಿ ಕೃಷ್ಣಯ್ಯ ಹೆಗಡೆ, ಸಿದ್ದಾಪುರದ ಪದ್ಮಾಕರ ಕಾನಗೋಡ, ಬಿಳಗಿ ಶ್ರೀನಿವಾಸ ಮಡಗಾಂವಕರ, ಗಂಗಾಧರ ಶ್ಯಾನಭಾಗ, ಶಾರದಾಬಾಯಿ ಶ್ಯಾನಭಾಗ, ಹಾಲದಕಟ್ಟಾದ ಭವಾನಿ ಕಾನಗೋಡ, ಸಿದ್ದಾಪುರದ ಮೆಂಕಟೇಶ ಭಟ್ಟ ಹಾಗೂ ಅವರ ಪತ್ನಿ ವರದಾ ಭಟ್ಟರನ್ನು ದಸ್ತಗಿರಿ ಮಾಡಿ ಐದಾರು ತಿಂಗಳ ಜೈಲುವಾಸ ಶಿಕ್ಷೆಯಾಯಿತು. ಸಿದ್ದಾಪುರ ತಾಲ್ಲೂಕಿನಲ್ಲಿ ಮಲವಳ್ಳಿ ರಾಮಚಂದ್ರ ಹೆಗಡೆ, ಮನಮನೆ ಕೊಲ್ಲಾ ಮಂಜಾ ನಾಯ್ಕ, ಬಂಗಾದ್ಯಾ ನಾಯ್ಕ, ಕಾಡನದೇವಾ ನಾಯ್ಕ, ಮಾರ್ಯಾ ನಾಯ್ಕ ಮೊದಲಾದ ೧೫ ಜನರಿಗೆ ಜೋಗಾ ರಸ್ತೆ ಸೇತುವೆ ಮುರಿದುಹಾಕಿ ವಾಹನ ಸಂಚಾರಕ್ಕೆ ತೊಂದರೆ ಮಾಡಿದರೆಂದು



ದಸ್ತಗಿರಿ ಮಾಡಲಾಯಿತು. ಬಹಳ ದಿನ ವಿಚಾರಣೆ ನಡೆಸಿ ಪ್ರತಿ ಓರ್ವರಿಗೆ ಐದೈದು ವರ್ಷ ಜೈಲುಶಿಕ್ಷೆ ವಿಧಿಸಿದರು. ಮುಖಂಡರೆನಿಸಿದ ಮಲವಳ್ಳಿ ರಾಮಚಂದ್ರ ಹೆಗಡೆಯವರಿಂದ ೨೦೦೦ ರೂಪಾಯಿ ಪುಂಡುಗಂದಾಯ ವಸೂಲಿ ಮಾಡಲಾಯಿತು. ಭೂಗತರಾಗಿದ್ದ ಕನ್ನಳ್ಳಿ ಶಿವರಾಮ ಹೆಗಡೆ, ಪೈ ಡಾಕ್ಟರ್, ಮತ್ತು ಸಾಂತಪ್ಪ ನಾಗಪ್ಪ ನಾಯಕ ಕೊನೆವರೆಗೂ ಪೊಲೀಸರ ಕಣ್ಣಿಗೆ ಬೀಳದೆ, ಸಿದ್ದಾಪುರ ಪೋಸ್ಟ್ ಆಫೀಸ್, ಬಿಳಗಿ ಪೋಸ್ಟ್ ಆಫೀಸ್, ಬಿಳಗಿ ಪೊಲೀಸ್ ಸ್ಟೇಷನ್, ಮಾವಿನಗುಂಡಿ ಪ್ರವಾಸಿ ಬಂಗಲೆ ಸುಡಲು ಪ್ರಯತ್ನಿಸಿ ಸರ್ಕಾರವನ್ನು ದಂಗುಬಡಿಸುವ ಪ್ರಯತ್ನ ಮಾಡಿ ಕೊನೆಗೂ ಪೊಲೀಸರಿಗೆ ಸಿಗಲೇ ಇಲ್ಲ.

## ಅಧ್ಯಾಯ–೧೧

## ವೈಯಕ್ತಿಕ ಸತ್ಯಾಗ್ರಹ

ದೇಶಾದ್ಯಂತ ಜನರ ವಿಧ್ವಂಸಕ ಕೃತ್ಯ–ವಿಕೃತ ಕೃತ್ಯಗಳು ಹೆಚ್ಚುತ್ತಿದ್ದಂತೆ ಬ್ರಿಟಿಷ್ ಸರಕಾರ ಸಭೆ ಸೇರುವುದು, ಸಮಾರಂಭಗಳನ್ನು ಏರ್ಪಡಿಸುವುದನ್ನು ನಿಷೇಧಿಸಿತು. ಸಾರ್ವಜನಿಕವಾಗಿ ಭಾಷಣ ಮಾಡುವುದು, ಘೋಷಣೆಗಳನ್ನು ಕೂಗುವುದು, ರಸ್ತೆಯಲ್ಲಿ ಮೆರವಣಿಗೆ ಹೊರಡುವುದನ್ನು ನಿರ್ಬಂಧಿಸಿತು. ಇದರಿಂದ ಗಾಂಧೀಜಿಯವರು ವೈಯಕ್ತಿಕ ಸತ್ಯಾಗ್ರಹಕ್ಕೆ ಕರೆ ನೀಡಿದರು. 'ಯಾರೂ ಯಾರ ಹಿಂಬಾಲಕರಾಗಿ ಮಾರ್ಗದರ್ಶನಕ್ಕಾಗಿ ಇದಿರು ನೋಡಬೇಕಾಗಿಲ್ಲ, ನಿಮಗೆ ನೀವೇ ನಾಯಕರು, ಎಲ್ಲರೂ ಸ್ವತಂತ್ರರು. ಸತ್ಯ–ಅಹಿಂಸೆ–ಶಿಸ್ತುಗಳಿಂದ ದೇಶಕ್ಕಾಗಿ ತ್ಯಾಗಕ್ಕೆ ಸಿದ್ಧರಾಗಿರಿ, ಬ್ರಿಟಿಷರೇ ದೇಶ ಬಿಟ್ಟು ತೊಲಗಿರಿ' ಎಂದು ಘೋಷಿಸಿದರು.

ತಿಮ್ಮಪ್ಪ ನಾಯಕ ಮಾಸ್ತರರು ಗಾಂಧೀಜಿವರ ಸೂಚನೆಯಂತೆ ಜಿಲ್ಲೆಯಲ್ಲಿ ವೈಯಕ್ತಿಕ ಸತ್ಯಾಗ್ರಹ ಮಾಡುವ ಜನರ ಯಾದಿ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಕಳಿಸಿದ್ದರು. ಸಿರಸಿಯಲ್ಲಿ ಶಿವರಾಮ ಶಾಸ್ತ್ರಿಯವರು, ಸಿದ್ದಾಪುರದಲ್ಲಿ ಹರಿರಾಮಕೃಷ್ಣ ರಾಜವೈದ್ಯರು ಪ್ರಪ್ರಥಮವಾಗಿ ಬೀದಿಗಳಲ್ಲಿ ಗಾಂಧೀಜಿ ಪರ, ಸರಕಾರ ವಿರೋಧಿ ಘೋಷಣೆಗಳನ್ನು ಕೂಗಿ ಬಂಧನಕ್ಕೆ ಒಳಗಾದರು. ನಂತರದ

ದಿನಗಳಲ್ಲಿ ಸಿರಸಿಯಲ್ಲಿ ಬಿಸಲಕೊಪ್ಪ ರಾಮಚಂದ್ರ ಭಟ್ಟ, ವಿದ್ಯಾರ್ಥಿಗಳಾದ ವಿ.ಟಿ. ಹೆಗಡೆಯವರನ್ನು ಬಂಧಿಸಿ ಜೈಲು ವಾಸವಾಯಿತು. ಸಿದ್ದಾಪುರದಲ್ಲಿ ಶ್ರೀಮತಿ ಭವಾನಿಬಾಯಿ ಕಾನಗೋಡ, ಬಿಳಗಿಯಲ್ಲಿ ಪುಂಡಲೀಕ ಮಡಗಾಂವಕರ ಬಂಧನವಾಯಿತು. ಇದನ್ನು ಅರಿತ ಬಿಳಗಿ ಹರಿಸುಬ್ರಾಯ ಪೈ, ವೆಂಕಟೇಶ ನಾಗೇಶ ಪೈ, ಹನುಮಂತ ವಾಸುದೇವ ಪೈಯವರು ವೈಯಕ್ತಿಕ ಸತ್ಯಾಗ್ರಹಿಗಳಾಗಿ ಜೈಲು ಸೇರಿದರು. ಪ್ರಾರಂಭದ ಕೆಲ ಕೈದಿಗಳಿಗೆ ಒಂದು ಅಥವಾ ಎರಡು ವರ್ಷ ಶಿಕ್ಷೆ ಆಗುತ್ತಿರುವುದನ್ನು ತಿಳಿದ ಪೊಲೀಸ್ ಅಧಿಕಾರಿಗಳು ವಿಚಾರಣಾ ಕೈದಿಗಳೆಂದು ಎರಡು ಮೂರು ವರ್ಷ ಜೈಲಿನಲ್ಲೇ ಇರುವಂತೆ ಮಾಡತೊಡಗಿದರು. ವೈಯಕ್ತಿಕ ಸತ್ಯಾಗ್ರಹಿಗಳಿಗೆ ಕ್ರಿಮಿನಲ್ ಕೈದಿಗಳೊಡನೆ ಸೇರಿಸಿ ವಿಧ್ವಂಸಕ ಕೃತ್ಯ ಅಪರಾಧಿಗಳು ಎಂದು ಸೇರಿಸತೊಡಗಿದರು. ಇದರಿಂದ ಸತ್ಯಾಗ್ರಹಿಗಳು ಪೊಲೀಸರ ವಿರುದ್ಧ ರೊಚ್ಚಿಗೇಳುವಂತೆ ಆಯಿತು. 'ವಿಚಾರಣಾ ರಹಿತ ಕೈದಿ' ಎಂದುಜೈಲು ಶಿಕ್ಷೆ ಆದವರಿಗೆ ಅನಿಶ್ಚಿತ ಕಾಲ ಜೈಲಿನಲ್ಲಿ ಇಡಲು ಸರಕಾರ ಪೊಲೀಸ್ ಇಲಾಖೆಗೆ ಅನುಮತಿ ನೀಡಿತು. ಹೀಗಾಗಿ ಚಳವಳಿ ಮುಖಂಡರನ್ನು ೨ ಅಥವಾ ೩ ಅಷ್ಟೇ ಅಲ್ಲ ೫–೬ ವರ್ಷ ಜೈಲಿನಲ್ಲಿ ಬಂಧಿಸಿ ಇಟ್ಟರು. ಯುವ ಸತ್ಯಾಗ್ರಹಿಗಳ ಮನ ಕೆಟ್ಟಿತು, ಈರ್ಷ್ಯೆ ಏರಿತು, ಪುನಃ ವಿಧ್ವಂಸಕ ಕಾರ್ಯ ವರದಿಗಳಿಗೆ ಪ್ರಚೋದನೆ ದೊರೆಯಿತು.

೧೯೩೨–೩೪ರಲ್ಲಿ ಸಿರಸಿ ಹಾಗೂ ಸಿದ್ದಾಪುರ ಮಾಮಲೆದಾರನ ತೀರ್ವೆ ವಸೂಲಿ ಕ್ರಮದ ಕಹಿ ಅನುಭವ ಜನತೆಯಲ್ಲಿ ಪುನಃ ನೆನಪಿಗೆ ಬರುವಂತಾಯಿತು. ತೀರ್ವೆ ಹಾಗೂ ಹುಲ್ಲು ಬನ್ನಿ ಕರ ವಸೂಲಿ ಕಾಲಕ್ಕೆ ಆಕಳು, ಕರು, ಎಮ್ಮೆಗಳನ್ನು ಜಪ್ತಿ ಮಾಡಿ ವಾರಕ್ಕೊಮ್ಮೆ ತಾಲ್ಲೂಕು ಕಚೇರಿ ಎದುರು ಹರಾಜು ಹಾಕಲಾಗುತ್ತಿತ್ತು. ಲಿಲಾವು ಹಿಡಿಯಲು ವ್ಯಾಪಾರಿಗಳು ಬಾರದಿದ್ದರಿಂದ ಹುಬ್ಬಳ್ಳಿಯಿಂದ ಕಟುಕರನ್ನು ಕರೆಯಿಸಿ ಮಾಂಸಕ್ಕಾಗಿ ಜಾನುವಾರುಗಳನ್ನು ಮಾರಲಾಗುತ್ತಿತ್ತು. ಇದನ್ನು ಸಹಿಸದ ಶ್ರೀ ಶಂಕರ ಗುಲ್ವಾಡಿಯವರು ಮುಂಬಯಿಯಿಂದ ಶ್ರೀ ಪ್ರೇಮಾನಂದ ಕಲ್ಯಾಣಪುರ ಹಾಗೂ ಶ್ರೀ ಉಮೇಶಚಂದ್ರ ತೋಂಬತಮಹಲ್ ಕಾಲೇಜು ತೊರೆದ ವಿದ್ಯಾರ್ಥಿಗಳನ್ನು ಕರೆದು ತಂದರು. ಜಾನುವಾರು ಲಿಲಾವು ಕಾಲಕ್ಕೆ 'ನಾವು ಅತಿ ಹೆಚ್ಚು ಬೆಲೆಗೆ ಜಾನುವಾರುಗಳನ್ನು ಖರೀದಿಸುವೆವು, ನಮ್ಮೊಡನೆ



ಯಾರೂ ಜಿದ್ದಿಗೆ ಬೀಳಬಾರದು' ಎಂದು ಆ ಮೊದಲು ಹುಬ್ಬಳ್ಳಿಯಿಂದ ಬಂದವರಿಗೆ ಅರಿಕೆ ಮಾಡುತ್ತಿದ್ದರು. ಎರಡು ಸಲ ಲಿಲಾವಾದ ಎಲ್ಲಾ ಜಾನುವಾರುಗಳನ್ನು ಖರೀದಿಸಿ ಅವುಗಳ ಮೂಲ ಮಾಲೀಕರಿಗೆ ಹಿಂತಿರುಗಿಸಿದರು. ನಂತರ ಹುಬ್ಬಳ್ಳಿಯಿಂದ ಬಂದ ಕಟುಕರಿಗೆ ಗಾಂಧಿ ಚಳವಳಿ, ರಾಷ್ಟ್ರಹಿತ ಕುರಿತು ಮನವರಿಕೆ ಮಾಡಿ ಅವರೆಲ್ಲ ಸಿರಸಿ–ಸಿದ್ದಾಪುರಕ್ಕೆ ಬಾರದಂತೆ ಮನವೊಲಿಸಿದರು. ಆಗ ಅನಿವಾರ್ಯವಾಗಿ ಮಾಮಲೇದಾರರು ಜಾನುವಾರುಗಳನ್ನು ಮೂಲ ಮಾಲೀಕರಿಗೆ ಹಿಂತಿರುಗಿಸುವಂತಾಯಿತು.

ಅಂದಿನ ದಿನಗಳಲ್ಲಿ ಪಂಜಾಬ–ಪೇಶಾವರ ಪ್ರದೇಶದಲ್ಲಿ ಖುದಾ–ಇ–ಖಿದ್ಮತ್ ಎಂಬ ಸಂಘ ಹುಟ್ಟುಹಾಕಿ ಅದರ ಸದಸ್ಯರು ಕ್ರಾಂತಿಕಾರಿ ವಿಧ್ವಂಸಕ ಕೆಲಸಗಳನ್ನು ಮಾಡುತ್ತಿದ್ದರು. ಅವರು ಕೆಂಪಂಗಿ ತೊಡುವ ಪರಿಪಾಠ ಇಟ್ಟುಕೊಂಡಿದ್ದರಿಂದ 'ಕೆಂಪಂಗಿ ಸೇನೆ' ಎಂದು ಹೆಸರು ಪಡೆದಿತ್ತು. ಅಜಾನುಬಾಹು ದೃಢಕಾಯದ ಉಮೇಶಚಂದ್ರ ಕೆಂಪು ಬಣ್ಣದ ಮಿಲ್ಟ್ರಿ ಸಮವಸ್ತ್ರ ಧರಿಸಿ, ತಾನು ಪೇಶಾವರೀ ಖುದಾ–ಇ–ಖಿದ್ಮತ್‌ಗಾರರ ಪರವಾಗಿ ಇತ್ತ ಬಂದಿರುವುದಾಗಿ, ಕೆಂಪು ಬಣ್ಣದ ಬುಲೆಟಿನ್ ಹಂಚುತ್ತ ಸೊರಬ ರಸ್ತೆಯಿಂದ ಸಿದ್ದಾಪುರಕ್ಕೆ ಬಂದನು. ನೇರವಾಗಿ ಫೌಜದಾರರ ಕಚೇರಿಗೆ ನುಗ್ಗಿ ಅವರ ಖುರ್ಚಿಯ ಮೇಲೆ ಕುಳಿತನು. 'ಈಗಾಗಲೇ ಸೊರಬದಲ್ಲಿ ಕೆಂಪಂಗಿ ಸೇನೆ ಜಮಾಯಿಸಿದೆ. ಇನ್ನು ಒಂದು–ಎರಡು ದಿನಗಳಲ್ಲಿ ಸಿರಸಿ–ಸಿದ್ದಾಪುರ ಮಾಮಲೆದಾರರ ಕಚೇರಿ ಮೇಲೆ ರೇಡ್ ಮಾಡುವ ಸಾಧ್ಯತೆ ಇದೆ. ನಾನು ಪೂರ್ವಭಾವಿ ಪರಿಶೀಲನೆಗೆ ಬಂದಿರುವೆ' ಎಂದು ತಿಳಿಸಿ ಪುನಃ ಸೊರಬ ಕಡೆಗೆ ಹೊರಟುಹೋದನು. ಇದರಿಂದ ಗೊಂದಲಗೊಂಡ ಸಿದ್ದಾಪುರ ಮಾಮಲೇದಾರ ಪೊಲೀಸರನ್ನೆಲ್ಲ ಸೊರಬ ಕಡೆ ರಸ್ತೆ ಕಾವಲಿಗೆ ನಿಯೋಜಿಸಿದರು. ಇದರಿಂದ ಎರಡು ತಾಲ್ಲೂಕುಗಳಲ್ಲಿ ಕರ ವಸೂಲಿ–ಜಪ್ತಿಕ್ರಮ ಹಲವು ದಿನ ಸ್ಥಗಿತಗೊಂಡಿತ್ತು. ಪ್ರಮುಖವಾಗಿ ಹೇರೂರು ಸೇವಾದಳ ಕಾರ್ಯಕರ್ತರಿಗೆ ಸಭೆ ಸೇರುವ ಚಳವಳಿ ಕಾರ್ಯಕರ್ತರಿಗೆ ಅನುಕೂಲವಾಗಿತ್ತು. ಕೆಲ ದಿನಗಳ ನಂತರ ಸೊರಬ ರಸ್ತೆಯಲ್ಲಿ ಉಮೇಶಚಂದ್ರನನ್ನು ಬಂಧಿಸಲಾಯಿತು, ೬ ತಿಂಗಳು ಜೈಲುವಾಸವಾಯಿತು. ಅವನನ್ನು ಮೋಟಾರಿನಲ್ಲಿ ಕಾರವಾರಕ್ಕೆ ಸಾಗಿಸುತ್ತಿದ್ದಾಗ ಕಿಟಕಿಯಿಂದ ತಲೆ

ಹೊರಗೆ ಹಾಕಿ 'ಸತ್ಯಾಗ್ರಹ ಮುಂದುವರಿಸಿ, ಸಹಾಯಕ್ಕೆ ನಾವಿದ್ದೇವೆ' ಎಂದು ಜನರನ್ನು ಹುರಿದುಂಬಿಸುತ್ತಿದ್ದನು.

ಸಭೆ ಸೇರಲು, ಮೆರವಣಿಗೆ ಮಾಡಲು, ಘೋಷಣೆ ಕೂಗಲು, ಭಾಷಣ ಮಾಡಲು ಸರಕಾರ ನಿಷೇಧಿಸಿದ್ದರಿಂದ ನಿಜವಾದ ವೈಯಕ್ತಿಕ ಸ್ವಾತಂತ್ರ್ಯ ಇಲ್ಲದಂತಾಯಿತು. ಅದನ್ನೇ ತಂದುಕೊಡಲು ಗಾಂಧೀಜಿಯವರ ಸಲಹೆ ಜನರಿಗೆ ಸೂಕ್ತವೆನಿಸಿತು. ಸ್ವಾತಂತ್ರ್ಯ ಚಳವಳಿ ಕಾರ್ಯಕರ್ತರಿಗೆ, ಗಾಂಧಿ ಅನುಯಾಯಿಗಳಿಗೆ ವರ್ಷಗಟ್ಟಲೆ ಜೈಲಿನಲ್ಲಿ ಇಡುವುದು ಅವರ ಕುಟುಂಬಗಳಿಗೆ ನೀಡುವ ಪೊಲೀಸ್ ದೌರ್ಜನ್ಯ ನೋಡಿ–ತಿಳಿದು, ಕಾರ್ಯಕರ್ತರ ಕುಟುಂಬಗಳ ಹೀನಾಯ ಸ್ಥಿತಿ ಅರಿತ ಯುವಜನ–ಭೂಗತ ಕಾರ್ಯಕರ್ತರು ಪುನಃ ರೋಸಿಹೋದರು.

ಪುನಃ ಪುನಃ ಕೇಳಿಬರುತ್ತಿದ್ದ ಕ್ರಾಂತಿಕಾರಿ ಸುದ್ದಿಗಳಿಂದ ಸಂರಕ್ಷಣಾ ಉಪಾಯಕ್ಕಿಂತ ಆಕ್ರಮಣವೆ ಸೂಕ್ತವೆಂದು ಅನಿಸತೊಡಗಿತು. ಭೂಗತರಾಗಿದ್ದ ಹಲವರು ಸಾಗರ ತಾಲ್ಲೂಕಿನ ಗಡಿಯಾರದ ತಡಗಳಲೆ ಕಾಡು, ಅಡಿಕೆ ತೋಟ ಸೇರಿದ್ದರು. ಅವರಿಗೆ ಕಾಗೋಡು ಕೆ.ಜಿ.ಒಡೆಯರ ಸಹಾಯವಿದ್ದಿತು. ಬಿಳಗಿ ರಂಗಪ್ಪ ಶಣ್ಯೆಯವರ ಸಂಪರ್ಕ ದೊರೆಯುತ್ತಿತ್ತು. ಅದರಿಂದ ಸಿರ್ಸಿ–ಸಿದ್ದಾಪುರ ಸಮಾಚಾರಗಳು ಲಭ್ಯವಾಗುತ್ತಿದ್ದವು. ಜೂನ್ ತಿಂಗಳು ಮಳೆ ಆರಂಭವಾಗಿತ್ತು. ಪೊಲೀಸರ ಓಡಾಟ ಕಡಿಮೆಯಾಗಿತ್ತು. ತಡಗಳಲೆಯಲ್ಲಿ ವಾಸವಾಗಿದ್ದ ಕನ್ನಳ್ಳಿ ಶಿವರಾಮ ಹೆಗಡೆ, ಡಾ. ಗಣೇಶ ಪೈ, ನೀಲಕಂಠ ಯಾಜಿ ಸೇರಿ ಬಿಳಗಿಯಲ್ಲಿ ಪ್ರತ್ಯೇಕವಾಗಿದ್ದ ಪೊಲೀಸ್ ಸ್ಟೇಷನ್ ರೇಡ್ ಮಾಡುವ ಕುರಿತು ಯೋಜನೆ ರೂಪಿಸಿ, ಸಿದ್ದಾಪುರ ದೇವುನಾಯಕರ ಮೂಲಕ ಬಿಳಗಿ ವಾಮನ ನಾಗೇಶ ಪೈಯವರಿಗೆ ಸಂದೇಶ ತಲುಪಿಸಿದರು.

೧೯೪೩ರ ಜೂನ್ ತಿಂಗಳ ಮೂರನೇ ವಾರ ಆರ್ಭಟದ ಆದ್ರಾ ಮಳೆ ಸುರಿಯಿತು. ಆದ್ರಾ ಹಬ್ಬಕ್ಕೆ ಹಲಸಿನ ಕಡಬು ತಿನ್ನುವದು ಜನರ ಪರಿಪಾಠ. ಅದರಂತೆ ಮರವೇರಲು ಆಳುಮಗನ ವೇಷ ಧರಿಸಿ ಕಂಬಳಿ ಕೊಪ್ಪೆ ಧರಿಸಿ ಮೈ ಮುಚ್ಚಿಕೊಂಡು ಪೊಲೀಸ್ ಸ್ಟೇಷನ್ ಸಮೀಪದ ಹಲಸಿನ ಮರ ಏರಿದರು ವಾಮನ ಪೈ. ಹಲಸಿನ ಕಾಯಿ–ಹಣ್ಣು ಕೊಯ್ದು ಕೆಳಗೆ ಕೆಡವಿದರು. ಅಲ್ಲಿದ್ದ ನಾಗಪ್ಪ ನಾಯಕ ಪೊಲೀಸರಿಗೆ ಅವರ ಪತ್ನಿ–ಮಕ್ಕಳಿಗೆ ಹಲಸಿನ ಹಣ್ಣು ಹಂಚಿದರು. ಹಣ್ಣು ತಿನ್ನಲು ಅವರೆಲ್ಲ ಮರದ ಕೆಳಗೆ ಜಮಾಯಿಸಿದಂತೆ ಶ್ರೀನಿವಾಸ ಮಡಗಾಂವಕರ ಸ್ಟೇಷನ್ ಒಳಹೋಗಿ ಕಾಗದ ಪತ್ರ ಕೋಣೆ, ಬಂದೂಕು–ಕೈಕೊಳ ಇಡುವ ಕೋಣೆ, ಬಾಗಿಲು, ದಾರಿ ಪರಿಶೀಲಿಸಿ ಹೊರಬಂದರು.



ಇದಾದ ೪ನೇ ದಿನ ರಾತ್ರೆ ತಡಗಳಲೆಯಿಂದ ಶಿವರಾಮ ಹೆಗಡೆ, ಡಾ. ಪೈ, ನೀಲಕಂಠ ಯಾಜಿ ಸಿದ್ದಾಪುರಕ್ಕೆ ಬಂದು ದೇವುನಾಯಕ ಸೇರಿ ಬಿಳಗಿಗೆ ಬಂದು ವಾಮನ ಪೈ, ನಾಗಪ್ಪ ನಾಯಕ, ಶ್ರೀನಿವಾಸ ಮಡಗಾಂವಕರ ಸೇರಿ ರಾತ್ರೆ ಒಂದು ಘಂಟೆ ಸಮಯಕ್ಕೆ ಬಿಳಗಿ ಪೊಲೀಸ್ ಸ್ಟೇಷನ್ ಬೀಗ ಮುರಿದು ಅಲ್ಲಿದ್ದ ಕಾಗದ ಪತ್ರ ದಾಖಲೆಗಳನ್ನು ಒಂದು ಚೀಲಕ್ಕೆ ತುಂಬಿಕೊಂಡು, ಮತ್ತೊಂದು ಕೋಣೆಯ ಬೀಗ ಮುರಿದು ಎರಡು ಬಂದೂಕು, ೨೫ ಕೈಕೊಳಗಳನ್ನು ಹಿಡಿದು ಹೊರಬರುತ್ತಲೆ ಸಮೀಪದ ಕೋಣೆಯಲ್ಲಿ ಮಲಗಿದ್ದ ಪೊಲೀಸ್ ಪೇದೆ ಓರ್ವ ಹೊರಬಂದ, ಇವರೆಲ್ಲ 'ಭಾರತ ಮಾತಾ ಕಿ ಜೈ' ಎಂದು ಕೂಗಿ ಕತ್ತಲಲ್ಲಿ ಮರೆಯಾದರು.

ಜಿಟಿ–ಜಿಟಿ ಮಳೆಯಲ್ಲಿ ಮೂರು ಮೈಲಿ ನಡೆದು ಕಾಗದಪತ್ರ ಚೀಲಕ್ಕೆ ಬೆಂಕಿ ಹಚ್ಚಿ ಅರ್ಧ–ಮರ್ಧ ಸುಟ್ಟ ಚೀಲ ಭುವನಗಿರಿ ಕೆರೆಗೆ ಎಸೆದು ಕಾಡುದಾರಿಯಲ್ಲಿ ಸಾಗುತ್ತ ಕೆರೆ–ಕೊಳ್ಳಗಳಲ್ಲಿ ಕೈಕೋಳಗಳನ್ನು ಬಿಸಾಡಿ, ಬಂದೂಕನ್ನು ಹೊಳೆ ದಂಡೆಯಲ್ಲಿ ಹೂತಿಟ್ಟು ಪುನಃ ತಡಗಳಲೆ ತಲುಪಿದಾಗ ಸೂರ್ಯೋದಯವಾಗಿತ್ತು. ಮರುದಿನ ಬೆಳಿಗ್ಗೆ ವಿಷಯ ಸಿದ್ದಾಪುರ ಮಾಮಲೆದಾರರಿಗೆ ತಲುಪಿತು. ಬಿಳಗಿಯ ಹಲವು ಯುವಕರನ್ನು ದಸ್ತಗಿರಿ ಮಾಡಿ ಥಳಿಸಿದರು. ಏನು ಅರಿಯದ ಅವರಿಂದ ಯಾವುದೇ ಮಾಹಿತಿ ದೊರೆಯಲಿಲ್ಲ. ಪರಊರಿನವರೆ ಇತ್ತ ಬಂದು ಈ ಕೆಲಸ ಮಾಡಿರಬಹುದೆಂಬ ಅನುಮಾನ ಮೂಡಿತು. ವಾಮನ ಶಣ್ಯೆ, ನಾಗಪ್ಪ ನಾಯಕ, ಶ್ರೀನಿವಾಸ ಮಡಗಾಂವಕರ ಭೂಗತರಾದರು. ಅವರು ತಡಗಳಲೆ ತಲುಪಿರಬಹುದೆಂದು ಪೊಲೀಸರು ಸಂಶಯಪಟ್ಟರು.

ಕೆಲ ಪೊಲೀಸರು ತಡಗಳಲೆ ಊರಿಗೆ ಹೋಗಿ ವಿಚಾರಿಸಿದರು. ಪೊಲೀಸರು ಅತ್ತ ಬಂದ ಸುದ್ದಿ ಭೂಗತರಿಗೆ ತಿಳಿಯುತ್ತಲೆ ಅವರೆಲ್ಲ ಗುಡಿಸಲು ಬಿಟ್ಟು ಕಾಡು ಅಲೆಯಲು ಪ್ರಾರಂಭಿಸಿದರು. ಮರು ರಾತ್ರೆ ೩ ಘಂಟೆಗೆ ಸಿದ್ದಾಪುರ ಮಾಮಲೆದಾರರು ಸಿದ್ದಾಪುರದಿಂದ ೩೫–೪೦ ಪೊಲೀಸರು ತಡಗಳಲೆ ಗ್ರಾಮದ ಪ್ರತಿಮನೆ ಬಾಗಿಲಿಗೆ ಓರ್ವ ಪೊಲೀಸ ಪೇದೆ, ರಸ್ತೆ ಕೂಡಿದಲ್ಲಿ ಓರ್ವ ಪೇದೆ ನಿಲ್ಲಿಸಿದರು. ಬೆಳಕು ಹರಿಯುತ್ತಲೆ ಪ್ರತಿಮನೆಯ ಬಾಗಿಲು ತಟ್ಟಿ ಜನರನ್ನು ಎಬ್ಬಿಸಿ ಮನೆ ಜಪ್ತಿ ಮಾಡಿದರು. ಅಂದು ಸಂಜೆ ಮೂರು ಘಂಟೆಯ ತನಕ ಹೊರಗಿನವರನ್ನು ಊರಿಗೆ ಬರಲು ಬಿಡಲಿಲ್ಲ ಊರವರನ್ನು ಹೊರ ಹೋಗಲು ಬಿಡಲಿಲ್ಲ. ಬಿಳಗಿ ಪೊಲೀಸ್ ಸ್ಟೇಷನ್ ರೇಡ್ ಮಾಡಿದ ಮಾಹಿತಿಯಗಲಿ, ವಸ್ತುವಾಗಲಿ ದೊರಯಲೇ ಇಲ್ಲ. ಎತ್ತಿಗೆ ಜ್ವರ ಎಮ್ಮೆಗೆ ಬರೆ ಎಂಬ ಕನ್ನಡ ಗಾದೆಯಂತೆ ಬಿಳಗಿಯಲ್ಲಿ ಚಳವಳಿ, ಶಿಕ್ಷೆ ತಡಗಳಲೆ ಊರವರು ಅನುಭವಿಸಿದರು. ಇದರಿಂದ ಹಿರಿಯರಾದ ಶ್ರೀಹರಿ ರಾಜವೈದ್ಯ, ಶ್ರೀ ನಾರಾಯಣ ಪೈ, ಶ್ರೀ ಪಾಂಡುರಂಗ ಭಟ್ಟ, ದೊಡ್ಮನೆ ನಾಗೇಶ ಹೆಗಡೆ, ತಾರಖಂಡ ಶ್ರೀ ಸೀತಾರಾಮ ಹೆಗಡೆ ತೀವ್ರವಾಗಿ ನೊಂದುಕೊಂಡರು. ಯುವ ಕಾರ್ಯಕರ್ತರನ್ನು ಅಹಿಂಸಾ ಮಾರ್ಗಕ್ಕೆ ತರಲು ಯೊಜನೆ ರೂಪಿಸಿದರು. ಅವರ ಲಕ್ಷ್ಯವೆಲ್ಲ ವಿದಾಯಕ ಕಾರ್ಯಗಳ ಕಡೆಗೆ, ಖಾದಿ ಉತ್ಪಾದನೆ ಕಡೆಗೆ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಕಡೆ ಸೆಳೆಯುವುದು ಸೂಕ್ತ ಎಂದು ನಿರ್ಧರಿಸಿದರು.

ಊರ ಹಿರಿಯರ ಯೋಜನೆಯಂತೆ ಹಲವಾರು ನೂಲು ತೆಗೆಯುವ ಚರಕಗಳನ್ನು ತರಿಸಿ ಮನೆ–ಮನೆಗೆ ಕೊಡಲಾಯಿತು. ಯುವಕರು–ಹಿರಿಯರು ಪ್ರತಿದಿನ ಕನಿಷ್ಠ ಅರ್ಧ ತಾಸು ನೂಲು ತೆಗೆಯಲೇಬೇಕು ಎಂದು ನಿಯಮ ಮಾಡಲಾಯಿತು. ರಾಜವೈದ್ಯರ ಮನೆಯಲ್ಲಿ ಎರಡು ಮಗ್ಗಗಳನ್ನು ಸ್ಥಾಪಿಸಿ ನೇಯಲು ಪ್ರಾರಂಭಿಸಿದರು. ಸಮಯ ದೊರೆತಾಗ ಹೆಂಗಸರು–ಮಕ್ಕಳು ನೂಲು ತೆಗೆಯಲು ಕಲಿತರು. ರೈತರು ಆಹಾರ ಧಾನ್ಯವಲ್ಲದೆ ಹೂವು–ತರಕಾರಿ–ಹಣ್ಣು ಬೆಳೆಯಲೇ ಬೇಕು. ಆದಷ್ಟು ಹೆಚ್ಚು ಬೆಳೆಸಿ ಪರರಿಗೆ ಹಂಚಬೇಕು ಎಂದು ನಿಯಮ ಮಾಡಿದರು. ನಾಟಕ–ಯಕ್ಷಗಾನ ಸಂಘಗಳನ್ನು ಪ್ರಾರಂಭಿಸಿ ದೇವಸ್ಥಾನಗಳಲ್ಲಿ ಸಾಂಸ್ಕೃತಿಕ ಕಾರ್ಯಗಳನ್ನು ಏರ್ಪಡಿಸಲು ಸಲಹೆ–ಸಹಾಯ



ನೀಡಿದರು. ಎಲ್ಲ ವರ್ಗದ ಜನರಲ್ಲಿ ಒಗ್ಗಟ್ಟು ಮೂಡಿಸಿದರು. ಪೊಲೀಸರು–ಸರಕಾರಿ ನೌಕರರಲ್ಲಿ ಸ್ನೇಹ ಹಸ್ತ ಚಾಚಿದರು. ದ್ವೇಷ–ಅಸೂಯೆ ಮರೆಯಲು ಪ್ರಯತ್ನಿಸಿದರು. ಸಹಾಯ–ಸಹಕಾರ ಭಾವನೆ ಮೂಡಿಸಿದರು.

೧೯೪೫ರಲ್ಲಿ ಬ್ರಿಟಿಷ್ ಸರಕಾರ ಭಾರತಕ್ಕೆ ಸ್ವಾತಂತ್ರ್ಯ ನೀಡಲು ಸಮಾಲೋಚಿಸುತ್ತಿರುವದು ತಿಳಿದ ನಂತರ ಗಾಂಧೀಜಿಯವರು ಸಂದೇಶ ನೀಡಿ ಭೂಗತ ಕಾರ್ಯಕರ್ತರು ಹಿಂಸೆ ತೊರೆದು ಪೊಲೀಸರಿಗೆ ಶರಣಾಗತರಾಗಬೇಕೆಂದರು. ಶರಣಾಗತರಾದವರಿಗೆ ಪೊಲೀಸರು ಕೆಲ ತಿಂಗಳು ಲಾಕಪ್‌ನಲ್ಲಿಟ್ಟು ಬಿಟ್ಟರು. ಇತರ ಕಾರ್ಯಕರ್ತರು ಮನೆಗೆ ಮರಳಿದರು. ಹಿರಿಯರ ಅಣತಿಯಂತೆ ವಿದಾಯಕ ಕಾರ್ಯಗಳಲ್ಲಿ ತೊಡಗಿದರು.

❑

## ಭಾಗ ೨

## ಸಿರಸಿ–ಸಿದ್ದಾಪುರಕ್ಕೆ ರಾಷ್ಟ್ರೀಯ ನಾಯಕರ ಆಗಮನ–ಸಂಪರ್ಕ–ಸಲಹೆ–ಸಹಾಯ

೧೯೩೪ರ ಮಾರ್ಚ್ ಮೊದಲ ವಾರ ಗಾಂಧೀಜಿಯವರು ಮಂಗಳೂರಿಂದ ಸಿರಸಿಗೆ ಆಗಮಿಸಿ ಬಿಡಕಿಬೈಲನಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಸೇರಿದ ಜನರ ಸಭೆಯಲ್ಲಿ ಜಂಗಲ್ ಸತ್ಯಾಗ್ರಹ, ಕರನಿರಾಕರಣೆ ಚಳವಳಿ ಕುರಿತು ಮಾತನಾಡುತ್ತ ಮಾರಿಕಾಂಬಾ ಜಾತ್ರೆಯಲ್ಲಿ ಪ್ರಾಣಿವಧೆ ತಡೆಯಲು ಕರೆಕೊಟ್ಟರು. ಹರಿಜನರಿಗೆ ದೇವಸ್ಥಾನಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಿಕೊಡಲು ಕರೆನೀಡಿದರು.

ಸಿದ್ದಾಪುರಕ್ಕೆ ಆಗಮಿಸಿ ಹುಡದಿಬೈಲಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ ಜಂಗಲ್ ಸತ್ಯಾಗ್ರಹ, ಕರನಿರಾಕರಣೆ ಚಳವಳಿಯನ್ನು ಈ ವಿಭಾಗದ ಜನರ ತ್ಯಾಗವನ್ನು ಜ್ಞಾಪಿಸಿ ಪ್ರೋತ್ಸಾಹಿಸಿದರು. ಹರಿಜನ ದೇವಿಗೆ ಸತ್ಕರಿಸಿ ಆಶೀರ್ವದಿಸಿದರು.

೧೯೩೮ರಲ್ಲಿ ಮುಂಬಯಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಕಾಲಕ್ಕೆ ಸಿರಸಿ–ಸಿದ್ದಾಪುರದ ೨೦ ಕಾರ್ಯಕರ್ತರನ್ನು ಪ್ರತ್ಯೇಕವಾಗಿ ಕರೆದು ಮಾತನಾಡಿಸಿ ಹುರಿದುಂಬಿಸಿದರು. ವಲ್ಲಭಭಾಯಿ ಪಟೇಲರು ಕರಬಂದಿಯಲ್ಲಿ ಭೂಮಿ ಕಳಕೊಂಡವರ ಭೂಮಿಯನ್ನು ಪುನಃ ಕೊಡಿಸುವ ಭರವಸೆ ನೀಡಿದರು.

ಗಾಂಧೀಜಿಯವರನ್ನು ೧೯೩೩ ಜುಲೈದಲ್ಲಿ ಬಂಧಿಸಿ ಮದ್ರಾಸ್‌ನ ಊಟಿಯಲ್ಲಿ ಇಡಲಾಗಿತ್ತು. ಒಂದು ದಿನ ಶಂಕರಗುಲ್ವಾಡಿ, ಪುಂಡ್ಲೀಕ ಮಡಗಾಂವಕರು ಗಾಂಧೀಜಿಯವರನ್ನು ಕಂಡರು. ಕರನಿರಾಕರಣೆಯಿಂದ ನಿರಾಶ್ರಿತರಾದ ಬಾಲಕರ ಕ್ಷೇಮಾಭಿವೃದ್ಧಿ ಕುರಿತು ತಿಳಿಸಿದಾಗ ಶಿವಮೊಗ್ಗಾದ



ಕಮಿಷನರ್ ಶ್ರೀ ಎನ್.ಮಾಧವರಿಗೆ ಪತ್ರ ನೀಡಿದರು. ಇದರಿಂದ ಸಿರಸಿ–ಸಿದ್ದಾಪುರದ ೧೨ ಬಾಲಕರಿಗೆ ಶಿವಮೊಗ್ಗಾ ಬಾಲಾಶ್ರಮದಲ್ಲಿ ಪ್ರವೇಶ ದೊರೆಯಿತು.

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಆಚಾರ್ಯ ಕೃಪಲಾನಿಯವರು ೧೯೩೬ರ ಮೇ ತಿಂಗಳಲ್ಲಿ ಸಿರಸಿ–ಸಿದ್ದಾಪುರಕ್ಕೆ ಆಗಮಿಸಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ "ಆನೆಗೆ ತನ್ನ ಶಕ್ತಿಯ ಅರಿವಾದಾಗ ಅದು ಮಾವುತನ ಗುಲಾಮಗಿರಿಯಿಂದ ಹೊರಬರಬಲ್ಲದು. ಹಾಗೆಯೇ ನಿಮಗೆ ನಿಮ್ಮ ಶಕ್ತಿಯ ಅರಿವಾಗಿದೆ, ಧೈರ್ಯವಾಗಿ ತ್ಯಾಗಕ್ಕೆ ಸಿದ್ಧವಾಗಿರಿ" ಎಂದು ಕರೆ ನೀಡಿದರು. ಅವರೊಡನೆ ಆಗಮಿಸಿದ್ದ ಡಾ. ಬಾಬು ರಾಜೇಂದ್ರ ಪ್ರಸಾದರು ಎಲ್ಲ ಸಭೆಗಳಲ್ಲಿ ಮಾತನಾಡಿದರು.

ಜವಹರಲಾಲ ನೆಹರು ಅವರು ೧೯೩೭ರ ನಡುಗಾಲ ಚುನಾವಣೆ ಕಾಲಕ್ಕೆ ಸಿರಸಿ–ಸಿದ್ದಾಪುರಕ್ಕೆ ಆಗಮಿಸಿ ೩ ದಿನ ವಾಸ್ತವ್ಯ ಮಾಡಿ ಪ್ರಚಾರ ಭಾಷಣವನ್ನು ಹಲವು ಕಡೆ ಮಾಡಿರುವರು.

ಡಾ. ನಾ.ಸು.ಹರ್ಡಿಕರ ೧೯೨೩ರಿಂದ ೧೯೩೦ರ ತನಕ ಸಿರಸಿ–ಸಿದ್ದಾಪುರದ ಹಲವು ಹಳ್ಳಿಗಳಲ್ಲಿ ಸಂಚರಿಸಿ ಸೇವಾದಳ ಕಾರ್ಯಕರ್ತರೊಡಗೂಡಿ ಜನಸಂಪರ್ಕ ಬೆಳೆಸಿ ಹುಲುಬನ್ನಿ–ಜಂಗಲ್ ಸತ್ಯಾಗ್ರಹಕ್ಕೆ ಮಹತ್ವದ ಪ್ರಚಾರ ನೀಡಿದರು.

ಮುಂಬಯಿಂದ ಸಿರಸಿ–ಸಿದ್ದಾಪುರಕ್ಕೆ ಅಗಮಿಸಿದ ಪ್ರೊ॥ ಎಂ.ಎಂ. ರಾಮರಾವ್, ೧೯೩೩ ಹಾಗೂ ೧೯೩೮ರಲ್ಲಿ ಕರನಿರಾಕರಣೆ ಹಾಗೂ ಜಂಗಲ್ ಸತ್ಯಾಗ್ರಹದ ಪರಿಣಾಮ ವರದಿಯನ್ನು ಗಾಂಧೀಜಿಯವರಿಗೆ ಕಳಿಸಿದರು. ಅವರು ಕಳಿಸಿದ ಸಿದ್ದಾಪುರ–ಸಿರಸಿಗಳಲ್ಲಿ ಕರನಿರಾಕರಣೆ ೧೯೩೩ ಹಾಗೂ ಸಿದ್ದಾಪುರದಲ್ಲಿ ಚಳವಳಿಯ ಸಂಘಟನೆ ೧೯೩೨ರ ವರದಿಗಳು ಗಾಂಧೀಜಿಯವರ ಮೇಲೆ ವಿಶೇಷ ಪರಿಣಾಮ ಬೀರಿದ್ದವು.

### ಶ್ರೀ ರಂಗನಾಥ ದಿವಾಕರ, ಧಾರವಾಡ

೧೯೨೮ರಿಂದ ೧೯೩೬ರತನಕ ಸಿರಸಿ–ಸಿದ್ದಾಪುರ ತಾಲೂಕುಗಳಲ್ಲಿ ಹಲವು ಸಲ ಇವರು ಓಡಾಡಿ ಕರನಿರಾಕರಣೆ ಪ್ರತಿಜ್ಞಾ ಪತ್ರಕ್ಕೆ ರೈತರಿಂದ ಸಹಿ ಮಾಡಿಸಿಕೊಂಡರು. ಇವರ ಮೇಲೆ ದಸ್ತಗಿರಿ ವಾರಂಟ್ ಇದ್ದುದರಿಂದ ಗುಪ್ತ

ಸಭೆಗಳನ್ನು ನಡೆಸುತ್ತಿದ್ದರು. ಕರಪತ್ರ ಮುದ್ರಕರಿಗೆ ಗಾಂಧೀಜಿ ಸಂದೇಶಗಳನ್ನು ಕಳಿಸುತ್ತಲೇ ಇದ್ದರು. ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದಾಗ ಗಾಂಧಿ ಸಂದೇಶಗಳನ್ನು ಕಮಿಟಿಯಲ್ಲಿ ಚರ್ಚೆಗೆ ಇಟ್ಟು ಕಾರ್ಯಗತಕ್ಕೆ ಉಪಾಯ ಸೂಚಿಸುತ್ತಿದ್ದರು. ಬಿಳಗಿಯ ಶ್ರೀ ಗೋಪಾಲ ಮಡಗಾವಕರ, ಶ್ರೀ ಪುಂಡ್ಲೀಕ ಮಡಗಾವಕರ ನಿಕಟವರ್ತಿಗಳಾಗಿದ್ದರಿಂದ ೧೯೩೬ರಲ್ಲಿ ಭೂಗತರಾದಾಗ ರಾಜವೈದ್ಯರ ಮನೆಯ ಮಾಳಿಗೆಯ ಮೇಲೆ ೮ ತಿಂಗಳು ಅಡಗಿ ಕುಳಿತಿದ್ದರು. ಲೋಕಶಿಕ್ಷಣ ಟ್ರಸ್ಟ್ ಪತ್ರಿಕೆಯಾದ ಸಂಯುಕ್ತ ಕರ್ನಾಟಕ ದಿನಪತ್ರಿಕೆಯನ್ನು ಸಿರಸಿ–ಸಿದ್ದಾಪುರ ಭಾಗದ ಚಳವಳಿಯ ಕಾರ್ಯ ವೈಖರಿ ಪ್ರಸಾರಕ್ಕೆ ಮಹತ್ವ ನೀಡುತ್ತಿದ್ದರು.

## ಶ್ರೀ ಗಂಗಾಧರರಾವ್ ದೇಶಪಾಂಡೆ, ಬೆಳಗಾಂವ್

ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಸಿರಸಿ–ಸಿದ್ದಾಪುರದಲ್ಲಿ ಕಾಂಗ್ರೆಸ್ ಕಮಿಟಿಯನ್ನು ಬಲಪಡಿಸಿದರು. ಈ ವಿಭಾಗದಲ್ಲಿ ಸಂಚರಿಸಿ ಕಾಂಗ್ರೆಸ್ ಸದಸ್ಯರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿದರು. ಸಿರಸಿಯ ವಾಮನ ಹೊಡಿಕೆ, ಸಿದ್ದಾಪುರದ ತಿಮ್ಮಪ್ಪ ನಾಯಕ ಮಾಸ್ತರ, ಹಾಗೂ ಬಿಳಗಿಯ ವಾಮನ ಶೆಣ್ವೈಯವರ ಸಂಪರ್ಕ ಸದಾ ಇಟ್ಟುಕೊಂಡಿದ್ದರು. ಕರನಿರಾಕರಣೆಯಿಂದ ಜಪ್ತಿಯಾಗಿ ನಿರಾಶ್ರಿತರಾದ ಕುಟುಂಬಗಳಿಗೆ ಸಾಂತ್ವನ ತಿಳಿಸುವದಲ್ಲದೇ, ಧನ–ಧಾನ್ಯಗಳ ಸಹಾಯ ಮಾಡುತ್ತಿದ್ದರು. ಖಾದಿ ವ್ರತವೆಂದು ನೂಲು ತೆಗೆಯುವ ಸ್ಪರ್ಧೆಗಳನ್ನು ಏರ್ಪಡಿಸಿ ಯುವ ಜನಾಂಗಕ್ಕೆ ಸ್ವಾವಲಂಭಿಯಾಗುವ ಪಾಠ ಉಪದೇಶಿಸುತ್ತಿದ್ದರು. ಅಂಕೋಲೆಯಲ್ಲಿ ಖಾದಿ ಉತ್ಪಾದಕ ಸಂಸ್ಥೆಯಾದ ಗ್ರಾಮ ಸೇವಾಸಮಿತಿ ಸ್ಥಾಪನೆಗೆ ಪ್ರಮುಖರಾದರು. ೧೯೨೪ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಗಾಂಧೀಜಿಯವರೆ ಅಧ್ಯಕ್ಷರಾದಾಗ ಸಿರಸಿ–ಸಿದ್ದಾಪುರದಲ್ಲಿ ನಡೆದ ಚಳವಳಿಯ ಪರಿಚಯ ಹಾಗೂ ಅದರ ತೀವ್ರತೆಯ ಪರಿಚಯ ಗಾಂಧೀಜಿಯವರಿಗೆ ಮನದಟ್ಟು ಮಾಡಿಸಿದ್ದರಿಂದ ಇಲ್ಲಿಯ ಕಾರ್ಯಕರ್ತರನ್ನು ಪ್ರತ್ಯೇಕವಾಗಿ ಕರೆದು ಮಾತನಾಡುವ ಅವಕಾಶ ಒದಗಿಸಿದರು.

## ಶ್ರೀ ಮುರಾರ್ಜಿ ದೇಸಾಯಿ, ಮುಂಬಯಿ

೧೯೩೭ರ ಫೆಬ್ರವರಿಯಲ್ಲಿ ನಡುಗಾಲ ಸರಕಾರ ರಚನೆಯ ಚುನಾವಣೆ ಪ್ರಚಾರಕ್ಕೆ ಶ್ರೀ ಮುರಾರ್ಜಿ ದೇಸಾಯಿಯವರು ಸಿರಸಿ–ಸಿದ್ದಾಪುರಕ್ಕೆ ಆಗಮಿಸಿದರು. ಚುನಾವಣೆಯ ನಂತರ ಶ್ರೀ ಖೇರ ಮುಖ್ಯಮಂತ್ರಿಯಾದರು. ಶ್ರೀ ಮುರಾರ್ಜಿಯವರು ಕಂದಾಯ ಮಂತ್ರಿಯಾದರು. ಅಕ್ಟೋಬರ್ ತಿಂಗಳಿನಲ್ಲಿ ಇವರು ಸಿರಸಿ–ಸಿದ್ಧಾಪುರ ಆಗಮಿಸಿ ನಾಲ್ಕು ದಿನ ವಾಸ್ತವ್ಯ ಮಾಡಿ ಕರನಿರಾಕರಣೆಯಿಂದ ಲೀಲವಾದ ಭೂಮಿಯನ್ನು ಮೂಲ ಮಾಲಿಕರಿಗೆ ಹಿಂತಿರುಗಿಸಿದರು.



## ಶ್ರೀ ಜಮನಾಲಾಲ ಬಜಾಜ, ಮುಂಬಯಿ

ಹಿಂದುಸ್ಥಾನದ ಪ್ರಖ್ಯಾತ ಉದ್ಯಮಿಗಳು. ೧೯೩೧ರ ಏಪ್ರಿಲ್‌ನಲ್ಲಿ ಸಿರಸಿ–ತ್ಯಾಗಲಿ–ಸಿದ್ದಾಪುರ–ಬಿಳಗಿಗೆ ಭೇಟಿ ನೀಡಿದರು. ಅವರ ಪುತ್ರಿಯರು ಮಹಿಳಾ ಸಹಾಯಕ ಮಂಡಳಿಯೊಂದನ್ನು ಸ್ಥಾಪಿಸಿ ನಿರಾಶ್ರಿತ ಮಹಿಳೆಯರಿಗೆ ಆರ್ಥಿಕ ಸಹಾಯ, ಬಟ್ಟೆ, ಹಾಗೂ ಔಷಧಿಯನ್ನು ನೀಡುತ್ತಿದ್ದರು. ಸಿರಸಿಯ ಶ್ರೀ ಕೇಶವೈನ್ ಹಾಗೂ ಶ್ರೀ ಧಾಕಪ್ಪಾರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿ ಈ ವಿಭಾಗದ ಹಲವಾರು ಮಹಿಳೆಯರಿಗೆ ಸಹಾಯ ನೀಡಿದರು. ಮುಖ್ಯವಾಗಿ ಔಷಧಿ ಸಹಾಯ ಮಾಡಲು ಡಾ. ಪಾರ್ಥನಾರಾಯಣ ಪಂಡಿತರು ಪ್ರಮುಖರಾದರು.

## ಸರ್ದಾರ್ ಕೆ.ಎ.ವೆಂಕಟರಾಮಯ್ಯ ದಂಪತಿಗಳು

ಮೈಸೂರಿನ ಕನಕಪುರದಲ್ಲಿ ಹುಟ್ಟಿ ಬೆಳೆದ ಇವರು ಬಿ.ಎ. ಪದವೀಧರರು. ಇವರ ತಂದೆ ಆನೇಕೆರೆ ಶ್ರೀ ಗೋಪಾಲಕೃಷ್ಣಯ್ಯನವರು ಬಾಲಗಂಗಾಧರ ತಿಲಕ್ ಹಾಗೂ ಸರ್ದಾರ್ ವಲ್ಲಭಾಯಿಯವರ ಅಭಿಮಾನಿಗಳು. ತಂದೆಯವರನ್ನು ಅತೀವವಾಗಿ ಹಚ್ಚಿಕೊಂಡಿದ್ದ ವೆಂಕಟರಾಮಯ್ಯನವರು ಡಾ. ನಾ.ಸು.ಹರ್ಡಿಕರ ಪರಿಚಯದಿಂದ ಸೇವಾದಳದ ಸಕ್ರಿಯ ಕಾರ್ಯಕರ್ತರಾದರು, ಅಪ್ರತಿಮ ದೇಶಭಕ್ತರಾದರು. ಮೈಸೂರು ವಿಭಾಗದಲ್ಲಿ ಸ್ವಾತಂತ್ರ್ಯ ಚಳವಳಿಯ ತೀವ್ರತೆ ಕಡಿಮೆ ಎನಿಸಿ ಉತ್ತರ ಕನ್ನಡ ಜಿಲ್ಲೆಗೆ ಬಂದವರು.

೧) ಅರಣ್ಯ ಸತ್ಯಾಗ್ರಹದನ್ವಯ ಕಾಡಿನಿಂದ ಗಿಡಗಳನ್ನು ಕಡಿದು ತಂದು ಕಾಯ್ದೆಭಂಗ ಮಾಡಿದವರು.

೨) ಪಾನನಿರೋಧ ಕಾಯ್ದೆಗೆ ಅನುಕೂಲವಾಗಲೆಂದು ಸಾರಾಯಿ ಅಂಗಡಿ ಎದುರು ಪಿಕೆಟಿಂಗ್ ಮಾಡಿದರು.

೩) ಪರದೇಶಿ ವಸ್ತು–ವಸ್ತ್ರಗಳ ಬಹಿಷ್ಕಾರವೆಂದು ಅಂಗಡಿಗಳ ಮುಂದೆ ಪರದೇಶಿ ವಸ್ತುಗಳನ್ನು ಸುಟ್ಟರು.

೪) ಅಸಹಕಾರ ಚಳವಳಿಯನ್ವಯ ಸರಕಾರಿ ನೌಕರರಿಂದ ಹುದ್ದೆಗಳಿಗೆ ರಾಜಿನಾಮೆ ಕೊಡಿಸಿದರು.

೫) ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ ಮಹಿಳೆಯರಿಗೆ ರಕ್ಷಣೆ ಒದಗಿಸಿದರು.

೬) ಪೋಲೀಸರ ದೌರ್ಜನ್ಯ ಲೆಕ್ಕಿಸದೆ ಹಲವು ಚಳವಳಿ ಮುಖಂಡತ್ವ ವಹಿಸಿದರು.

೭) ಸಹಾಯ ಮತ್ತು ಧೈರ್ಯದ ವರ್ತನೆಗೆ ಯುವಕರನ್ನು ಹುರಿದುಂಬಿಸಿ ಕನ್ನಡದ ಸರ್ದಾರ್ ಪಟೇಲ್ ಎನಿಸಿದರು. ಹೀಗಾಗಿ ಇವರ ಹೆಸರಿನ ಹಿಂದೆ ಸರ್ದಾರ್ ಎಂಬ ಬಿರುದು ಪ್ರಾಪ್ತವಾಯಿತು.

ಸರ್ದಾರ್ ವೆಂಕಟರಾಮಯ್ಯನವರ ಪತ್ನಿ ಶ್ರೀಮತಿ ಗೌರಮ್ಮ ಪತಿಯ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ನಡೆದವರು. ಉತ್ತರ ಕನ್ನಡ ಮಹಿಳೆಯರ ಮುಖಂಡರಾದವರು. ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲುವಾಸ ಕಂಡರು. ಕರನಿರಾಕರಣೆಯಿಂದ ಜಪ್ತಾದ ಮಾಲು ಲಿಲಾವಿನಲ್ಲಿ ಕೊಂಡ ವ್ಯಕ್ತಿ ಮೂಲ ಮಾಲೀಕನಿಗೆ ಮಾಲು ಹಿಂತಿರುಗಿಸುವ ತನಕ ಅವರ ಮನೆ ಎದುರು ಉಪವಾಸ ಕೂಡುವ ಪರಿಪಾಠಕ್ಕೆ ಮಹಿಳೆಯರ ಗುಂಪೊಂದನ್ನು ಕೂಡಿಸಿದರು. ಪಾನ ವಿರೋಧ ಕಾಯ್ದೆಗೆ ಪ್ರಚಾರ ನೀಡಲು ಸಾರಾಯಿ ಅಂಗಡಿಗಳ ಮುಂದೆ, ವಿದೇಶಿ ವಸ್ತುಗಳ ಬಹಿಷ್ಕಾರಕ್ಕೆ ಪಿಕೆಟ್ ಮಾಡುವ ಕಾರ್ಯಕ್ಕೆ ಮಹಿಳೆಯರನ್ನು ಪ್ರೋತ್ಸಾಹಿಸಿದರು. ತಾವೇ ಮುಂದಾಗಿ ಆ ಕೆಲಸ ಮಾಡಿದ ಧೀಮಂತ ಮಹಿಳೆ.

ಈ ದಂಪತಿ ಜನರ ಸಹಾಯಕ್ಕೆ ಪಟ್ಟಣಗಳಲ್ಲಿ ಹಣ ಸಂಗ್ರಹಿಸಿ ಅಕ್ಕಿ–ಬಟ್ಟೆ–ಹಣ, ಮನೆ ಮಾಡಿಗೆ ಹೆಂಚು, ಹಾಗೂ ತಿಂಗಳಿಗೆ ಎರಡು ರೂ. ನಗದು ಸಿಗುವಂತೆ ವ್ಯವಸ್ಥೆ ಕೈಕೊಂಡರು. ಬಹುಪಾಲು ಹಣ ಬೆಂಗಳೂರು ಹಾಗು ಮುಂಬಯಿಯಲ್ಲಿ ಸಂಗ್ರಹಿಸುತ್ತಿದ್ದರು. ಶ್ರೀ ಜಾನ್ ನೌರೋಜ, ಟಾಟಾ ಸಂಸ್ಥೆಯ ಕೆ. ಶ್ರೀನಿವಾಸ್, ಕೆ.ವಿ. ಅಯ್ಯರ್, ಶಿವಮೊಗ್ಗದ ಡಿ.ಆರ್.ಮಾನಪ್ಪ, ಬಟ್ಟೆ ಮಿಲ್ ಸುಮತಿ ಮುರಾರ್ಜಿ, ಉದ್ಯಮಿ ಪಿ.ವಿ.ಕಾಮತ ಹಾಗೂ ವಿಠಲ್, ನೆಪ್ರೊ ಮುಂತಾದವರು ಪ್ರಮುಖ ಸಹಾಯಕರಾಗಿದ್ದರು.

❑

## ಭಾಗ ೩

# ಮರೆಯಲಾಗದ ಮಹಾನುಭಾವರು

### ೧) ಶ್ರೀ ಶಂಕರ ಗುಲ್ವಾಡಿ

ಗಾಂಧೀಜಿಯವರ ಕರೆಯ ಮೇರೆಗೆ ಉತ್ತರ ಕನ್ನಡದ ೨೬ ವಿದ್ಯಾರ್ಥಿಗಳು ೧೯೨೦ರಲ್ಲಿ ಶಿಕ್ಷಣಕ್ಕೆ ತಿಲಾಂಜಲಿಯಿತ್ತು ದೇಶಸೇವೆಗೆ ಹೊರಟರು. ಮುಂಬಯಿ ವಿಲ್ಸನ್ ಕಾಲೇಜು ತೊರೆದ ಶ್ರೀ ಶಂಕರ ಗುಲ್ವಾಡಿಯವರು ಕುಮುಟಾದ 'ಕಾನಡಾ ಧುರೀಣ' ಪತ್ರಿಕೆಯ ಸಂಪಾದಕರಾದ ಶ್ರೀ ಅಣ್ಣಾಜಿರಾವ್ ಅವರಲ್ಲಿ ಬಂದರು. ಅಲ್ಲಿಂದ ಸಿರ್ಸಿಯ ಆಂಗ್ಲೋವರ್ನಾಕ್ಯೂಲರ್ ಶಾಲೆಯ ಶಿಕ್ಷಕರಾದ ಶ್ರೀ ತಿಮ್ಮಪ್ಪ ನಾಯಕರ ಸಲಹೆಯಂತೆ ಸಿದ್ದಾಪುರದ ಹರಿ ಚಂದ್ರಭಟ್ಟ ಹಾಗೂ ಬಿಳಗಿಯ ಶ್ರೀ ವಾಮನ ಶೆಣ್ಯೆಯವರನ್ನು ಕಂಡು ಅವರ ಸಹಾಯದಿಂದ ಕೇವಲ ಎರಡು ತಿಂಗಳಿನಲ್ಲಿ ೨೦೦ ಜನರನ್ನು ಕಾಂಗ್ರೆಸ್ ಸದಸ್ಯರನ್ನಾಗಿ ನೊಂದಾಯಿಸಿದರು. ತಿಲಕ ಫಂಡಿಗೆ ೬೦೦ ರೂಪಾಯಿ ಸಂಗ್ರಹಿಸಿದರು.

ಜೂನ್‌ನಲ್ಲಿ ನವಲಗುಂದ ರಾಜಕೀಯ ಸಮ್ಮೇಲನಕ್ಕೆ ಹೋದ ಶಂಕರ ಗುಲ್ವಾಡಿಯವರು ತಮ್ಮ ಸಂಗಡ ಜಲಿನಯನ್‌ವಾಲಾಬಾಗ್ ದುರಂತದಲ್ಲಿ ಬದುಕುಳಿದ ಶ್ರೀ ಹಬೀಬುಲ್ಲಾ ಖಾನ್‌ರನ್ನು ಬಿಳಗಿ ಕರೆದುತಂದರು. ಅವರು ಉತ್ತಮ ಕ್ರಾಂತಿಕಾರಿ ಭಾಷಣಕಾರರು. ಸುಲಲಿತವಾಗಿ ಹಿಂದಿ ಹಾಗೂ ಉರ್ದುವಿನಲ್ಲಿ ಭಾಷಣ ಮಾಡುತ್ತಿದ್ದರು. ಸೆಪ್ಟಂಬರದಲ್ಲಿ ಕೊಪ್ಪಳದಿಂದ ಶ್ರೀ ಜಯರಾಮಾಚಾರ್ ಎಂಬ ಕೀರ್ತನಕಾರರನ್ನು ಸಿರಸಿಗೆ ಕರೆದು ತಂದು ದೇವಸ್ಥಾನಗಳಲ್ಲಿ ಗಾಂಧೀಜಿ ತತ್ವ ಸಾರುವ ಕೀರ್ತನೆಗಳನ್ನು ಏರ್ಪಡಿಸಿದರು.

ಕುಮಟಾ ಗಿಬ್ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದ ಶ್ರೀ ಶಂಕರ ಗುಲ್ವಾಡಿಯವರು ತಮ್ಮ ಹಳೆಯ ಗೆಳೆಯರನ್ನು ಸೇರಿಸಿ ತಾವೇ ಬರೆದ ಪಾನ ವಿರೋಧ ಸಾರುವ ಬ್ರಿಟಿಷ್ ಸರಕಾರವನ್ನು ಟೀಕಿಸುವ ನಾಟಕವನ್ನು ನೋಡಲು ಬ್ರಿಟಿಷ್ ಅಧಿಕಾರಿಗಳನ್ನು ಆಮಂತ್ರಿಸಿದ್ದರು. ಹಲವು ಹಳ್ಳಿಗಳಿಗೆ ಪಾನ ನಿರೋಧ ಭಾಷಣಗಳು ಮಾಡಲು ಹೋಗುವಾಗ ತಮ್ಮ ಜೊತೆ ಓರ್ವ ಪುರೋಹಿತರನ್ನು ಅಥವಾ ಓರ್ವ ಮೌಲ್ವಿ ಅಥವಾ ಓರ್ವ ಪಾದ್ರಿಯನ್ನು ಕರೆದೊಯ್ಯುತ್ತಿದ್ದರು. ಅವರ ಎದುರು ಜನರಿಂದ ಮದ್ಯಪಾನ ಮಾಡುವುದಿಲ್ಲ ಎಂದು ಪ್ರಮಾಣ ಮಾಡಿಸುತ್ತಿದ್ದರು.

ಸಿದ್ದಾಪುರದಲ್ಲಿ ಹಲವು ಕಡೆ ಅರಣ್ಯ ಕಾಯ್ದೆ ಉಲ್ಲಂಘಿಸಿ ಚಳವಳಿ ಪ್ರಾರಂಭಿಸಿದರು. ಪ್ರತಿದಿನ ೮–೧೦ ಮಂದಿ ಮಾತ್ರ ಕಾಡಿನಿಂದ ಗಿಡಗಳನ್ನು ಕಡಿದು ತರುವ ಪರಿಪಾಠ ಹಾಕಿ ದೀರ್ಘಕಾಲ ಅರಣ್ಯ ಸತ್ಯಾಗ್ರಹ ಜರುಗುವಂತೆ ಮಾಡಿದರು. ಬಿಳಗಿಯಲ್ಲಿ ಕರಪತ್ರ ಮುದ್ರಣವಾಗಿ ಅವು ಸಿರಸಿ ತಲುಪುವಂತೆ ದೀರ್ಘ ಕಾಲ ಈ ಕೆಲಸ ನಿರ್ವಹಿಸಿದರು. ಇವರನ್ನು ಕಂಡಲ್ಲಿ ಗುಂಡಿಕ್ಕಲು ಸರಕಾರ ಪೋಲೀಸರಿಗೆ ಸೂಚನೆ ನೀಡಿತ್ತು. ಹೀಗಾಗಿ ಶಂಕರ ಗುಲ್ವಾಡಿಯವರು ದೀರ್ಘಕಾಲ ಗುಪ್ತವಾಗಿ ಓಡಾಡುತ್ತಿದ್ದರು. ಕಾಲುನಡಿಗೆಯಲ್ಲಿ ಓಡಾಡಿ ಜನ ಸಂಪರ್ಕ ಪಡೆದು ಎಲ್ಲರಿಗೂ ಗುಲ್ವಾಡಿ ಮಾಮ ಅದರು. ಸಂಜೆ ಹೊತ್ತು ಕತ್ತಲೆಯಾದ ನಂತರ ಹಾಗೂ ಮುಂಜಾವು ಬೆಳಕು ಮೂಡುವ ಮೊದಲೆ ಹಳ್ಳಿಹಳ್ಳಿ ಸುತ್ತುತ್ತಿದ್ದರು. ಹರಿಜನ ದೇವಿಯ ತ್ಯಾಗ–ನಿಸ್ವಾರ್ಥ ಕೆಲಸದ ಪರಿಚಯ ಗಾಂಧೀಜಿಯವರಿಗೆ ಮಾಡಿಸಿ ಗಾಂಧೀಜಿ ಸಿದ್ದಾಪುರಕ್ಕೆ ಬಂದಾಗ ಹರಿಜನ ದೇವಿಗೆ ಭೇಟಿ ಮಾಡಿಸಿದರು.

ದಾದಾಬಾಯಿ ನವರೋಜಿಯವರು ಪುಣಾದಲ್ಲಿ ಸ್ಥಾಪಿಸಿದ ಅಶ್ರಮ ಇವರ ಯೋಗಕ್ಷೇಮ ವಿಚಾರಿಸಿ ಸಹಾಯಮಾಡುತ್ತಿತ್ತು. ಗುಲ್ವಾಡಿ ಮಾಮನವರಿಗೆ ವಿಧ್ವಂಸಕ ಕಾರ್ಯಗಳೆಂದರೆ ಆಗುತ್ತಿರಲಿಲ್ಲ. ಕೆಲ ಕ್ರಾಂತಿಕಾರಿಗಳು ಕಾರವಾರ ಜೈಲು ಸ್ಫೋಟಿಸಲು ರೂಪಿಸಿದ ಯೋಜನೆ ಕಾರ್ಯಗತವಾಗದಂತೆ ಮಾಡಿದರು. ೧೯೨೨ರಿಂದ ಮುಂದಿನ ೨೦ ವರ್ಷಗಳಲ್ಲಿ ಗುಲ್ವಾಡಿ ಮಾಮಾ ಎಷ್ಟು ಸಲ ಜೈಲು ಸೇರಿದರು? ಎಷ್ಟು ಕಾಲ ಜೈಲಿನಲ್ಲಿದ್ದರು? ಭೂಗತರಾಗಿ ಎಷ್ಟು ಕಾಲ ಇದ್ದರೆಂದು ತಿಳಿಯದಾಗಿದೆ. ೮೦ ವರ್ಷ ವಯಸ್ಸು ದಾಟುವ ತನಕ ಹಲವು



ಸ್ವಾತಂತ್ರ್ಯ ಯೋಧರ ಮಕ್ಕಳ ಶಿಕ್ಷಣಕ್ಕೆ ವಿವಿಧ ಸಂಸ್ಥೆಗಳಿಂದ ಸಹಾಯ ಒದಗಿಸಿದರು. ಸಾಯುವ ಪೂರ್ವ ಹಳ್ಳಿಯ ಗುಡಿಸಿಲಿನಲ್ಲಿ ಜೀವ ಬಿಡುವ ಇಚ್ಛೆ ವ್ಯಕ್ತಪಡಿಸಿದ್ದರಿಂದ ಸಿರಸಿ–ಮಳಗಿಯ ಶ್ರೀ ಅನಂತ ಪೈಯವರ ಗದ್ದೆ ಗುಡಿಸಲಿನಲ್ಲಿ ಸ್ವರ್ಗಸ್ಥರಾದರು.

## ೨) ಶ್ರೀ ತಿಮ್ಮಪ್ಪ ನಾಯಕ ಮಾಸ್ತರ

ಸಿದ್ದಾಪುರ ಸಣ್ಣ ವ್ಯಾಪಾರಿ ಶ್ರೀ ಶ್ರೀನಿವಾಸ ನಾಯಕ ಮತ್ತು ಶ್ರೀಮತಿ ಪದ್ಮಾವತಿ ಬಾಯಿಯವರ ಎರಡನೇ ಮಗನಾಗಿ ೧೮೯೭ರಲ್ಲಿ ಶ್ರೀ ತಿಮ್ಮಪ್ಪ ನಾಯಕರು ಜನಿಸಿದರು. ಬಾಲಕ ತಿಮ್ಮಪ್ಪ ಬಲು ಚುರುಕು, ಬುದ್ಧಿವಂತ ಹಾಗು ದೃಢಕಾಯ. ಓದು ಬರಹದಲ್ಲಿ ಆಸಕ್ತಿ, ಆಟ–ಓಟದಲ್ಲಿ ನಿರಾಸಕ್ತಿ. ಪ್ರತಿ ವರ್ಷ ಶಾಲೆಯಲ್ಲಿ ವರ್ಗಕ್ಕೆ ಇವನೇ ಪ್ರಥಮ. ಸಿದ್ದಾಪುರದಲ್ಲಿ ಪ್ರಾಥಮಿಕ, ಕುಮಟಾದಲ್ಲಿ ಹೈಸ್ಕೂಲ್ ಹಾಗೂ ಪುಣಾದಲ್ಲಿ ಬಿ.ಎ. ಪದವಿ ಪಡೆದು, ಎಮ್.ಎ. ಕಲಿಯಲು ಮುಂಬಯಿಗೆ ಹೋಗಿದ್ದರು. ಅನಾರೋಗ್ಯದ ಕಾರಣ ಪುನಃ ಸಿದ್ದಾಪುರ ಬಂದರು.

೧೯೧೮ರಲ್ಲಿ ಸಿರಸಿಯಲ್ಲಿ ಆಂಗ್ಲೋವರ್ನಾಕ್ಯೂಲರ್ ಶಾಲೆಗೆ ಸೇರಿ ಮುಖ್ಯೋಪಾಧ್ಯಾಪಕರಾದರು. ಶಾಲೆಗೆ ಸರಕಾರದ ಅನುದಾನವಿದ್ದಿತು. ಆದರೆ ಮೂಲೋದ್ಯೋಗವಾದ ಬಡಿಗತನ–ಕೈಗಾರಿಕೆ–ತರಕಾರಿ ಬೆಳೆಸಲು ಅನುಮತಿ ಇರಲಿಲ್ಲ. ಅದಕ್ಕಾಗಿ ವೃತ್ತಿಗೆ ರಾಜಿನಾಮೆ ನೀಡಿ ರಾಷ್ಟ್ರೀಯ ಶಾಲೆ ಸೇರಿದರು. ಇವರು ಉತ್ತಮ ಬರಹಗಾರರು. 'ಫೇರಪ್ಲೆ' ಎಂಬ ಗುಪ್ತನಾಮದಿಂದ ಬ್ರಿಟಿಷ್ ಸರಕಾರವನ್ನು ಟೀಕಿಸುವ ಲೇಖನಗಳನ್ನು 'ಮುಂಬಯಿ ಡೆಕ್ಕನ್ ಕ್ರೊನಿಕಲ್' ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ವಿದ್ಯಾರ್ಥಿಗಳಲ್ಲಿ–ಪಾಲಕರಲ್ಲಿ ಉತ್ತಮ ಬಾಂಧವ್ಯದಿಂದ ತಿಮ್ಮಪ್ಪ ಮಾಸ್ತರ ಎಂದು ಹೆಸರುವಾಸಿಯಾದರು.

೧೯೨೪ರಲ್ಲಿ ಸಾಬರಮತಿ ಆಶ್ರಮ ಸೇರಿ ಗಾಂಧೀಜಿ ವಿಚಾರಧಾರೆ ಅಭ್ಯಸಿಸಿ ಹರಿಜನೋದ್ಧಾರ ಕೆಲಸಕ್ಕೆ ತೊಡಗಿದರು. ಗಾಂಧೀಜಿಯವರ ನಿಕಟವರ್ತಿಗಳಾದರು. ೧೯೨೬ರಲ್ಲಿ ಬಿಹಾರ ತೀವ್ರ ಬರಗಾಲಕ್ಕೆ ತುತ್ತಾಗಿತ್ತು. ಗಾಂಧೀಜಿಯವರ ಸಲಹೆಯಂತೆ ಬಿಹಾರಕ್ಕೆ ತೆರಳಿ ವಿದಾಯಕ ಕಾರ್ಯಗಳಿಂದ ಉದ್ಯಮಿಗಳಿಂದ ನಿಧಿ ಸಂಗ್ರಹಿಸಿ ಜನರಿಗೆ ಆಹಾರ, ಬಟ್ಟೆ ಒದಗಿಸಿದರು. ದಕ್ಷ

ಕಾರ್ಯಕರ್ತ ಎಂದು ಪ್ರಸಿದ್ಧರಾದರು. ಡಾ॥ ರಾಜೇಂದ್ರ ಪ್ರಸಾದರ ಕಾರ್ಯದರ್ಶಿಗಳಾದರು. ೧೯೨೮ರಲ್ಲಿ ಬೆಳಗಾಂವ ಜಿಲ್ಲೆಯ ಹುದಲಿಯಲ್ಲಿ ನೆಲೆಸಿ ಹರಿಜನ ಮಕ್ಕಳಿಗೆ ಶಾಲೆ, ಯುವಕರಿಗೆ ಗ್ರಾಮೋದ್ಯೋಗ ತರಬೇತಿ ಕೇಂದ್ರ ಪ್ರಾರಂಭಿಸಿ ಖಾದಿಬಟ್ಟೆ, ಜಮಖಾನೆ, ಕಟ್ಟಿಗೆ ವಸ್ತು, ಆಹಾರ ವಸ್ತು, ತಯಾರಿಸಿ ಮಾರುವ ಸಂಸ್ಥೆ ಸ್ಥಾಪಿಸಿ ಎರಡು ಸಾವಿರ ಜನರಿಗೆ ಉದ್ಯೋಗ ದೊರೆತು, ಹಲವು ಕುಟುಂಬಗಳಿಗೆ ಆಧಾರವಾದರು.

ಉತ್ತರ ಕನ್ನಡ ಜಿಲ್ಲೆಗೆ ಬಂದು ಅರಣ್ಯ ಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹ, ಕರಪತ್ರ ಹಂಚುವಿಕೆ ಮಾಡಿ ತಿಮ್ಮಪ್ಪ ನಾಯಕರು ೩೩ ತಿಂಗಳು ಜೈಲುವಾಸ ಅನುಭವಿಸಿದರು. ಪಾನನಿರೋಧ, ವೈಯಕ್ತಿಕ ಚಳವಳಿ ಮಾಡಿ ಪುನಃ ೨೦ ತಿಂಗಳು ಜೈಲು ಕಂಡರು. ಭಾರತ ಸ್ವತಂತ್ರವಾಗುವುದರಲ್ಲಿ ಒಟ್ಟು ೬೫ ತಿಂಗಳು ಜೈಲುವಾಸ ಅನುಭವಿಸಿದರು. ೧೯೪೪ರಲ್ಲಿ ಅಂಕೋಲಾದಲ್ಲಿ ಗ್ರಾಮಸೇವಾ ಸಮಿತಿ ಪ್ರಾರಂಭಿಸಿ, ಖಾದಿ ಉತ್ಪಾದನೆ, ಚರ್ಮ ಹದ ಮಾಡುವಿಕೆ, ಎಲಬು ಗೊಬ್ಬರ ತಯಾರಿಕೆ, ಜೇನು ಸಂಸ್ಕರಣಾ ಕೇಂದ್ರ ಸ್ಥಾಪಿಸಿ ೩೦೦೦ ಜನರಿಗೆ ಉದ್ಯೋಗ ದೊರೆಯಿತು. ಹೆಚ್ಕಡ ಗ್ರಾಮದಲ್ಲಿ ಸರ್ವೋದಯ ಕೇಂದ್ರ ಸ್ಥಾಪಿಸಿ ಖಾರವಿ, ಕುಣಬಿ ಸಮಾಜದವರಿಗೆ ಶಿಕ್ಷಣ, ಆರೋಗ್ಯ ಹಾಗೂ ಸಹಕಾರಿ ಸಂಘಟನೆಯ ಮಾರ್ಗದರ್ಶಿಗಳಾದರು.

ಭಾರತಕ್ಕೆ ಸ್ವಾತಂತ್ರ್ಯ ದೊರೆಯುವ ಸೂಚನೆ ಕಂಡುಬಂದಂತೆ ಹಿರಿಯ ಗಾಂಧಿವಾದಿ ಶ್ರೀ ವಾಮನ ಹೊದಿಕೆಯವರ ಸಲಹೆಯಂತೆ ಹಲವು ಖಾದಿ ಕಾರ್ಯಕರ್ತರು ಸೇರಿ ಸ್ವತಂತ್ರ ಭಾರತ ಸರಕಾರದಲ್ಲಿ ಯಾವುದೇ ಹುದ್ದೆ, ಏರದೆ ಕೇವಲ ಸಮಾಜ ಸೇವೆ ಕಾರ್ಯಮಾಡುವುದಾಗಿ ತಮ್ಮ ತಮ್ಮಲ್ಲೇ ಪ್ರತಿಜ್ಞೆ ಮಾಡಿದರು. ೧೯೫೦ರಲ್ಲಿ ಭಾರತ ಗಣರಾಜ್ಯವಾಗಿ ಡಾ॥ಬಾಬು ರಾಜೇಂದ್ರ ಪ್ರಸಾದ ಪ್ರಥಮ ರಾಷ್ಟ್ರಪತಿಗಳಾದರು. ಹಿರಿಯ ಕಾಂಗ್ರೆಸ್ ಧುರೀಣ ಶ್ರೀ ಪ್ರಕಾಶರ ಮೂಲಕ ಶ್ರೀ ತಿಮ್ಮಪ್ಪ ನಾಯಕರನ್ನು ಮುಂಬಯಿ ಪ್ರಾಂತ್ಯ ರಾಜಪಾಲರಾಗಲು ಕರೆಕಳುಹಿಸಿದರು. ಅದನ್ನು ನಯವಾಗಿ ನಿರಾಕರಿಸಿದ ತಿಮ್ಮಪ್ಪ ನಾಯಕರು, ತಮ್ಮ ಹಿಂದಿನ ಪ್ರತಿಜ್ಞೆಯನ್ನು ನೆನಪಿಸಿದರು. ೧೯೬೦ರಲ್ಲಿ ಗೋಕರ್ಣಕ್ಕೆ ಆಗಮಿಸಿದ ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದರು ಮಾವನಗೇರಿ ಆಶ್ರಮದಲ್ಲಿದ್ದ ಶ್ರೀ ತಿಮ್ಮಪ್ಪ ನಾಯಕರನ್ನು ಕರೆಸಿಕೊಂಡು ಯೋಗಕ್ಷೇಮ ವಿಚಾರಿಸಿದರು.



೧೯೬೭ರಲ್ಲಿ ಕರ್ನಾಟಕ ಸರಕಾರ ಮದ್ಯಪಾನ ಪ್ರತಿಬಂಧ ಹಿಂದಕ್ಕೆ ತೆಗೆದುಕೊಂಡಿತು. ಅದಕ್ಕೆ ಪ್ರತಿಭಟನೆಯಾಗಿ ಶ್ರೀ ತಿಮ್ಮಪ್ಪ ನಾಯಕರು ತಮ್ಮ ಆಶ್ರಮದಲ್ಲಿಯೇ ಉಪವಾಸಕ್ಕೆ ಕುಳಿತರು. ಆಗ ರಾಜ್ಯದ ಮಂತ್ರಿಮಂಡಳವೇ ಅವರ ಆಶ್ರಮಕ್ಕೆ ತೆರಳಿ ಉಪವಾಸ ಹಿಂತೆಗೆದುಕೊಳ್ಳಲು ಆಗ್ರಹಿಸಿತು. ಅಂಕೋಲಾ ವಿಧಾನಸಭಾ ಕ್ಷೇತ್ರಕ್ಕೆ ಅನಿರ್ದಿಷ್ಟಾವಧಿ ಮದ್ಯಪಾನ ಪ್ರತಿಬಂಧ ಜಾರಿಗೊಳಿಸಿದ ನಂತರ ಶ್ರೀ ತಿಮ್ಮಪ್ಪನಾಯುಕರು ಉಪವಾಸ ಹಿಂತೆಗೆದುಕೊಂಡರು. ಆ ೧೪ ದಿನಗಳ ಉಪವಾಸದಿಂದ ನಾಯಕ ಮಾಸ್ತರರ ಆರೋಗ್ಯ ದಿನದಿಂದ ದಿನಕ್ಕೆ ಹದಗೆಡತೊಡಗಿತ್ತು. ಅಂಕೋಲಾದ ಹಿರಿಯ ಸ್ವಾತಂತ್ರ್ಯಯೋಧ ಶ್ರೀ ಹರಿ ಪೈ ಅವರು ಶ್ರೀ ನಾಯಕ ಮಾಸ್ತರರನ್ನು ಗ್ರಾಮ ಸೇವಾಸಮಿತಿಯಲ್ಲಿ ಇರಿಸಿಕೊಂಡು ಆರೈಕೆ ಮಾಡಿದರು. ಸ್ವಾವಲಂಬಿಯಾಗ ಬಯಸಿದ ನಾಯಕ ಮಾಸ್ತರರು ಸ್ವತಃ ಅಡಿಗೆ ಮಾಡಿಕೊಳ್ಳಲು ಪ್ರಾರಂಭಿಸಿದ್ದರು. ೧೯೭೪ರ ನವೆಂಬರ್ ಅಂತ್ಯದಲ್ಲಿ ತಮ್ಮ ೭೭ನೇ ವಯಸ್ಸಿನಲ್ಲಿ ಕೊನೆಯುಸಿರು ಎಳೆದರು.

ಅವರ ಸ್ಮರಣಾರ್ಥ ಗ್ರಾಮ ಸೇವಾ ಸಮಿತಿ ಎರಡು ಪುಸ್ತಕಗಳನ್ನು ಹೊರ ತಂದಿದೆ.

೧) ಗಾಂಧೀವಾದಿ ಶ್ರೀ ತಿಮ್ಮಪ್ಪನಾಯಕರ ಬಾಳು– ಬೆಳಕು

೨) ಕರ್ನಾಟಕದ ಗಾಂಧೀ ಶ್ರೀ ತಿಮ್ಮಪ್ಪ ನಾಯಕ ಮಾಸ್ತರ

ಸಿದ್ದಾಪುರದಲ್ಲಿ ಸಿರ್ಸಿ ರಸ್ತೆ–ಚಂದ್ರಗುತ್ತಿ ರಸ್ತೆ ಹಾಗೂ ಜೋಗ ರಸ್ತೆ ಸೇರಿದ ಸ್ಥಳದಲ್ಲಿ ರಚಿತವಾದ ವೃತ್ತಕ್ಕೆ "ದಿವಂಗತ ತಿಮ್ಮಪ್ಪ ನಾಯಕ ವೃತ್ತ" ಎಂದು ಹೆಸರಿಡಲಾಗಿದೆ.

## ೩) ಶ್ರೀ ವಾಮನ ಅನಂತ ಹೊದಿಕೆ ಮಾಸ್ತರ

ಸಿರಸಿಯಲ್ಲಿ ಹುಟ್ಟಿ–ಬೆಳೆದ ಶ್ರೀ ವಾಮನ ಹೊದಿಕೆಯವರು ಅಪ್ಪಟ ಭಾರತೀಯವಾದಿಗಳು. ವಿಧ್ಯಾರ್ಥಿ ದೆಸೆಯಿಂದಲೇ ಅದನ್ನು ಪ್ರತಿಪಾದಿಸುತ್ತಿದ್ದರು. ೬ನೇ ವರ್ಗಕ್ಕೆ ಧಾರವಾಡದಲ್ಲಿ ಸರಕಾರಿ ಶಾಲೆ ಸೇರಿ ಅದರ ವಸತಿಗೃಹದಲ್ಲಿದ್ದರು. ಅಲ್ಲಿಯ ವಾಚನಾಲಯ, ಉಪನ್ಯಾಸಮಾಲೆ, ಸಭೆ ಸಮಾರಂಭಗಳಲ್ಲಿ ಸ್ವಯಂ

ಸೇವಕರಾಗಿ ದುಡಿಯುತ್ತಿದ್ದರು. ಭಾರತೀಯ ಸಂಸ್ಕೃತಿಯನ್ನು ಬಹುವಾಗಿ ಅಭ್ಯಸಿಸುತ್ತಿದ್ದರು.

೧೯೨೦ರಲ್ಲಿ ಬಾಲಗಂಗಾಧರ ತಿಲಕರ–ನಿಧನ ಶೋಭಾಯಾತ್ರೆಯಲ್ಲಿ ಭಾಗವಹಿಸಿ ರಾತ್ರಿ ತಡವಾಗಿ ವಸತಿಗೃಹಕ್ಕೆ ಬಂದರೆಂದು ವಸತಿಗೃಹದಿಂದ ಹೊರ ಹಾಕಿದಾಗ ಸಮೀಪದ ಮಾರುತಿ ವ್ಯಾಯಾಮ ಶಾಲೆಯಲ್ಲಿ ಮಲಗಿದರು. ಅಂದಿನಿಂದ ವ್ಯಾಯಾಮ ಶಾಲೆಗೆ ವಿದ್ಯಾರ್ಥಿಯಾದರು ಅವರ ಕ್ರಮದಂತೆ ಭಾರತೀಯ ಉಡುಪನ್ನು ಧರಿಸುವ ಪ್ರತಿಜ್ಞೆ ಮಾಡಿದರು. ಅಂದಿನಿಂದ ವಾಮನ ಹೊದಿಕೆಯವರ ಉಡುಪೆಂದರೆ ಅರ್ಧ ತೋಳಿನ ಅಂಗಿ, ಮೊಣಕಾಲ ಉದ್ದದ ಚಡ್ಡಿ, ತಲೆಯ ಮೇಲೊಂದು ಬಿಳಿಯ ಟೊಪ್ಪಿ. ಜೀವನದ ಕೊನೆಯ ತನಕ ಅದೇ ರೀತಿ ಉಡುಗೆ–ತೊಡುಗೆ. ಇವರು ಉತ್ತಮ ಬರಹಗಾರರಾಗಿದ್ದರು. ಶಾಲೆಯಲ್ಲಿ ನಿಬಂಧ ಬರೆಯುವಾಗ ವಿಷಯಾಂತರ ಮಾಡಿ ಬ್ರಿಟಿಷ್ ಸರಕಾರವನ್ನು ದೂರುವ, ಶಾಲಾನಿಯಮಗಳನ್ನು ನಿಂದಿಸುವಂತೆ ಬರೆಯುತ್ತಿದ್ದರು. ಶಾಲಾ ವಸ್ತ್ರನಿಯಮ ಉಲ್ಲಂಘಿಸಿದರೆಂದು ಶಾಲೆಯಿಂದ ಹೊರಹಾಕಿದರು. ಅನಿವಾರ್ಯವಾಗಿ ಸಿರಸಿಗೆ ಮರಳಿದರು.

ಗೆಳೆಯರ ಸಲಹೆಯಂತೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ರಾಷ್ಟ್ರೀಯ ಶಾಲೆ ಪ್ರಾರಂಭಿಸಿದರು. ತಮ್ಮದೇ ಪಠ್ಯಕ್ರಮ ತಯಾರಿಸಿ ಮೂಲೋದ್ಯೋಗ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿದರು. ನೂಲುವುದು, ನೆಯ್ಯುವುದು, ತರಕಾರಿ ಬೆಳೆಸುವುದನ್ನು ಕಲಿಸುತ್ತಿದ್ದರು. ವಿಜ್ಞಾನ, ಗಣಿತ, ಸಮಾಜ ಅಭ್ಯಾಸವಲ್ಲದೆ, ಕನ್ನಡ, ಹಿಂದಿ, ಸಂಸ್ಕೃತವನ್ನು ಕಲಿಸುವ ವ್ಯವಸ್ಥೆ ಮಾಡಿದರು. ಬೆಳಿಗ್ಗೆ ಪ್ರಾರ್ಥನೆ ಪ್ರಭಾತ ಫೇರಿ ಹೋಗುವ ಕ್ರಮ ಪ್ರಾರಂಭಿಸಿದರು. ವಿದ್ಯಾರ್ಥಿಗಳಿಗೆ ಶಿಸ್ತಿನ ನಡವಳಿಕೆ ಕಲಿಸಿ "ಹೊದಿಕೆ ಮಾಸ್ತರ" ಆದರು ಶಾಲೆಗೆ ಉತ್ತಮ ಪ್ರಚಾರ ದೊರೆತು ಎರಡೇ ವರ್ಷದಲ್ಲಿ ೨೦೦ ವಿದ್ಯಾರ್ಥಿಗಳು ಪ್ರವೇಶ ಪಡೆದರು. ಹೀಗಾಗಿ ಬಹುಪಾಲು ವಿದ್ಯಾರ್ಥಿಗಳು ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು. ಊರ ಸಂತೆಯ ದಿನ ಪೇಟೆಯ ಮಧ್ಯವರ್ತಿ ಸ್ಥಳದಲ್ಲಿ ವೇದಿಕೆ ನಿರ್ಮಿಸಿ ಗಾಂಧಿ ತತ್ವ ಬೋಧನೆ, ಭಾಷಣ, ರಾಷ್ಟ್ರಭಕ್ತಿಗೀತೆ ಹಾಡುವ ಪರಿಪಾಠ ಶಾಲೆಯಿಂದ ಪ್ರಾರಂಭಿಸಿದರು. ವಾರಕ್ಕೆ ಎರಡು ಸಲ ಸಾರಾಯಿ ಅಂಗಡಿ ಮುಂದೆ ಪಿಕೆಟಿಂಗ್ ಮಾಡುತ್ತಿದ್ದರು.



೧೯೩೦ರಲ್ಲಿ ಅಂಕೋಲಾದಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಲು ಸಿರಸಿಯಿಂದ ಅಂಕೋಲಾ ತನಕ 'ಅರುಣೋದಯಪಥ' ಎಂದು ಗೆಳೆಯರೊಡನೆ ಪಾದಯಾತ್ರೆ ಕೈಗೊಂಡರು. ದಾರಿಯುದ್ದಕ್ಕೂ ಕರ ನಿರಾಕರಣ ಪ್ರಚಾರ ಮಾಡಿದರು. ಚಳವಳಿ ಪ್ರಚೋದಿಸಿದರೆಂದು ವಾಮನ ಹೊದಿಕೆಯವರನ್ನು ಬಂಧಿಸಿದಾಗ ಅವರಿಗೆ ೯ ತಿಂಗಳು ಶಿಕ್ಷೆಯಾಯಿತು. ಕೇವಲ ಭಾಷಣ ಮಾಡಿದರೆಂದು ೯ ತಿಂಗಳುಗಳು ಶಿಕ್ಷೆ ನೀಡಿದ್ದರು. ಬಿ–ವರ್ಗದ ಕೈದಿಯಾಗಿದ್ದರು. ಸಿ ವರ್ಗದಕೈದಿಗಳಿಗೆ ಕಡಿಮೆ ಸವಲತ್ತೆಂದು ಆಹಾರಕ್ಕೆ ಜೋಳದರೊಟ್ಟಿ –ಬೇಯಿಸಿದ ಬೇಳೆ ನೀಡಲಾಗುತ್ತಿತ್ತು. ಹಾಗಾದರೆ "ನಾನೂ ಅದನ್ನೇ ತಿನ್ನುತ್ತೇನೆ" ಎಂದು ಹಟ ಮಾಡಿದರು. ಅವರಿಗೆ ಉತ್ತಮ ಆಹಾರ ನೀಡಿದರೆ ಮಾತ್ರ ತಾನು ಬಿ ವರ್ಗದ ಸೌಲತ್ತು ಪಡೆಯುವೆ ಎಂದರು. ಕ್ರಿಮಿನಲ್ ಕೈದಿಗಳಂತೆ ತಾನು ಶೌಚಾಲಯ ತೊಳೆಯುವುದು, ಮಲ ಹೊರುವ ಕೆಲಸ ಮಾಡುತ್ತೇನೆ ಎಂದು ಮಾಡತೊಡಗಿದರು. ಕ್ರಿಮಿನಲ್ ಕೈದಿಗಳಿಗೆ ಅಹಿಂಸಾವಾದ–ಗಾಂಧಿ ತತ್ವ ಬೋಧಿಸತೊಡಗಿದರು. ಇದರಿಂದ ಜೈಲು ಅಧಿಕಾರಿಗಳು ಸಿ–ವರ್ಗದ ಕೈದಿಗಳಿಗೆ ಸೌಲತ್ತು ಹೆಚ್ಚಿಸಿದರು, ಕ್ರಿಮಿನಲ್ ಕೈದಿಗಳ ಮನ ಪರಿವರ್ತನೆ ಆಗತೊಡಗಿತು.

೧೯೩೨ರಿಂದ ಮುಂದಿನ ೧೦ ವರ್ಷಗಳ ಅವಧಿಯಲ್ಲಿ ಅಸಹಕಾರ ಚಳವಳಿ ಪ್ರಚೋದನೆ, ವಿದೇಶಿ ವಸ್ತ್ರಬಹಿಷ್ಕಾರ, ಪಾನ ನಿರೋಧ ಚಳವಳಿ ಭಾಗಿ ಎಂದು ೬ ಸಲ ಜೈಲು ಶಿಕ್ಷೆಯಾಯಿತು ಒಟ್ಟು ೬ ವರ್ಷ ೧೦ ತಿಂಗಳು ಜೈಲಿನಲ್ಲಿ ಕಳೆದರು. ೧೯೪೫ರಿಂದ ರಾಷ್ಟ್ರೀಯ ಚಳವಳಿಯ ತೀವ್ರತೆ ಕಡಿಮೆ ಆಗುತ್ತಿದ್ದಂತೆ ಹೊದಿಕೆ ಮಾಸ್ತರರು ಗ್ರಾಮೋದ್ಯೋಗದ ಕಡೆ ಲಕ್ಷ್ಯ ವಹಿಸತೊಡಗಿದರು. ಸಿರಸಿಯಿಂದ ಎರಡು ಮೈಲು ದೂರ ೬ ಎಕರೆ ಭೂಮಿ ಖರೀದಿಸಿ ಕಬ್ಬು– ಸಿರಿಧಾನ್ಯ ಬೆಳೆಸುವ ಕ್ರಮವನ್ನು ರೈತರಿಗೆ ಪರಿಚಯಿಸಿದರು. ಗುಡಿ ಕೈಗಾರಿಕೆ ಕೇಂದ್ರ ಪ್ರಾರಂಭಿಸಿ ಯುವಕರಿಗೆ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹಿಸಿದರು. ಪ್ರತಿದಿನ ನೂಲು ತೆಗೆಯುವುದು, ಬರವಣಿಗೆ ಕೆಲಸ ಮಾಡುತ್ತಿದ್ದರು.

೧೯೦೧ರಲ್ಲಿ ಜನಿಸಿದ ಶ್ರೀ ವಾಮನ ಹೊದಿಕೆ ತಮ್ಮ ೮೦ ವರ್ಷ ಜೀವಿತ ಅವಧಿಯಲ್ಲಿ ೫೮ ಪುಸ್ತಕಗಳನ್ನು ಬರೆದಿರುವರು, ಪಂಚಾಮೃತ,

ಸರ್ವೋದಯ ಶಾಲಾ ಪತ್ರಿಕೆ, ಕಥಾಸಂಗ್ರಹ ಮಾಲಿಕೆ, ಭೂದಾನ ಹೀಗೆ ನಾಲ್ಕು ಪತ್ರಿಕೆಗಳ ಸಂಪಾದಕರಾಗಿದ್ದರು. ಹಲವು ವರ್ಷ ವಿನೋಬಾ ಅವರೊಡನೆ ತಿರುಗಾಟ ಮಾಡಿದರು. ಆಹಾರ–ಆರೋಗ್ಯ ಮಾಸಪತ್ರಿಕೆ ಹೊರಡಿಸಿ ನಿರಗ್ನಿ ಆಹಾರ ಪ್ರಚಾರ ಮಾಡಿದರು. ಶ್ರೀ ವಾಮನಹೊದಿಕೆಯವರು ಅಂದಿನ ಯುವಕರಿಗೆ ಆದರ್ಷ ಗುರುಗಳು, ಕ್ರಿಯಾಶೀಲವ್ಯಕ್ತಿ, ಸಚ್ಚಾರಿತ್ರ ಬೋಧಕರಾಗಿ, ಭಾರತೀಯ ಸಂಸ್ಕೃತಿಯ ಸುಪುತ್ರರಾಗಿ ದೇಶ ಸ್ವಾತಂತ್ರ್ಯಕ್ಕಾಗಿ ದುಡಿದವರು.

## ೪) ದೇಶಾಭಿಮಾನದ ಕ್ರಾಂತಿ ಮೂಡಿಸಿದ –ಹಬೀಬುಲ್ಲಾಖಾನ್

ಇವರು ಪಂಜಾಬದ ಪೇಶಾವರ ಪ್ರಾಂತದವರು. ೧೯೧೯ರ ಏಪ್ರಿಲ್ ೧೩ರಂದು ಜಲಿಯನ್ ವಾಲಾಬಾಗ್‌ನಲ್ಲಿ ಬ್ರಿಟಿಷ್ ಸೇನೆ ಸುರಿಸಿದ ಗುಂಡಿನ ಮಳೆಯಲ್ಲಿ ಇವರಿಗೆ ಗುಂಡು ತಗುಲಿ ಎಡಗೈ ಸೀಳಿ ಮೊಂಡಾಗಿತ್ತು. ೧೯೨೧ರ ಜುಲೈನಲ್ಲಿ ಧಾರವಾಡದ ರಾಜಕೀಯ ಸಮ್ಮೇಳನಕ್ಕೆ ಪೇಶಾವರದ ಪ್ರತಿನಿಧಿಯಾಗಿ ಬಂದಿದ್ದರು. ಶ್ರೀ ಶಂಕರ ಗುಲ್ವಾಡಿಯವರ ಸ್ನೇಹದಿಂದ ಉತ್ತರ ಕನ್ನಡ ಜಿಲ್ಲೆಗೆ ಬಂದು ದೇಶಾಭಿಮಾನದ ಕ್ರಾಂತಿಯನ್ನು ಎಬ್ಬಿಸಿದರು. ಉತ್ತಮ ವಾಗ್ಮಿಗಳಾದ ಹಬೀಬುಲ್ಲಾಖಾನ್ ಸರಳ–ಸುಲಭ ಹಿಂದಿಯಲ್ಲಿ ಮಾತನಾಡುತ್ತಿದ್ದರು ನಾಲ್ಕು ಜನ ಸೇರಿದಲ್ಲಿ ನಿಂತು ಜಲಿಯನ್ ವಾಲಾಭಾಗ್ ವಿಷಯ ತೆಗೆದು ತನ್ನ ಅನುಭವ ವರ್ಣಿಸುತ್ತಿದ್ದರು. ೩೭೯ ಜನರ ಹತ್ಯೆಗೆ ಕಾರಣರಾದ ಜನರಲ್ ಡಯರ್‌ರ ದರ್ಪ, ಮೊಂಡುತನದ ವರ್ತನೆ ಖಂಡಿಸುತ್ತಿದ್ದರು. ಬ್ರಿಟಿಷ್ ಸರಕಾರದ ರೀತಿ–ನೀತಿ–ನಿಯಮಗಳನ್ನು ಟೀಕಿಸುತ್ತಿದ್ದರು.

ಸಭೆ ಸಮಾರಂಭಗಳಲ್ಲಿ ಭಾಷಣ ಮಾಡುವಾಗ ತನ್ನ ಎಡಗೈಯನ್ನು ಎತ್ತಿ ತೋರಿಸುತ್ತಾ ತಮಗಾದ ಅನ್ಯಾಯ, ಬ್ರಿಟಿಷ್ ಅಧಿಕಾರಿಗಳ ಕುಯುಕ್ತಿ ಕೆಲಸ, ದ್ರೋಹದ ಬಗೆ ನಿವೇದಿಸುತ್ತಿದ್ದರು. ರೌಲಟ್ ಆಕ್ಟ್ ಹೇಗೆ ಮಾನವ ಹಕ್ಕು ದಮನಗೊಳಿಸಿದೆ ಎಂದು ವಿಸ್ತಾರವಾಗಿ ತಿಳಿಸಿ ಹೇಳುತ್ತಿದ್ದರು. ಭಾರತದಲ್ಲಿ ಬ್ರಿಟಿಷ್ ಸರಕಾರದ ನೌಕರರಿಗೆ 'ಬಾಡಿಗೆ ನಾಯಿಗಳು' ಎಂದು ಜರೆಯುತ್ತಿದ್ದರು. ಅವರ ಸಂಬಳ ಉದಾಹರಿಸಿ ಪೋಲೀಸರಿಗೆ ೨೦ ರೂ ನಾಯಿಗಳು, ಮಾಮಲೇದಾರ, ಫೌಜುದಾರ ೩೫ ರೂ ನಾಯಿಗಳು ಎಂದು



ಉದಾಹರಿಸುತ್ತಿದ್ದರು. ಹಬೀಬುಲ್ಲಾಖಾನರ ಮಾತಿಗೆ ಮಾರುಹೋಗದ ಜನವೇ ಇರಲಿಲ್ಲ. ಅಷ್ಟು ಸ್ಫೂರ್ತಿದಾಯಕ ಭಾಷಣಕಾರರಾಗಿದ್ದರು. ಸಿದ್ದಾಪುರದಲ್ಲಿ ಇವರ ಭಾಷಣ ಕೇಳಿ ಯುವಕ ಬೇಡ್ಕಣಿ ಚೌಡಾನಾಯ್ಕರು ಸಿಡಿದೆದ್ದು ಬ್ರಿಟಿಷರ ವಿರುದ್ಧ ಘೋಷಣೆಗಳನ್ನು ಕೂಗಹತ್ತಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಬೀಬುಲ್ಲಾಖಾನರ ಭಾಷಣ ಕೇಳಿ ಮುಸ್ಲಿಂ ಸಮುದಾಯದ ಬಹಳಷ್ಟು ಮಂದಿ ಸ್ವಾತಂತ್ರ್ಯ ಚಳವಳಿಗೆ ಸೇರಿದರು. ಭಟ್ಕಳ ತಾಲ್ಲೂಕಿನಲ್ಲಿ ಇದರ ಪರಿಣಾಮ ತೀವ್ರವಾಯಿತು. ಇತರ ಸಮಾಜದ ಯುವಕರು ಹಬೀಬುಲ್ಲಾ ಖಾನರ ಅನುಯಾಯಿಗಳಾದರು. ಹಲವು ಕಡೆಯಲ್ಲಿ ರಾಷ್ಟ್ರೀಯ ಶಾಲೆ ತೆರೆಯಲು ಇವರು ಪ್ರೇರಕರಾದರು. ಶಾಲೆಗಳಿಗೆ ಸಹಾಯಕವಾಗುವ ಮುಷ್ಠಿ ಫಂಡ್ ಯೋಜನೆ ಹಬೀಬುಲ್ಲಾಖಾನರದೇ ಆಗಿತ್ತು ಹಾಗೂ ಅದನ್ನು ಸಂಗ್ರಹಿಸುವ ಕ್ರಮ ವಾನರ ಸೇನೆಯ ಸದಸ್ಯರಿಗೆ ನಿರ್ವಹಿಸಿದ್ದು ಇವರು.

## ೫) ಬೇಡ್ಕಣಿ ಚೌಡಾನಾಯ್ಕ

ರಾವ್ ಬಹದ್ದೂರ್ ಶ್ರೀ ಕನ್ನಾ ನಾಯ್ಕರ ಸುಪುತ್ರರು ಬೇಡ್ಕಣಿ ಚೌಡಾನಾಯ್ಕರು. ಈ ವಿಭಾಗದ ನಾಮಧಾರಿ ಸಮಾಜದಲ್ಲಿ ಪ್ರಥಮ ಮೆಟ್ರಿಕ್ ಪಾಸಾದ ವ್ಯಕ್ತಿಗಳು. ಹೊನ್ನಾವರದಲ್ಲಿ ಕಲಿಯುವಾಗಲೇ ದೇಶಾಭಿಮಾನ ಬೆಳೆಸಿಕೊಂಡವರು. ಶಿಕ್ಷಣ ಮುಗಿಸಿ ಬೇಡ್ಕಣಿ ಮನೆಯಲ್ಲಿರುವಾಗ ಸಿದ್ದಾಪುರದಲ್ಲಿ ದೇಶಪ್ರೇಮಿ ಹಬೀಬುಲ್ಲಾ ಖನರ ಭಾಷಣವಿದೆ ಎಂದು ತಿಳಿದು ಆ ಸಭೆಗೆ ಹೋಗಿದ್ದರು. ಹಬೀಬುಲ್ಲಾಖಾನರ ಭಾಷಣ ಕೇಳಿ ಸ್ಫೂರ್ತಿ ತಳೆದು ಸಭೆಯಲ್ಲಿ ವೀರಾವೇಶದಿಂದ ಘೋಷಣೆಗಳನ್ನು ಕೂಗಿದರು. ಅದೇದಿನ ರಾತ್ರಿ ಅವರನ್ನು ಕಂಡು ಬ್ರಿಟಿಷ್ ಸರಕಾರದ ಕಾಯ್ದೆ ಕಟ್ಟಳೆಗಳ ಕುರಿತು ವಿಶೇಷ ಚರ್ಚೆ ಮಾಡಿದರು. ಮರುದಿನ ಮಾವಿನ ಗುಂಡಿಯಲ್ಲಿ ನಡೆದ ಸಭೆಯಲ್ಲಿ ಭಾಷಣಮಾಡಿ ಬ್ರಿಟಿಷ್ ಸರಕಾರವನ್ನು ತುಚ್ಚವಾಗಿ ಬೈದು, ಹೀಯಾಳಿಸಿದರು. ಪೋಲೀಸರು ಚೌಡಾನಾಯ್ಕರನ್ನು ಬಂಧಿಸಿ ಕೋರ್ಟಿಗೆ ಹಾಜರುಪಡಿಸಿದರು. ಅವರಿಗೆ ೬ ತಿಂಗಳು ಜೈಲುವಾಸ ಶಿಕ್ಷೆಯಾಯಿತು. ಉತ್ತರ ಕನ್ನಡ ಜಿಲ್ಲೆಯ ಪ್ರಥಮಕೈದಿಯಾಗಿ ಜೈಲು ಸೇರಿದರು.

ಶಿಕ್ಷೆ ಅನುಭವಿಸಿ ಮನೆಗೆ ಬಂದಾಗ ತಂದೆ ಶ್ರೀ ಕನ್ನಾ ನಾಯ್ಕರು ಮಗನಿಗೆ ಬುದ್ಧಿವಾದ ಹೇಳಿ ಸಿದ್ದಾಪುರಕ್ಕೆ ಜಿಲ್ಲಾ ಕಲೆಕ್ಟರ್ ಬಂದಾಗ ಮಗನನ್ನು ಅವರಲ್ಲಿಗೆ ಕರೆದೊಯ್ದು ಬುದ್ಧಿವಾದ ಹೇಳಲು ವಿನಂತಿಸಿಕೊಂಡರು. ಕಲೆಕ್ಟರ್ ಸಾಹೇಬರು "ಸರಕಾರದ ನೀತಿ ನಿಯಮಗಳನ್ನು ಟೀಕಿಸುವುದು ಸರಿಯಲ್ಲ, ಅದನ್ನು ಬಿಟ್ಟು–ಸರಕಾರಿ ನೌಕರಿ ಸೇರಲು ಇಚ್ಛೆ ಇದ್ದರೆ ನೌಕರಿ ಕೊಡಿಸುವೆ" ಎಂದರು. "ಸರಕಾರದಿಂದ ಜನರಿಗೆ ಅನ್ಯಾಯವಾಗುವುದು ಸಹಿಸಲಾರೆ" ಎಂದು ನಿಷ್ಠುರವಾಗಿ ಮಾತನಾಡಿ ಅಲ್ಲಿಂದ ಎದ್ದು ಬಂದರು.

ಮನೆಗೆ ಬಂದ ನಂತರ ಕನ್ನಾ ನಾಯ್ಕರು 'ಈ ನಂತರ ನೀನು ನನ್ನಮಗನೇ ಅಲ್ಲ. ನಿನಗೆ ಆಸ್ತಿಯ ಕವಡೆಕಾಸೂ ಕೊಡುವುದಿಲ್ಲ. ಮನೆಯಲ್ಲಿ ಇರಬಾರದು' ಎಂದು ಬೈದರು. ಸಿದ್ದಾಪುರ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ ಚೌಡಾನಾಯ್ಕರು ಪ್ರತಿದಿನ ನಾಲ್ಕು ಹೊರೆ ಕಟ್ಟಿಗೆ ಕಾಡಿನಿಂದ ತಂದು ಚಂದ್ರಘಟ್ಗಿ ಪರಾಂಗಣದಲ್ಲಿ ಇಟ್ಟು, ಅದನ್ನು ಮಾರಿ ಹಣವನ್ನು ಕಾಂಗ್ರೆಸ್ ಫಂಡಿಗೆ ಕೊಡುತ್ತಿದ್ದರು. ಹೀಗಾಗಿ ಶಂಕರ ಗುಲ್ವಾಡಿಯವರಿಗೆ ನಿಕಟವರ್ತಿಗಳಾದರು. ಹಾಗಾಗಿ ಪೋಲೀಸರು ಬಂಧಿಸಿ ಕೋರ್ಟಿಗೆ ಹಾಜರು ಪಡಿಸಿದರು. ಈ ಸಲ ಅವರಿಗೆ ೧೦ ತಿಂಗಳು ಜೈಲು ಶಿಕ್ಷೆ ವಿಧಿಸಲಾಗಿತ್ತು. ಶಿಕ್ಷೆ ಅನುಭವಿಸಿ ಮನೆಗೆ ಹಿಂತಿರುಗಿದ ದಿನ ಒಂದು ವಿಶಿಷ್ಟ ಘಟನೆ ಸಂಭವಿಸಿತು.

ಊರ ಚನ್ನಬಸವಗೌಡರ ಮನೆ ಎದುರು ಅಡಿಕೆಕೊನೆ ತುಂಬಿದ ಎತ್ತಿನಗಾಡಿ ನಿಂತಿತ್ತು. ಶ್ರೀ ಸೂರಭಟ್ಟರ ಕರಬಂದಿ ಕಾರಣ ಲಿಲಾವಾದ ಅಡಿಕೆ ಅದು ಎಂದು ಚೌಡಾನಾಯ್ಕರಿಗೆ ತಿಳಿದುಬಂತು. ಅದೇ ದಿನ ಕತ್ತಲು ರಾತ್ರಿಯಲ್ಲಿ ಅವರು ಅಲ್ಲಿಗೆ ಹೋಗಿ ಎತ್ತುಗಳನ್ನು ಬಿಡಿಸಿ ದೂರ ಓಡಿಸಿ ಗಾಡಿಗೆ ಬೆಂಕಿಕೊಟ್ಟು ಆ ರಾತ್ರಿ ಪತ್ನಿ ಮೈಲಮ್ಮನಿಗೆ ವಿಷಯ ತಿಳಿಸಿ ನೆಂಟರ ಮನೆ ಸೇರಿದರು. ಚೌಟಾನಾಯ್ಕರು ಜೈಲಿನಿಂದ ಬಿಡುಗಡೆಯಾದದ್ದು ಯಾರಿಗೂ ಗೊತ್ತಿರದಿದ್ದರಿಂದ ಇವರ ಮೇಲೆ ಯಾರಿಗೂ ಸಂಶಯ ಬರಲಿಲ್ಲ.

೧೯೩೪ರಲ್ಲಿ ಗಾಂಧೀಜಿ ಸಿದ್ದಾಪುರಕ್ಕೆ ಬಂದಾಗ ಅವರಿದ್ದ ವೇದಿಕೆ ಮೇಲೆ ಹತ್ತಿದ ಚೌಡಾನಾಯ್ಕರು ತಮ್ಮ ಕೈಲಿದ್ದ ಉಂಗುರ ತೆಗೆದು ಕಾಂಗ್ರೆಸ್ ಫಂಡಿಗೆ ದೇಣಿಗೆ ಎಂದು ಗಾಂಧೀಜಿ ಕೈಯೊಳಗೆ ಇತ್ತರು. ಸಿದ್ದಾಪುರದ



ನಾಮಧಾರಿ ಸಮಾಜದ ವಿದ್ಯಾರ್ಥಿಗಳಿಗಾಗಿ ಒಂದು ಹಾಸ್ಟೆಲು ತೆರೆದು ೫೦ ಜನರಿಗೆ ಆಶ್ರಯ ನೀಡಿದರು. ಗಾಂಧೀಜಿಯವರ ಕರೆಯ ಮೇರೆಗೆ ಇತರ ಕೆಳಜಾತಿಯ ಜನರನ್ನು ದೇವಸ್ಥಾನಗಳ ಪ್ರವೇಶಕ್ಕೆ ಅನುವು ಮಾಡಿಕೊಡುವ ಚಳವಳಿ ಪ್ರಾರಂಭವಾಗಿತ್ತು. ನಾಮಧಾರಿ ಜನಾಂಗದ ಕೆಲ ಯುವಕರು ಭುವನಗಿರಿ ಭುವನೇಶ್ವರಿ ದೇವಸ್ಥಾನ ಇಟನಿ ರಾಮೇಶ್ವರ ದೇವಸ್ಥಾನಗಳನ್ನು ಬಲವಂತವಾಗಿ ಪ್ರವೇಶಿಸಲು ಮುಂದಾದರು. ಆಗ ಬ್ರಾಹ್ಮಣ ವರ್ಗದ ಪ್ರತಿಭಟನೆ ತೀವ್ರವಾಯಿತು. ಕೂಡಲೇ ಚೌಡಾನಾಯ್ಕರು ಹಲವು ಚಳವಳಿ ಮುಖಂಡರನ್ನು, ಕಾಂಗ್ರೆಸ್ ಮುಖಂಡರನ್ನು ಒತ್ತಟ್ಟಿಗೆ ತಂದು ವಿಚಾರ ವಿನಿಮಯ ಮಾಡಿಸಿ, ನಾಮಧಾರಿ ಜನಾಂಗದ ಜನರಿಗೆ ದೇವಸ್ಥಾನದಲ್ಲಿ ಪ್ರವೇಶ ಒದಗಿಸಿದರು.

೧೯೩೭ರಲ್ಲಿ ಜವಹರಲಾಲ್ ನೆಹರು ರವರು ಸಿದ್ದಾಪುರಕ್ಕೆ ಬಂದಾಗ ಶ್ರೀ ಚೌಡಾನಾಯ್ಕ ಹಾಗೂ ಶ್ರೀಮತಿ ಮೈಲಮ್ಮ ಭಾಷಣ ವೇದಿಕೆ ಏರಿದರು. ಮೈಲಮ್ಮನವರು ತಮ್ಮ ಕೊರಳಿನ ನವರತ್ನ ಹಾರವನ್ನು ಕಾಂಗ್ರೆಸ್ ಫಂಡಿಗೆ ಅರ್ಪಿಸಿದರು. ಈ ಕುರಿತು ನೆಹರುರವರು, ದಿಲ್ಲಿಗೆ ತಲುಪಿದ ನಂತರ ಕಾಂಗ್ರೆಸ್ ಸಮಿತಿಯಿಂದ ಚೌಡಾನಾಯ್ಕರಿಗೆ ಕೃತಜ್ಞತಾ ಪತ್ರ ಕಳಿಸಿದರು. ವೈಯಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಚೌಡಾನಾಯ್ಕರು ಪ್ರತಿದಿನ ಸಿದ್ದಾಪುರ ಪೇಟೆ ಹಾಗೂ ಸಮೀಪ ಹಳ್ಳಿಗಳಲ್ಲಿ ಸರಕಾರದ ವಿರುದ್ಧ ಘೋಷಣೆ ಕೂಗುತ್ತಾ ನಡೆಯುತ್ತಿದ್ದರು. ಆದರೆ ಕ್ರಾಂತಿಕಾರಿ ಮನೋಭಾವದ ಇವರು ಅಂಚೆ ಚೀಲವನ್ನು ತಡೆಯುವುದು, ಟೆಲಿಗ್ರಾಂ ತಂತಿಗಳನ್ನು ತುಂಡರಿಸುವುದನ್ನು ಮಾಡಿದರು. ಮಳವಳ್ಳಿ ಸೇತುವೆ ಕೆಡುವುದರಲ್ಲಿ ಪ್ರಮುಖಪಾತ್ರ ವಹಿಸಿದ್ದನ್ನು ತಿಳಿದ ಪೋಲೀಸರು ಇವರನ್ನು ಬಂಧಿಸಿದರು. ಒಂದೂವರೆ ವರ್ಷ ಶಿಕ್ಷೆಯಾಯಿತಲ್ಲದೆ, ಒಂದೂವರೆ ವರ್ಷ ವಿಚಾರಣಾಧೀನ ಕೈದಿ ಎಂದು ಜೈಲಿನಲ್ಲಿ ಇಟ್ಟರು. ಬಿಡುಗಡೆಯಾಗಿ ಊರಿಗೆ ಬಂದು ತಮ್ಮ ಕುಟುಂಬದ ಕ್ರಮದಂತೆ ಒಕ್ಕಲುತನ ಮಾಡಿ ಆದರ್ಶ ಕೃಷಿಕ ಎನಿಸಿಕೊಂಡರು. ಭಾರತ ಸ್ವಾತಂತ್ರ್ಯಾನಂತರ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡು ತಮ್ಮ ಸಮಾಜದ ಏಳಿಗೆಗಾಗಿ ದುಡಿದರು. ೧೮೯೮ರಲ್ಲಿ ಜನಿಸಿದ ಚೌಡಾನಾಯ್ಕರು ತಮ್ಮ ೫೪ನೇ ವರ್ಷದಲ್ಲಿ ಮನೋವಿಕಲ್ಪ ಹೊಂದಿದ ಕಾರಣ ಧಾರವಾಡ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಲ್ಲಿಯೇ ಅವರು ಸ್ವರ್ಗಸ್ಥರಾದರು.

## ಶ್ರೀಮತಿ ಗೋದೂಬಾಯಿ ಯಾನೆ ಸೀತಾಬಾಯಿ ಮಡಗಾಂವಕರ

ಸಿದ್ದಾಪುರ ಚಂದ್ರಘಟ್ಗಿ ಕುಟುಂಬದಲ್ಲಿ ಜನಿಸಿದ ಇವರು ಸದಾ ಪರೋಪಕಾರ, ಸಾಹಸ ಪ್ರವೃತ್ತಿ, ಬುದ್ಧಿವಂತಿಕೆ ಹೊಂದಿದ್ದು ಪ್ರಾಥಮಿಕ ೭ನೇ ವರ್ಗ ಪಾಸಾದವರು. ಹೆಣ್ಣುಮಕ್ಕಳಿಗೆ ಆಗ ನಿಷಿದ್ಧ ಎಂದಿದ್ದರೂ ಈಜುವುದು, ಸೈಕಲ್ ತುಳಿಯುವುದು ಕಲಿತಿದ್ದಳು. ಬರೆಯುವುದು ಭಾಷಣ ಮಾಡುವುದು, ಕಸೂತಿ ಕೆಲಸ ಮಾಡುವುದರಲ್ಲಿ ಮುಂದಿದ್ದರು. ಇವರ ದೊಡ್ಡಪ್ಪ ಹರಿ ಚಂದ್ರಘಟ್ಗಿಯವರು ಮುದ್ರಿಸುತ್ತಿದ್ದ ಕರಪತ್ರ ಬರೆದು ಕೊಡುತ್ತಿದ್ದರು. ತನ್ನ ೧೯ನೇ ವಯಸ್ಸಿನಲ್ಲಿ ಎಂದರೆ ೧೯೨೮ರಲ್ಲಿ ಬಿಳಗಿ ಶ್ರೀವಾಮನಶೆಣ್ಯೆಯವರ ಸೊಸೆಯಾಗಿ ಬಿಳಗಿಗೆ ಬಂದರು. ಮಾವನವರ ಪ್ರೋತ್ಸಾಹದಿಂದ ಪ್ರತಿದಿನ ಬೆಳಿಗ್ಗೆ ಊರ ಹೆಂಗಸರನ್ನು, ಮಕ್ಕಳನ್ನು ಸೇರಿಸಿ ಝುಂಡಾ ವಂದನೆ ಮಾಡಿ, ರಾಷ್ಟ್ರಭಕ್ತಿಗೀತೆಗಳನ್ನು ಕಲಿಸುತ್ತಿದ್ದರು. ಕೆಲವೊಮ್ಮೆ ಪೋಲೀಸರು ಬಂದು ಮಕ್ಕಳನ್ನು ಹೆದರಿಸಿ ಸ್ಟೇಷನ್ನಿಗೆ ಕರೆದೊಯ್ಯುವುದು, ಸಂಜೆ ಆಗುವ ತನಕ ಕೂಡ್ರಿಸಿ ಉಪವಾಸದಿಂದ ಮಕ್ಕಳು ಅತ್ತಮೇಲೆ ನಾಳೆ ಪುನಃ ಈ ಅಪರಾಧ ಮಾಡಿದರೆ ಜೈಲಿಗೆ ಕಳಿಸುವೆ ಎಂದು ಹೆದರಿಸುತ್ತಿದ್ದರು. ಆದರೆ ಸೀತಾಬಾಯಿ ತನ್ನ ಕೆಲಸ ಮುಂದುವರೆಸುತ್ತಿದ್ದರು. ಮೊದಲ ಬಾಣಂತನಕ್ಕೆಂದು ತವರು ಮನೆಗೆ ಹೋಗಿದ್ದರು. ಕರಬಂದಿ ಕಾರಣ ಜಪ್ತಿಯಾದ ಜಾನುವಾರು ತಿರುಗಿಕೊಡುವಂತೆ ಅಕ್ಕುಂಜಿ ಗೌಡರ ಮನೆ ಮುಂದೆ ಕೆಲ ಹೆಂಗಸರು ಉಪವಾಸ ಕುಳಿತ ಸಂಗತಿ ತಿಳಿದು, ಎರಡು ತಿಂಗಳ ಬಾಣಂತಿ ಸೀತಾಬಾಯಿ ತನ್ನ ದೊಡ್ಡಮ್ಮ ಸತ್ಯಭಾಮಾರವರನ್ನು ಕರೆದುಕೊಂಡು ಅಕ್ಕುಂಜಿ ಗೌಡರ ಮನೆಮುಂದೆ ಉಪವಾಸಕ್ಕೆ ಕುಳಿತರು. ಎರಡನೇ ದಿನ ಇವರಿಗೆ ಕಣ್ಣು ಕತ್ತಲೆ ಬಂದು ಬಿದ್ದು ಬಿಟ್ಟರು.

ಪೊಲೀಸರು ಸಹಾಯಕ್ಕೆ ಬಂದರೆ ಜಾನುವಾರು ಹಿಂತಿರುಗಿಸಿ ಅಥವಾ ನನಗೆ ಜೈಲಿಗೆ ಕಳಿಸಿ ಎಂದು ಹಟ ಹಿಡಿದರು. ಗೌಡರು ದನವನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಿದರು.

೧೫ ದಿನ ಕಳೆಯುತ್ತಲೇ ಅತ್ತೆ ಶ್ರೀಮತಿ ಲಕ್ಷ್ಮೀಬಾಯಿಯವರನ್ನು ಕರೆಯಿಸಿಕೊಂಡು ಮುರುಘಾ ಮಠ ಅಯ್ಯನವರ ಮನೆ ಮುಂದೆ ಉಪವಾಸ



ಸತ್ಯಾಗ್ರಹಕ್ಕೆ ಕುಳಿತರು. ೪ ದಿನಗಳ ನಂತರ ಶ್ರೀಮತಿ ಲಕ್ಷ್ಮೀಬಾಯಿಯವರನ್ನು ಬಂಧಿಸಿ ಜೈಲಿಗೆ ಕಳಿಸಿದರು. ಆರನೇ ದಿನ ಮುರುಗಾಮಠ ಅಯ್ಯನವರು ಜಪ್ತಿಯ ಲಿಲಾವಿನಲ್ಲಿ ಖರೀದಿಸಿದ ಮಾಲನ್ನು ಹಿಂತಿರುಗಿಸಿದರು. ಬಿಳಗಿಗೆ ಹಿಂತಿರುಗಿದ ಸೀತಾಬಾಯಿಯವರು ಪುನಃ ಝುಂಡಾವಂದನೆ ಹಾಗೂ ರಾಷ್ಟ್ರೀಯ ಪದ್ಯ ಕಲಿಸುವ ಕ್ರಮ ಪ್ರಾರಂಭಿಸಿದರು. ಕರಬಂದಿಯಿಂದ ಲೀಲಾವಾದ ಮಾಲು ಬಿಡಿಸಿಕೊಳ್ಳಲು ಖರೀದಿದಾರರಮನೆ ಮುಂದೆ ಧರಣಿ ಕೂಡಲು ಬಿಳಗಿಯಲ್ಲಿ ಮಹಿಳೆಯರ ಗುಂಪೊಂದನ್ನು ಕಟ್ಟಿದರು. ಗಾಂಜಾ ಅಂಗಡಿ ಅನಂತರಾಯರ ಮನೆ ಮುಂದೆ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದಾಗ ಇವರ ಸಹವರ್ತಿ ಶ್ರೀಮತಿ ದೇವಯಾನಿ ಪೈಯವರ ತೊಡೆಯ ಮೇಲಿದ್ದ ಮಗುವನ್ನು ಕಾಲುವೆಗೆ ದೂಡಿ ಕೆಡವಿದ್ದರಿಂದ ಹೆಂಗಳೆಲ್ಲರೂ ಹೆದರಿದರು. ಇದಕ್ಕಿಂತ ಜೈಲು ಸೇರುವುದೇ ಒಳಿತೆಂದು ಅನಿಸಿ ಶ್ರೀಮತಿ ಸೀತಾಬಾಯಿಯವರು ಭುವನಗಿರಿಯ ಅರಣ್ಯದಲ್ಲಿ ಸತ್ಯಾಗ್ರಹದಲ್ಲಿ ಭಾಷಣ ಮಾಡಿ ಕೈದಿಯಾಗಿ, ೬ ತಿಂಗಳು ಜೈಲು ಶಿಕ್ಷೆ ಅನುಭವಿಸಿದರು. ಜೈಲಿಗೆ ಹೋಗುವಾಗ ೫ ತಿಂಗಳ ಮಗು ರಮಾಕಾಂತನನ್ನು ಕಂಕುಳಲ್ಲಿ ಇಟ್ಟುಕೊಂಡು ಜೈಲು ಸೇರಿದರು.

ಜೈಲು ಆಹಾರ ಕ್ರಮದಿಂದ ಮಗನಿಗೆ ವಾಂತಿ ಭೇದಿ ಆರಂಭವಾಯಿತು. ಮಗು ಅಶಕ್ತನಾಗಿ ಸಾಯುವ ಸ್ಥಿತಿ ತಲುಪಿತು. ಸುದ್ದಿತಿಳಿದ ಶ್ರೀಮತಿ ಸರೋಜಿನಿನಾಯ್ಡು ಮಗುವನ್ನು ತನ್ನ ಮಡಿಲಿಗೆ ಪಡೆದು ಆರೈಕೆ ಮಾಡಿದರು. ಮಗುವಿನ ಅನಾರೋಗ್ಯ ವಿಪರೀತಕ್ಕೆ ಹೋದಾಗ ಮುಂಬಯಿ ಹೈಕೋರ್ಟ್ ಜಡ್ಜ್ ಗೋವಿಂದರಾಯ ಶೆಣ್ಯೆಯವರ ಪತ್ನಿ ಶಾಂತಾ ಶೆಣ್ಯೆ ರವರಿಗೆ ಕರೆ ಮಾಡಿ ಸ್ಥಿತಿ ತಿಳಿಸಿದರು. ಸಾಮಾನ್ಯ ಕೈದಿಯಾದ ಶ್ರೀಮತಿ ಸೀತಾಬಾಯಿಯವರು ಪ್ರತಿದಿನ ಇತರ ಕೈದಿಗಳಿಗಾಗಿ ಎರಡು ಚಡ್ಡಿ, ಎರಡು ಅಂಗಿ ಹೊಲಿಯಬೇಕಾಗಿತ್ತು. ಬಟ್ಟೆ ಹೊಲಿಯಲು ಬಾರದ ಕೈದಿಗಳ ಕೆಲಸ ತಾವೇ ಮಾಡಿ ಮಗುವನ್ನು ಸಂಭಾಳಿಸಲು ಅವರಿಗೆ ಹಚ್ಚುತ್ತಿದ್ದರು. ಅಂಕೋಲಾದಿಂದ ಬಂದ ಕೈದಿಗಳಿಗೆ ಕುಪ್ಪಸ ತೊಡುವ ಅಭ್ಯಾಸವಿರಲಿಲ್ಲ ತನ್ನ ಸೀರೆ ತುಂಡನ್ನು ತೆಗೆದು ಅವರಿಗೆ ಕುಪ್ಪಸ ತಯಾರಿಸಿಕೊಟ್ಟರು. ಆ ಮೊದಲು ತಲೆ ಕೂದಲು ಕತ್ತರಿಸಿಕೊಂಡ ವಿಧವೆಯರಿಗೆ ಕೂದಲು ಅಡ್ಡಾದಿಡ್ಡಿ ಬೆಳೆದು ತೊಂದರೆ

ಪಡುತ್ತಿದ್ದರು. ಅವರ ಕೂದಲು ಕತ್ತರಿಸುವ ಕೆಲಸ ಸೀತಾಬಾಯಿ ಮಾಡಿದರು. ಹೀಗೆ ಜನಹಿತ ಕೆಲಸ ಮಾಡಿ ಎಲ್ಲರ ಪ್ರೀತಿಯ ಸಹವರ್ತಿಯಾಗಿದ್ದರು.

ಜೈಲು ಶಿಕ್ಷೆ ಅನುಭವಿಸಿ ಬಿಳಗಿಗೆ ಹಿಂತಿರುಗುತ್ತಲೇ ಪ್ರಮುಖ ಕೆಲಸ ಸೀತಾಬಾಯಿಯವರು ವಹಿಸಿಕೊಂಡರು. ವಾರಕ್ಕೆ ಎರಡು ಸಲ ನಡೆದುಕೊಂಡು ಸಿದ್ದಾಪುರಕ್ಕೆ ಹೋಗಿ ಕರಪತ್ರ ಸಮಾಚಾರ ಬಿಳಗಿಗೆ ತರುವುದು. ಬಿಳಗಿಯ ಮುದ್ರಿತ ಕರಪತ್ರ ಸಿದ್ದಾಪುರಕ್ಕೆ ತಲುಪಿಸುವುದು. ಪ್ರತಿಸಲ ಕಾಡು ದಾರಿಯಲ್ಲಿ ೮ ಮೈಲು ದೂರ ಮಗುವನ್ನು ಕಂಕುಳಲ್ಲಿ ಹಿಡಿದು ಓಡಾಡಬೇಕಾಗಿತ್ತು. ಪ್ರತಿಸಲ ಒಂದು ದಿನಕ್ಕೆ ೧೬ ಮೈಲು ಓಡಾಟವಿದ್ದಿತು. ಕೆಲವೊಮ್ಮೆ ಪರಿಚಿತರು ಅಥವಾ ಆಳು ಮಕ್ಕಳು ಜೊತೆಯಲ್ಲಿ ಇರುತ್ತಿದ್ದರು. ಅಲ್ಲವಾದರೆ ಓರ್ವಳೇ ಹೆಂಗಸು ಕಾಡುದಾರಿಯಲ್ಲಿ ನಡೆಯಬೇಕಾಗಿತ್ತು. ಈ ಕೆಲಸ ಸತತ ೬ ವರ್ಷ ಸೀತಾಬಾಯಿಯವರು ನಿರ್ವಹಿಸಿದರು.

ಶ್ರೀಮತಿ ಸೀತಾಬಾಯಿಯವರ ಮನೆಯಿಂದ ವಿವಿಧ ಚಳವಳಿ ಎಂದು ೧೪ ಮಂದಿ ಭಾಗವಹಿಸಿದವರಲ್ಲಿ ಇಬ್ಬರು ಹೆಂಗಸರು ಸೇರಿ ೧೧ ಮಂದಿ ಜೈಲುವಾಸ ಅನುಭವಿಸಿದರು. ಇವರ ಮನೆ ಮೂರು ಸಲ ಜಪ್ತಿಯಾಗಿ ಪೋಲೀಸರು ಬೀಗ ಹಾಕಿದರು. ಪೋಲೀಸರು ಮನೆ ಬೀಗ ಹಾಕಿದಾಗ ಬಿಳಗಿಯಿಂದ ಒಂದು ಮೈಲು ದೂರದ ಮೂರು ಕೋಡಿ ಹೊಳೆದಂಡೆಯ ಮೇಲೆ ಹೆಂಗಸರು–ಮಕ್ಕಳು ಸೇರಿ ೨೦ ದಿನಗಳಿಗಿಂತ ಹೆಚ್ಚು ಕಾಲ ವಾಸ ಮಾಡಬೇಕಾಯಿತು. ಕಾಡಿನಲ್ಲಿ ಹಗಲು ರಾತ್ರಿ ಯೆನ್ನದೆ ಮಕ್ಕಳಿಗೆ ಸೊಳ್ಳೆ–ಜಿಗಣೆ–ಉಂಬಳ ಕಾಟವಾದರೆ, ಹೆಂಗಸರು ಇಲಿ–ಹಾವು–ನರಿ– ಹಂದಿ ಕಾಟದಿಂದ ಬಳಲಿದರು. ಮನೆಯಲ್ಲಿದ್ದ ನಾಲ್ವರು ಗಂಡಸರ ಮೇಲೆ ಪೋಲೀಸ್ ವಾರಂಟ್ ಇದ್ದಿತ್ತು. ಅವರು ಕಾಡು ಮೇಡು ಅಲೆಯುವಂತಾಗಿತ್ತು. ಆಳು ಮಗನಿಂದ ಊರ ಪರಿಸ್ಥಿತಿ ತಿಳಿದು ಕೊಳ್ಳಲಾಗುತ್ತಿತ್ತು. ಶ್ರೀಮತಿ ಸೀತಾಬಾಯಿಯವರಿಗೆ ಆರು ಮಕ್ಕಳು. ಅವರಲ್ಲಿ ಈ ಲೇಖಕನೂ (ಪದ್ಮಾಕರ ಮಡಗಾಂವಕರ) ನಾನು ಓರ್ವ. ತಮ್ಮ ೭೮ ವರ್ಷದಲ್ಲಿ ಬಿಳಗಿಯ ಸ್ವಗೃಹದಲ್ಲಿ ಸ್ವರ್ಗಸ್ತರಾದರು.



## ೭) ಶಿರಳಗಿ ಶ್ರೀ ಸುಬ್ರಾಯ ಭಟ್ಟ

ಶಿರಳಗಿಯ ಶ್ರೀಬೆಳ್ಳಿ ಭಟ್ಟರು ತಮ್ಮ ಏಕೈಕ ಪುತ್ರಿಯ ಮಗ ಸುಬ್ರಾಯನನ್ನು ದತ್ತು ಪಡೆದರು. ಅವರೇ ಸುಬ್ರಾಯ ಭಟ್ಟ. ಇವರು ಹುಟ್ಟಿ ಬೆಳೆದ ಶಿರಳಗಿಯಲ್ಲಿಯೇ ಪ್ರಾಥಮಿಕ ೪ನೇ ವರ್ಗ ಕಲಿತರು ರೈತಾಪಿಯಲ್ಲಿ ಹಾಗೂ ವ್ಯಾಪಾರ–ವ್ಯವಹಾರಗಳಲ್ಲಿ ಜಾಣರು. ಮೃದು ಸ್ವಭಾವದ, ಸದಾ ಇತರರಿಗೆ ಸಹಾಯ ಮಾಡುವ ಪ್ರವೃತ್ತಿ, ಕಲೆ–ಸಾಹಿತ್ಯ–ಯಕ್ಷಗಾನದಲ್ಲಿ ಅಭಿರುಚಿ ಉಳ್ಳವರು, ತಾವು ಬೆಳೆಸಿದ ಹಾಗೂ ಖರೀದಿಸಿದ ಅಡಿಕೆ ಕಾಳು–ಮೆಣಸು–ಏಲಕ್ಕಿ ವ್ಯಾಪಾರಕ್ಕಾಗಿ ಮುಂಬಯಿ ಅಹ್ಮದಾಬಾದ್ ಓಡಾಡಿ ಹಿಂದಿ–ಮರಾಠಿಯನ್ನು ಕಲಿತು ಲೋಕಮಾನ್ಯತಿಲಕರ ಕೇಸರಿ ಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಂಡರು.

ಬ್ರಿಟಿಷ್ ಸರಕಾರದ ಅರಣ್ಯ ಕಟ್ಟಳೆಯ ನಿಯಮಗಳಿಂದ ಬೇಸರಗೊಂಡು ಸ್ವಾತಂತ್ರ್ಯ ಚಳವಳಿಗೆ ಪ್ರವೇಶಿಸಿದರು. ಜನ ಸಂಪರ್ಕ ಕಲೆ ಇವರಿಗೆ ರಕ್ತಗತವಾಗಿತ್ತು. ಊರಲ್ಲಿ ಸರಕಾರ ವಿರೋಧಿ ಘೋಷಣೆ ಕೂಗಲು ಅನುಕೂಲ ಹಾಗೂ ಜನರನ್ನು ಒತ್ತಟ್ಟಿಗೆ ಸೇರಿಸುವುದು ಸುಲಭ ಉಪಾಯವೆಂದು ಪ್ರಭಾತ ಫೇರಿ ಹೋಗುವ ಕ್ರಮ ಆರಂಭಿಸಿ –ಝುಂಡಾ ವಂದನೆ ಮುಗಿದ ನಂತರ ಇವರು ಯಕ್ಷಗಾನ ವೇಷ ಧರಿಸಿ ಕುಣಿಯುವ ಕ್ರಮ ಪ್ರಾರಂಭಿಸಿದರು. ತಿಲಕರ ಪ್ರಭಾವಕ್ಕೆ ಒಳಗಾಗಿ ಹೋಂ ರೂಲ್ ಚಳವಳಿ ಪ್ರಚಾರ ಮಾಡಿದರು. ಅಸಹಕಾರ ಚಳವಳಿಯಿಂದ ಪೋಲೀಸರ ಮನವೊಲಿಸಿ ೧೫ ಪೊಲೀಸರು ಸರಕಾರಿ ಹುದ್ದೆ ತ್ಯಜಿಸುವಂತೆ ಮಾಡಿದರು. ಉಪ್ಪಿನ ಚಳವಳಿ ಪ್ರಚಾರಕ್ಕಾಗಿ ಅರುಣೋದಯ ಪಥದಲ್ಲಿ ಪಾಲ್ಗೊಂಡು ಅಂಕೋಲಾ ತನಕ ನಡೆದು ಹೋದವರು

ಸಿದ್ದಾಪುರ ಕಾಂಗ್ರೇಸ್ ಸಮಿತಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಾ ಸಿದ್ದಾಪುರದಲ್ಲಿ ರಾಷ್ಟ್ರೀಯ ಶಾಲೆ ಪ್ರಾರಂಭಿಸಿದರು. ಹಬೀಬುಲ್ಲಾ ಖಾನರ ಸ್ಪೂರ್ತಿದಾಯಕ ಭಾಷಣ ಕೇಳಿದ ನಂತರ ವಿದೇಶಿ ವಸ್ತು ಬಹಿಷ್ಕಾರ ಚಳವಳಿಯ ಸಕ್ರಿಯ ಕಾರ್ಯಕರ್ತರಾದರು. ಈ ದಿಶೆಯಲ್ಲಿ ಮಹಿಳೆಯರನ್ನು ಪ್ರೇರಿಸಿ ಖಾದಿ ಬಟ್ಟೆ ಪ್ರಚಾರ ಪ್ರಾರಂಭಿಸಿದರು. ನಿತ್ಯ ಬಳಕೆಯ ಸಕ್ಕರೆಯನ್ನು

ನಿಶೇಧಿಸಿದರು. ಭಾರತ ರಾಷ್ಟ್ರೀಯ ಚಳವಳಿಗೆ ಪೂರಕವಾಗುವಂತೆ ಸೇವಾದಳ ಶಿಬಿರ ಗಳನ್ನು ಏರ್ಪಡಿಸಲು ಡಾ। ಹರ್ಡಿಕರರು ಪ್ರಾರಂಭಿಸಿರುವುದು ತಿಳಿದ ಶ್ರೀ ಸುಬ್ರಾಯ ಭಟ್ಟರು ವಿಜಾಪುರದ ಸೀತೆಮನೆಯಲ್ಲಿ ಶಿಬಿರಕ್ಕೆ ಸೇರಿ ೩ ತಿಂಗಳು ತರಬೇತಿ ಪಡೆದು ಸಿದ್ದಾಪುರಕ್ಕೆ ಹಿಂತಿರುಗಿ ತಾವು ಇಲ್ಲಿ ಸ್ವಯಂ ಸೇವಕರಿಗೆ ತರಬೇತಿ ನೀಡಿದರು. ಬೆಳಗಾಂವ ಕಾಂಗ್ರೇಸ್ ಅಧಿವೇಶನಕ್ಕೆ ಸ್ವಯಂಸೇವಕರಾಗಿ ಹೋಗಿ ದುಡಿದು ಹಲವು ರಾಷ್ಟ್ರೀಯ ನಾಯಕರ ಪರಿಚಯ ಮಾಡಿಕೊಂಡರು. ಸಿರಸಿ–ಸಿದ್ದಾಪುರ ತಾಲೂಕಿನ ಹವ್ಯಕ ಸಮಾಜದ ಹಲವು ಯುವಕರನ್ನು ಕಾಂಗ್ರೆಸ್ ಸದಸ್ಯರನ್ನಾಗಿ ಮಾಡಿ ಕಾಂಗ್ರೆಸ್ ನಿಧಿ ಸಂಗ್ರಹಣೆಗೆ ಪ್ರೋತ್ಸಾಹ ನೀಡಿದರು. ಚಳವಳಿಯ ಸ್ವಯಂಸೇವಕರು ಇವರ ಮನೆಗೆ ಹೋಗಿ ಬರುತ್ತಿರುವುದರಿಂದ ಇವರ ಮನೆ ಒಂದು ಧರ್ಮಛತ್ರವೇ ಆಗಿತ್ತು.

ಅರಣ್ಯ ಸತ್ಯಾಗ್ರಹ, ಕರ ನಿರಾಕರಣೆ ಸತ್ಯಾಗ್ರಹ, ಅಸಹಕಾರ ಚಳವಳಿಯಲ್ಲಿ ಭಾಗಿಯಾದ ಶ್ರೀ ಸುಬ್ರಾಯಭಟ್ಟರನ್ನು ಬಂಧಿಸಲು ಪೊಲೀಸರು ನೆಪ ಒಂದನ್ನು ಹುಡುಕುತ್ತಿದ್ದರು. ತಾಲೂಕಿನ ೧೫ ಪೋಲೀಸರು ರಾಜೀನಾಮೆ ನೀಡಿದಾಗ, ಸುಬ್ರಾಯ ಭಟ್ಟರ ಒತ್ತಾಯಕ್ಕೆ ಅವರು ರಾಜೀನಾಮೆ ನೀಡಿದರೆಂದು ನಮೂದಿಸಿ ರಾಜದ್ರೋಹ ಆಪಾದನೆಯ ಮೇರೆಗೆ ಇವರನ್ನು ಬಂಧಿಸಲಾಯಿತು. ಭಟ್ಟರಿಗೆ ೪ ತಿಂಗಳ ಜೈಲು ವಾಸವಾಯಿತು. ಅಲ್ಲಿ ಇವರಿಗೆ ದಾಂಡೇಲಿಯ ಶ್ರೀ ಕೆ.ಎನ್. ರಾವ್ ಅವರ ಗೆಳೆತನ ಬೆಳೆಯಿತು. ಅವರು ಸುಭಾಶ್ ಚಂದ್ರಬೋಸರ ಐಎನ್ಎದಲ್ಲಿ ಕೆಲಸ ಮಾಡಿದ ನಿವೃತ್ತ ಸೈನಿಕರಾಗಿದ್ದರು. ಶ್ರೀಮತಿ ಪಾರ್ವತಿ ಸುಬ್ರಾಯ ಭಟ್ಟರಿಗೆ ಸಿದ್ದಾಪುರ ಮುರ್ಗಿಮಠ ಪೂಜಾರಿ ಮನೆ ಎದುರು ಧರಣಿ ಸತ್ಯಾಗ್ರಹಕ್ಕೆ ಕೂತರೆಂದು ಬಂಧಿಸಿ ೩ ತಿಂಗಳು ಜೈಲು ಶಿಕ್ಷೆ ವಿಧಿಸಲಾಗಿತ್ತು. ಅದನ್ನು ಅವರು ಕಾರವಾರ ಜೈಲಿನಲ್ಲಿ ಅನುಭವಿಸಿದರು. ಶ್ರೀ ಸುಬ್ರಾಯಭಟ್ಟರು ಜೈಲಿನಿಂದ ಬಿಡುಗಡೆಯಾಗಿ ಊರಿಗೆ ಹಿಂತಿರುಗುವ ಮೊದಲೇ ಅವರ ವ್ಯಾಪಾರ ಹಾನಿಯಿಂದ ಮಾಡಿದ ಸಾಲಕ್ಕೆ ಮನೆ ಹರಾಜಾಗಿ ಹೋಗಿತ್ತು. ಸಿದ್ದಾಪುರದಲ್ಲಿ ಅವರ ಸಂಬಂಧಿಕರೋರ್ವರು ಕಟ್ಟಿಸಿದ ಹೊಸ ಮನೆಯನ್ನು ಬಾಡಿಗೆ ಪಡೆದು ವಾಸ ಮಾಡಿದರು.

ಅನಂತರವೂ ಸುಬ್ರಾಯ ಭಟ್ಟರ ಮೇಲೆ ಪೊಲೀಸ್ ವಾರಂಟ್ ಇದ್ದಿತ್ತು. ಭಟ್ಟರು ಭೂಗತರಾಗಿಯೇ ಕೆಲಸ ಮಾಡತೊಡಗಿದರು. ಒಮ್ಮೆ



ಕನ್ನಳ್ಳಿಯಲ್ಲಿರುವುದನ್ನು ತಿಳಿದು ಪೊಲೀಸರು ಆಗಮಿಸುತ್ತಲೇ ಮನೆಯ ಮೂರನೇ ಮಾಳಿಗೆಯಿಂದ ಜಿಗಿದು ಕಾಡಿಗೆ ಸೇರಿದರು. ಒಮ್ಮೆ ಇವರು ಕಾನಸೂರಿನಲ್ಲಿ ಇರುವುದು ಪತ್ತೆ ಹಚ್ಚಿದ ಪೊಲೀಸರು ಬಂಧಿಸಲು ಅಲ್ಲಿಗೆ ತಲುಪಿದಾಗ ಸುಬ್ರಾಯಭಟ್ಟರು ಸಮೀಪದ ಭಾವಿಯಲ್ಲಿಳಿದು ಒಂದು ದಿನ ಅಲ್ಲೇ ಕಳೆದು ಮರುದಿನ ಹೊರಬಂದರು. ಮತ್ತೊಮ್ಮೆ ಹಿರೆಕೈ ಭಟ್ಟರ ಮನೆಯಲ್ಲಿರುವಾಗ ಪೊಲೀಸರು ಬಂದರೆಂದು ಮಾಳಿಗೆ ಕೋಣೆಯ ಕತ್ತಲಿನಲ್ಲಿ ಅಡಗಿದ್ದರು. ಪೊಲೀಸರು ಇವರನ್ನು ಹುಡುಕಿದರೆ ಸಿಗಲಿಲ್ಲವೆಂದು ಮನೆಗೆ ಬೀಗ ಹಾಕಿ ಹೋದರು. ಒಮ್ಮೆ ಶಿರಳಗಿ ಶ್ರೀ ನರಸಿಂಹ ದೇವಸ್ಥಾನದಲ್ಲಿ ಕಾಂಗ್ರೆಸ್ ಕಮಿಟಿ ವತಿಯಿಂದ ಸತ್ಯನಾರಾಯಣ ವೃತಕಥೆ ಇಟ್ಟು ಕೊಳ್ಳಲಾಗಿತ್ತು. ಆ ಕಾರ್ಯಕ್ರಮಕ್ಕೆ ಸುಬ್ರಾಯ ಭಟ್ಟರು ಬಂದೇ ಬರುವರೆಂದು ಇಬ್ಬರು ಸಶಸ್ತ್ರಪೋಲೀಸರು ದೇವಸ್ಥಾನಕ್ಕೆ ಬಂದು ಕುಳಿತಿದ್ದರು. ರಾತ್ರಿ ೮ ಘಂಟೆ ನಂತರ ಭಟ್ಟರು ವೇಷ ಮರೆಸಿಕೊಂಡು ಅಲ್ಲಿಗೆ ಬಂದಿರುವುದು ಪೊಲೀಸರಿಗೆ ತಿಳಿಯಿತು. ಪೊಲೀಸರು ಬೆನ್ನು ಬಿದ್ದಂತೆ ಸುಬ್ರಾಯ ಭಟ್ಟರು ಸಮೀಪ ಕೆರೆಗೆ ಹಾರಿದರು. ಅಷ್ಟರಲ್ಲಿ ಓರ್ವ ಪೊಲೀಸ್ ಅವರತ್ತ ಗುಂಡು ಹಾರಿಸಿದ ಹಾಗೂ ಕೆರೆಸುತ್ತಲೂ ಇವರನ್ನು ಹುಡುಕಾಡಿದ. ಭಟ್ಟರು ಸಿಗಲೇ ಇಲ್ಲ. ಅವರು ಸತ್ತಿರ ಬೇಕು ನಾಳೆ ಬೆಳಿಗ್ಗೆ ಹೆಣ ಹುಡುಕುವ ಎಂದು ಪೊಲೀಸರು ಹಿಂತಿರುಗಿದರು. ಇತ್ತ ಸುಬ್ರಾಯ ಭಟ್ಟರು ಕೆರೆ ಈಜಿ ಕಾಡು ಸೇರಿ ೪ ಮೈಲು ನಡೆದು ಕಡಗಳಲೆ ತಲುಪಿದರು. ಒಂದುವಾರ ಅತ್ತವೇ ಕಳೆದು ಊರಿಗೆ ಹಿಂತಿರುಗಿದರು. ಭಾರಕ್ಕೆ ಸ್ವಾತಂತ್ರ್ಯ ಸಿಗುವ ತನಕ ಸುಬ್ರಾಯ ಭಟ್ಟರು ಪೊಲೀಸರಿಗೆ ಸಿಗಲೇ ಇಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರವೂ ಶ್ರೀ ಸುಬ್ರಾಯ ಭಟ್ಟರು ಸಕ್ರಿಯ ಕಾಂಗ್ರೆಸ್ ಕಾರ್ಯಕರ್ತರಾಗಿ ಜನಸೇವೆ ಮಾಡಿದರು. ಜನಸಂಪರ್ಕವನ್ನು ಕಾದುಕೊಂಡಿದ್ದರು. ಇವರ ಹಿರಿಯ ಮಗ ರಾಮಚಂದ್ರ ನ್ಯಾಯವಾದಿಯಾಗಿ ಕೆಲಸ ಮಾಡುವವರ ಜೊತೆಗೆ ಸ್ವಾತಂತ್ರ್ಯ ಚಳವಳಿಯ ಇತಿಹಾಸವನ್ನು ಸಂಗ್ರಹಿಸಿ ಪುಸ್ತಕಗಳನ್ನು ಹೊರ ತರಲು ಪ್ರಯತ್ನಿಸಿದರು. ೧೮೮೯ರಲ್ಲಿ ಜನ್ಮತಳೆದ ಶ್ರೀ ಸುಬ್ರಾಯ ಭಟ್ಟರು ಹಲವು ಜನಹಿತ ಕೆಲಸಗಳನ್ನು ಮಾಡುತ್ತಲೇ ೧೯೫೫ರ ಜನವರಿಯಲ್ಲಿ ಸ್ವರ್ಗಸ್ಥರಾದರು.

## ೮) ತೂಕದಾರ ಶ್ರೀ ಕೃಷ್ಣ ಸುಬ್ರಾಯ ಮರಾಠೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಚಳವಳಿ ಪ್ರಾರಂಭವಾಗಿದ್ದು ೧೯೨೧ರಿಂದ. ಆಗ ತೂಕದಾರ ಕೃಷ್ಣ ಮರಾಠೆಯವರು ಪ್ರಾಥಮಿಕ ಶಾಲಾ ವಿಧ್ಯಾರ್ಥಿ. ಇವರಿಗೆ ಚರ್ಚಾಕೂಟದಲ್ಲಿ, ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸುವಲ್ಲಿ ಅತೀವ ಆಸಕ್ತಿ. ಹೀಗಾಗಿ ಸಿರಸಿಗೆ ಆಗಮಿಸಿದ ರಾಷ್ಟ್ರೀಯ ಮುಖಂಡರ ಭಾಷಣ ಕೇಳಲು ತಪ್ಪಿಸದೆ ಹೋಗುತ್ತಿದ್ದರು.

ಶ್ರೀ ಗಂಗಾಧರರಾವ್ ದೇಶಪಾಂಡೆ, ಶ್ರೀ ಹನುಮಂತರಾವ್ ಕೌಜಲಗಿಯವರ ಸ್ಫೂರ್ತಿದಾಯಕ ಭಾಷಣಗಳನ್ನು ಕೇಳಿದಾಗ ಭಾರತ ಸ್ವಾತಂತ್ರ್ಯ ಚಳವಳಿಯ ಕಲ್ಪನೆ ಇವರಿಗೆ ಮೂಡಿತು. ೮ ವರ್ಷ ಪ್ರಾಯದಲ್ಲಿ ಗೆಳೆಯರ ಗುಂಪು ಕಟ್ಟಿಕೊಂಡು ಪ್ರಭಾತ ಫೇರಿಯಲ್ಲಿ ಭಾಗವಹಿಸಿ ಬ್ರಿಟಿಷ್ ವಿರೋಧಿ ಘೋಷಣೆ ಕೂಗುವುದು ಪ್ರಾರಂಭಿಸಿದರು. ವಿದೇಶಿವಸ್ತ್ರ–ವಸ್ತು ಹೋಳಿಯಾಡುವುದನ್ನು ಕಂಡಾಗ ಮನಸ್ಸಿನಲ್ಲಿ ಹೊಸತನ ಮೂಡಿತು. ಹೊಸ ವಿಷಯ ಪರಿಚಯಿಸಿತು. ಕೀರ್ತನ ಕೇಸರಿ ಶ್ರೀ ಜಯರಾಮಾಚಾರ್ಯರ ಸುಶ್ರಾವ್ಯ ಸಂಗೀತ ಹಾಗೂ ಪೌರಾಣಿಕ ವ್ಯಕ್ತಿಗಳನ್ನು ಇಂದಿನ ಮುಖಂಡರನ್ನು ಹೋಲಿಸಿ ಮಾತನಾಡುವುದು ಇವರ ಮನಸ್ಸಿನ ಮೇಲೆ ತೀವ್ರಪರಿಣಾಮ ಬೀರಿತು. ಇವರೊಡನೆ ಕೆಲ ಗೆಳೆಯರು ಸರಕಾರಿ ಶಾಲೆ ತೊರೆದು ರಾಷ್ಟ್ರೀಯ ಶಾಲೆ ಸೇರಲು ನಿರ್ಧರಿಸಿದರು. ಇದು ಅವರ ಹಿರಿಯರ ಮನಸ್ಸಿಗೆ ಸರಿ ಎನ್ನಿಸಲಿಲ್ಲ. ಆದರೂ ಹಟಬಿಡದೇ ರಾಷ್ಟ್ರೀಯ ಶಾಲೆ ಸೇರಿದರು.

ಭಾರತೀಯ ಸೇವಾದಳ ಸೇರಿ ಸ್ವಯಂ ಸೇವಕರಾದರು. ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹಕ್ಕೆ ಹೊರಟ "ಅರುಣೋದಯ ಪಥ"ದೊಡನೆ ಸೇರಿ ಅಂಕೋಲಾ ತಲುಪಿ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಇವರು ಅಪ್ರಾಯಸ್ಥರು ಎಂದು ಬಂಧಿಸಲಿಲ್ಲ. ಉಪ್ಪನ್ನು ಸಿರ್ಸಿಗೆ ತಂದು ಬಹಿರಂಗವಾಗಿ ಮಾರುತ್ತಿದ್ದರೂ ಪುನಃ ಅಪ್ರಾಯಸ್ಥರೆಂದು ಬಂಧಿಸಲಿಲ್ಲ. ಮೇ ತಿಂಗಳಿನಲ್ಲಿ ಸೆರೆ ಅಂಗಡಿ ಎದುರು ಪಿಕೆಟಿಂಗ್ ಮಾಡಿದಾಗಲೂ ಅಪ್ರಾಯಸ್ಥ ಎಂಬ ಶ್ರೀರಕ್ಷೆ ದೊರೆಯಿತು. ಆದರೆ ಸೆರೆ ಅಂಗಡಿ ಮಾಲೀಕ ಜನರತ್ತ ಕಲ್ಲುಗಳನ್ನು ಬೀಸಿದ. ಅವು ಹಲವರಿಗೆ ತಾಗಿ ಘಾಯವಾಗಿ ರಕ್ತ ಸುರಿಯಿತು. ಜನರು ಅವನ ಅಂಗಡಿಗೆ ಬೆಂಕಿ



ಹಚ್ಚಿದರು. ಮುಂದೆ ಆ ಸೆರೆ ಅಂಗಡಿ ಮುಚ್ಚಿಹೋಯಿತು. ಮುಂದಿನ ದಿನಗಳಲ್ಲಿ ಇವರು ಹಾಗೂ ಇವರ ಗೆಳೆಯರು ಸೇರಿ ಭಾರತ ದಾಸ್ಯ ವಿಮೋಚನ ಚಳವಳಿ ಹುರಿದುಂಬಿಸಲು ಭಾಷಣಗಳನ್ನು ಏರ್ಪಡಿಸಲು ನಿರ್ಣಯಿಸಿದರು

೧೯೩೦ ಜುಲೈ ಎರಡನೇ ವಾರ ದಾಸನಕೊಪ್ಪದಲ್ಲಿ ಇವರು ಮಾಡಿದ ಪ್ರಭಾವಿ ಭಾಷಣಕ್ಕೆ ಜನರು ಚಪ್ಪಾಳೆ ತಟ್ಟಿದರು. ಪೊಲೀಸರು ಇವರನ್ನು ಬಂಧಿಸಿದರು. ಒಬ್ಬ ಹುಡುಗನ ಪ್ರಥಮವಾಗಿ ಬಂಧನವಾಗಿದ್ದರಿಂದ ಅವನನ್ನು ಮೆರವಣಿಗೆಯಲ್ಲಿ ಸಿರ್ಸಿಗೆ ಒಯ್ಯಬೇಕೆಂದು ರೋಷ ನುಡಿದರು. ಮೆರವಣಿಗೆ ತಾಲೂಕಾ ಕಚೇರಿ ತಲುಪುವಾಗ ರಾತ್ರೆ ಮೂರುಘಂಟೆಯಾಗಿತ್ತು. ಮರುದಿನ ಕೋರ್ಟ್ ವಿಚಾರಣೆಯಲ್ಲಿ ಇವರಿಗೆ ೬ ತಿಂಗಳು ಸಾದಾ ಜೈಲು ಶಿಕ್ಷೆ ವಿಧಿಸಲಾಗಿತ್ತು. ಪುನಃ ೧೯೩೨ರ ಫೆಬ್ರವರಿಯಲ್ಲಿ ಸಿರಸಿಯಲ್ಲಿ ಸೇರಿದ ಬೃಹತ್ ಸಭೆಯಲ್ಲಿ ಭಾಷಣ ಮಾಡಿದರೆಂದು ಬಂಧಿಸಿದರು. ೭ ತಿಂಗಳು ಸಾದಾಜೈಲು ಶಿಕ್ಷೆಯಾಯಿತು.

೧೯೪೨ರ ವೈಯಕ್ತಿಕ ಸತ್ಯಾಗ್ರಹ ಕಾಲಕ್ಕೆ ಸಿರಸಿಯಲ್ಲಿ ಸೇರಿದ ಸಭೆಯಲ್ಲಿ ಸ್ಫೂರ್ತಿದಾಯಕ ಭಾಷಣ ಹಾಗೂ ಸರಕಾರವನ್ನು ಕಟುವಾಗಿ ಟೀಕಿಸಿದರೆಂದು ತೂಕದಾರ ಶ್ರೀಕೃಷ್ಣರನ್ನು ಹಾಗೂ ಗೆಳೆಯ ಶ್ರೀ ಬಳವಂತೆ ವೆಂಕಟರಾವ್ ವಳಕಾರರನ್ನು ಬಂಧಿಸಿದರು. ತೂಕದಾರ ಕೃಷ್ಣರಿಗೆ ೧ ವರ್ಷ ೪ ತಿಂಗಳು, ಶ್ರೀ ಬಳವಂತೆ ಪಳಕಾರರಿಗೆ ೮ ತಿಂಗಳು ಶಿಕ್ಷೆ ವಿಧಿಸಲಾಗಿತ್ತು. ೧೯೪೩ರಿಂದ ಸಿರಸಿ–ಸಿದ್ದಾಪುರ ತಾಲೂಕಿನಾದ್ಯಂತ ಹಲವು ವಿಧ್ವಂಸಕ ಘಟನೆಗಳು ಜರುಗಿದವು. ಶ್ರೀಕೃಷ್ಣ ಮರಾಠೆ ಗೆಳೆಯರ ಬಳಗವು ಹಲವು ಕಡೆ ತಾರ ತಂತಿ ತುಂಡರಿಸುವುದು, ಸರಕಾರಿ ಸೂಚನಾ ಫಲಕಗಳನ್ನು ನಾಶಪಡಿಸುವುದು, ಮುಂತಾದ ಕೆಲಸ ಮಾಡಿದರು. ೧೯೪೫ರ ನಂತರ ಸ್ವಾತಂತ್ರ್ಯ ಚಳವಳಿಯ ತೀವ್ರತೆ ಕಡಿಮೆಯಾಯಿತು. ೧೯೭೦ರ ತನಕ ತೂಕದಾರ ಶ್ರೀ ಕೃಷ್ಣ ಮರಾಠೆಯವರು ಸಕ್ರಿಯ ಕಾಂಗ್ರೆಸ್ ಕಾರ್ಯಕರ್ತರಾಗಿ ಜನಹಿತ ಕೆಲಸ ಮಾಡಿದರು.

❑

## ಆಧಾರ ಗ್ರಂಥಗಳು


೧) ಸ್ವಾತಂತ್ರ್ಯ ಸಂಗ್ರಾಮ ಸ್ಮೃತಿಗಳು ಭಾಗ ೧ ಮತ್ತು ಭಾಗ ೩
ಸಂಪಾದಕರು: ಡಾ॥ ಸೂರ್ಯನಾಥ ಕಾಮತ್

೨) ಸತ್ಯಾಗ್ರಹಿ, ಒಂದು ಜೀವನ ಕಥೆ
ಲೇಖಕ – ಸರ್ದಾರ್ ವೆಂಕಟರಾಮಯ್ಯ


೩) ಸ್ವಾತಂತ್ರ್ಯ ಸಮರ, ಸಾವಿರದ ಹವ್ಯಕರು
ಲೇಖಕರು – ಶ್ರೀ ಮಂಜುನಾಥ ಹೆಗಡೆ ಶಿರಳಗಿ
ಶ್ರೀ ಶ್ರೀಪಾದ ಹೆಗಡೆ ಮಗೇಗಾರ


# ಅನುಬಂಧ

## ಛಾಯಾಚಿತ್ರಗಳು



ಶ್ರೀ ಶಂಕರ ಗುಲ್ವಾಡಿ




ಶ್ರೀ ತಿಮ್ಮಪ್ಪ ನಾಯಕ ಮಾಸ್ತರ



ಸೀತಾಬಾಯಿ ಮಡಗಾಂವಕರ

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ૩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ૩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ૩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ૩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ૩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ૩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ૩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ૩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ૩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ૩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ૩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ૩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ૩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ૩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ૩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ૩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ૩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ૩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ૩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ૩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ૩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ૩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ૩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ૩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ૩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ૩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ૩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ૩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ૩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ૩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ૩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ૩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ૩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ૩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ૩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ૩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |